ತುರುವನೂರು ಹೋಬಳಿಯ ಪುರಾತತ್ವೀಯ ಅಧ್ಯಯನ

(ಎಂ.ಫಿಲ್ ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕ
ಶರತ್‌ಬಾಬು ಕೆ.ಎಸ್.

ಡಾ. ಸಿ.ಎಸ್. ವಾಸುದೇವನ್
ಸಹ ಪ್ರಾಧ್ಯಾಪಕರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೯-೨೦೧೦

800

ತುರುವನೂರು ಹೋಬಳಿಯ ಪುರಾತತ್ವೀಯ ಅಧ್ಯಯನ

(ಎಂ.ಫಿಲ್ ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕ
ಶರತ್‌ಬಾಬು ಕೆ.ಎಸ್.

ಮಾರ್ಗದರ್ಶಕರು
ಡಾ. ಸಿ.ಎಸ್. ವಾಸುದೇವನ್
ಸಹ ಪ್ರಾಧ್ಯಾಪಕರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೯-೨೦೧೦

800

ಮಾರ್ಗದರ್ಶಕರ ದೃಢೀಕರಣ ಪತ್ರ

ತುರುವನೂರು ಹೋಬಳಿಯ ಪುರಾತತ್ವೀಯ ಅಧ್ಯಯನ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಎಂ.ಫಿಲ್. ಪದವಿಗಾಗಿ ಶರತ್‌ಬಾಬು ಕೆ.ಎಸ್. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

C. S. Vasudevan

ಮಾರ್ಗದರ್ಶಕರು

ಸ್ಥಳ : ವಿದ್ಯಾರಣ್ಯ

ದಿನಾಂಕ : ೦೪-೧೦-೨೦೧೦

(ಡಾ. ಸಿ.ಎಸ್. ವಾಸುದೇವನ್)
ಮಾರ್ಗದರ್ಶಕರು ಮತ್ತು ಸಹ ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸಂಶೋಧಕರ ಪ್ರಮಾಣ ಪತ್ರ

ತುರುವನೂರು ಹೋಬಳಿಯ ಪುರಾತತ್ವೀಯ ಅಧ್ಯಯನ ಎಂಬ ಸಂಪ್ರಬಂಧವನ್ನು ಡಾ. ಸಿ.ಎಸ್. ವಾಸುದೇವನ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಶರತ್‌ಬಾಬು ಕೆ.ಎಸ್

ಸ್ಥಳ : ವಿದ್ಯಾರಣ್ಯ

ದಿನಾಂಕ : ೦೪-೧೦-೨೦೧೦

ಸಂಶೋಧಕ

(ಶರತ್‌ಬಾಬು ಕೆ.ಎಸ್.)
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಸಂಕ್ಷೇಪ್ತಗಳು

ಸಂ.	-	ಸಂಪುಟ
ಸಂ.	-	ಸಂಪಾದಕ
ಎ.ಕ.	-	ಎಪಿಗ್ರಫಿಯ ಕರ್ನಾಟಿಕಾ
ಎಂ.ಎ.ಆರ್.	-	ಮೈಸೂರು ಆರ್ಕಿಯೋಲಾಜಿ ರಿಪೋರ್ಟ್
ಇ.ದ.ಸಂ	-	ಇತಿಹಾಸ ದರ್ಶನ ಸಂಪುಟ
ಪು.	-	ಪುಟ
ಪ್ರ.ಸಂ.	-	ಪ್ರಧಾನ ಸಂಪಾದಕ
ಅನು.	-	ಅನುವಾದಕರು

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಈವರೆಗಿನ ಅಧ್ಯಯನಗಳ ಸಮೀಕ್ಷೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವಿಧಾನ

೧.೪. ಈವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಈವರೆಗಿನ ಅಧ್ಯಯನಗಳ ಸಮೀಕ್ಷೆ

ಚಿತ್ರದುರ್ಗ ಜಿಲ್ಲೆಯ ಇತಿಹಾಸದಲ್ಲಿ ತುರುವನೂರು ಹೋಬಳಿ, ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಈ ಹೋಬಳಿಯು ನೈಸರ್ಗಿಕವಾಗಿ ಶ್ರೀಮಂತವಾಗಿದ್ದು, ಆದಿ ಮಾನವನು ವಾಸ ಮಾಡುವುದಕ್ಕೆ ಯೋಗ್ಯವಾದ ನೆಲೆಯನ್ನು ಒದಗಿಸಿದೆ. ಪ್ರಾಚೀನ ಮಾನವನು ಬಿಟ್ಟು ಹೋದ ಶಿಲಾಯುಧಗಳು ದೊರೆತಿವೆ. ಬೃಹತ್ ಶಿಲಾಯುಗ ಕಾಲದಲ್ಲಿ ಶವಸಂಸ್ಕಾರವು ಸಂಸ್ಕೃತಿಯ ಭಾಗವಾಗಿ ಬೆಳೆದುಬಂದಿತು. ಈ ಜನರು ನಿರ್ಮಿಸಿದ ಶಿಲಾ ಸಮಾಧಿಗಳು ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಹರಡಿವೆ. ನವಶಿಲಾಯುಗ ಬೃಹತ್‌ಶಿಲಾಯುಗ ಹಾಗೂ ಚಿತ್ರದುರ್ಗ ಪಾಳೆಯಗಾರರ ಕಾಲಾವಧಿಯಲ್ಲಿ ಅವರ ಸಂಸ್ಕೃತಿಯನ್ನು ಹುಟ್ಟು ಬಂಡೆಗಳ ಮೇಲೆ ರೇಖಾಕೃತಿಗಳನ್ನು ಕೊರೆದು, ಕುಟ್ಟಿ ಮೂಡಿಸಿದ್ದಾರೆ. ಇಂತಹ ಕಲಾತ್ಮಕ ನೆಲೆಗಳನ್ನು ಕಾಣಬಹುದು. ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬ ಪಲ್ಲವರು, ಕಲ್ಯಾಣದ ಚಾಲುಕ್ಯರು, ಕಲ್ಯಾಣದ ಕಲಚೂರಿಗಳು, ವಿಜಯನಗರದ ಅರಸರು, ಚಿತ್ರದುರ್ಗ ಪಾಳೆಯಗಾರರು ಆಳ್ವಿಕೆ ಮಾಡಿದಂತಹ ಪ್ರದೇಶವಾಗಿದೆ. ಅಲ್ಲದೆ ಟಿಪ್ಪು ಮತ್ತು ಹೈದರನ ಪ್ರಭಾವಕ್ಕೊಳಗಾದ ಪ್ರದೇಶ ಕೂಡ ಹೌದು. ಇವರ ಆಳ್ವಿಕೆಯ ಕಾಲಾವಧಿಯಲ್ಲಿ ಬಿಟ್ಟು ಹೋದ ಕೋಟೆ-ಕೊತ್ತಲಗಳು, ದೇವಾಲಯಗಳು, ಶಾಸನಗಳು, ವೀರಗಲ್ಲುಗಳು, ನಾಣ್ಯಗಳು, ಮಡಕೆ ಚೂರುಗಳು ಹಾಗೂ ಮೂರ್ತಿಶಿಲ್ಪಗಳನ್ನು ಕಾಣಬಹುದು.

ಚಿತ್ರದುರ್ಗ ತಾಲ್ಲೂಕಿನ ತುರುವನೂರು ಹೋಬಳಿಯ ಪ್ರದೇಶವನ್ನು ಪುರಾತತ್ವೀಯವಾಗಿ ಸಮಗ್ರ ಅಧ್ಯಯನ ಮಾಡಲು ಆಯ್ದುಕೊಳ್ಳಲಾಗಿದೆ. ಈ ಹೋಬಳಿಯ ಪೂರ್ವಕ್ಕೆ ಬ್ರಹ್ಮಗಿರಿ, ದಕ್ಷಿಣಕ್ಕೆ ಚಂದ್ರವಳ್ಳಿ ನೆಲೆಗಳನ್ನು ಕಾಣಬಹುದು. ಈ ನೆಲೆಗಳಲ್ಲಿ ನಡೆದಂತಹ ಶೋಧನೆ ಮತ್ತು ಉತ್ಖನನಗಳು ಪ್ರಸ್ತುತ ಪ್ರದೇಶದ ಇತಿಹಾಸವನ್ನು ಕಟ್ಟಲು ಸಹಾಯಕವಾಗಿವೆ.

೧.೧. ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನ ಪ್ರದೇಶವಾದ ತುರುವನೂರು ಹೋಬಳಿಯಲ್ಲಿ ಈಗಾಗಲೇ ಶೋಧನೆಗೊಂಡಿರುವ ನೆಲೆಗಳು ಕೆಲವೇ ಕೆಲವು ಮಾತ್ರ. ಈ ನೆಲೆಗಳ ಕುರಿತು ಸಂಕ್ಷಿಪ್ತ ಅಧ್ಯಯನಗಳಾಗಿವೆ. ಆದ್ದರಿಂದ ತುರುವನೂರು ಹೋಬಳಿಯಲ್ಲಿ ಕಂಡುಬರುವ ಪುರಾತತ್ವೀಯ ಆಕರಗಳನ್ನು ಆಧಾರವಾಗಿಟ್ಟುಕೊಂಡು ಸಮಗ್ರವಾಗಿ ಅಧ್ಯಯನ ಮಾಡುವ ಉದ್ದೇಶದಿಂದ ಪ್ರಸ್ತುತ "ತುರುವನೂರು ಹೋಬಳಿಯ ಪುರಾತತ್ವೀಯ ಅಧ್ಯಯನ" ಎಂಬ ವಿಷಯವನ್ನು ಆಯ್ದುಕೊಳ್ಳಲಾಗಿದೆ.

ಬ್ರಹ್ಮಗಿರಿ, ಚಂದ್ರವಳ್ಳಿಯಲ್ಲಿ ಬೃಹತ್ ಶಿಲಾಯುಗದ ಶಿಲಾ ಸಮಾಧಿಗಳು ಶೋಧನೆಗೊಂಡಿದ್ದು, ಈ ನೆಲೆಗಳಿಗೆ ಮಾತ್ರ ಸೀಮಿತವೇ? ಎಂಬ ಸಂಶಯ ಬರುವುದು ಸಹಜ. ಈ ಕೊರತೆಯನ್ನು ತುಂಬಿಸಲು ಅನ್ವೇಷಣೆ ಮಾಡುವುದು ಅಧ್ಯಯನದ ಉದ್ದೇಶ.

ಪ್ರಾಚೀನ ನೆಲೆಗಳು ನೈಸರ್ಗಿಕ ವಿಕೋಪಕ್ಕೆ, ಕೃಷಿ ಮತ್ತು ಇನ್ನಿತರೆ ಕಾರ್ಯಗಳಿಂದ ನಾಶವಾಗುತ್ತಿವೆ. ಪ್ರಸ್ತುತ ಅಳಿದುಳಿದಿರುವ ಅವಶೇಷಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ಪ್ರಾಚೀನ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಕೆಲಸ ಮಾಡುವುದು ಮತ್ತೊಂದು ಉದ್ದೇಶ.

ಮೌರ್ಯರಿಂದ ಚಿತ್ರದುರ್ಗ ಪಾಳೆಯಗಾರರವರೆಗೂ ಆಳ್ವಿಕೆ ನಡೆಸಿ ಏಳುಬೀಳುಗಳನ್ನ ಕಂಡಿದ್ದಾರೆ. ಕಲಾ ಪೋಷಕರಾಗಿ, ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಕ್ಕೆ ಕೊಡುಗೆಯನ್ನು ನೀಡಿದ್ದು, ದೇವಾಲಯಗಳು, ಕೋಟೆಕೊತ್ತಲಗಳು, ವೀರಗಲ್ಲುಗಳು, ಶಾಸನಗಳು, ಮಡಕೆ ಚೂರುಗಳು, ನಾಣ್ಯಗಳು, ಮೂರ್ತಿಶಿಲ್ಪಗಳು ಪ್ರಮುಖವು. ಇವುಗಳನ್ನು ಅಧ್ಯಯನ ಮಾಡಿ ದಾಖಲಿಸಿ ವಿಶ್ಲೇಷಿಸುವುದು ಮುಖ್ಯ ಉದ್ದೇಶವಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನದ ಶೀರ್ಷಿಕೆಯಲ್ಲಿ ಸೂಚಿಸುವಂತೆ ತುರುವನೂರು ಹೋಬಳಿಗೆ ಸೀಮಿತವಾಗಿದೆ. ಆಯಾ ವಿಷಯಕ್ಕೆ ಅನುಗುಣವಾಗಿ ಬೇರೆ ಬೇರೆ ನೆಲೆಗಳಲ್ಲಿ ಕಂಡುಬಂದ ಅವಶೇಷಗಳನ್ನು ಪ್ರಾಸಂಗಿಕವಾಗಿ ಹೇಳಲಾಗಿದೆ. ಕಾಲಮಾನ ದೃಷ್ಟಿಯಿಂದ ಹಳೆಶಿಲಾ ಯುಗದಿಂದ ಬೃಹತ್ ಶಿಲಾಯುಗದವರೆಗೆ ಹಾಗೂ ಮೌರ್ಯರಿಂದ ಚಿತ್ರದುರ್ಗ ಪಾಳೆಯಗಾರ ರವರೆಗೆ ಉಪಯೋಗಿಸಿ ಬಿಟ್ಟು ಹೋದ ಅವಶೇಷಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಅಧ್ಯಯನ ದೃಷ್ಟಿಯಿಂದ ಆರು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ.

ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಈವರೆಗಿನ ಅಧ್ಯಯನಗಳ ಸಮೀಕ್ಷೆಯನ್ನು ವಿವರಿಸಲಾಗಿದೆ.

ಎರಡನೇ ಅಧ್ಯಾಯವು ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಕುರಿತಾಗಿದ್ದು ಇದರಲ್ಲಿ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಭೌಗೋಳಿಕವಾಗಿ ಕಂಡುಬರುವ ಬೆಟ್ಟ, ಗುಡ್ಡ, ಕೆರೆ, ನದಿ, ಹಳ್ಳ-ಕೊಳ್ಳ, ಅರಣ್ಯ ಸಂಪತ್ತು, ಖನಿಜ ಸಂಪತ್ತು ಹಾಗೂ ಅಕ್ಷಾಂಶ ಮತ್ತು

ರೇಖಾಂಶಗಳ ವಿವರಣೆಯನ್ನು ಕೊಡಲಾಗಿದೆ. ಚಾರಿತ್ರಿಕವಾಗಿ ಪ್ರಾಗಿತಿಹಾಸ ಮತ್ತು ಇತಿಹಾಸ ಕಾಲವೆಂದು ಮಾನವನ ಇತಿಹಾಸವನ್ನು ವಿಭಾಗಿಸಿ ಅಧ್ಯಯನ ಮಾಡಲಾಗಿದೆ. ಪ್ರಾಗಿತಿಹಾಸದಲ್ಲಿ ಹಳೆಶಿಲಾಯುಗ, ಮಧ್ಯಶಿಲಾಯುಗ, ನೂತನಶಿಲಾಯುಗ, ಬೃಹತ್‌ಶಿಲಾಯುಗಗಳ ಅವಶೇಷ ಗಳನ್ನು ಸಂಕ್ಷಿಪ್ತವಾಗಿ ಪ್ರಸ್ತುತಪಡಿಸಲಾಗಿದೆ. ಇತಿಹಾಸ ಕಾಲಾವಧಿಯಲ್ಲಿ ಮೌರ್ಯರಿಂದ ಚಿತ್ರದುರ್ಗ ಪಾಳೆಯಗಾರರವರೆಗೂ ಅಧ್ಯಯನ ಮಾಡಿ ಕಂಡುಬರುವ ಅವಶೇಷಗಳಾಧಾರದ ಮೇಲೆ ಇತಿಹಾಸವನ್ನು ಕಟ್ಟಿಕೊಡಲಾಗಿದೆ.

ಮೂರನೇ ಅಧ್ಯಾಯದಲ್ಲಿ ಪ್ರಾಗಿತಿಹಾಸಕ್ಕೆ ಸಂಬಂಧಪಟ್ಟ ನೆಲೆಗಳನ್ನು ಹಳೆಶಿಲಾಯುಗ, ಮಧ್ಯಶಿಲಾಯುಗ, ನೂತನಶಿಲಾಯುಗ, ಬೃಹತ್‌ಶಿಲಾಯುಗಗಳೆಂದು ವಿಭಾಗ ಮಾಡಿ ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಈಗಾಗಲೇ ಕಂಡು ಬಂದಿರುವ ಹಾಗೂ ಕ್ಷೇತ್ರಕಾರ್ಯದಲ್ಲಿ ಹೊಸದಾಗಿ ಶೋಧನೆಗೊಂಡಿರುವ ಪ್ರತಿಯೊಂದು ಪ್ರಾಗಿತಿಹಾಸಿಕ ಮತ್ತು ಚಾರಿತ್ರಿಕ ನೆಲೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ಹೋಲಿಕೆ ನೀಡುತ್ತಾ ಪ್ರಸ್ತುತ ಪಡಿಸಲಾಗಿದೆ. ನೆಲೆಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಸುತ್ತಮುತ್ತಲಿನ ಹಾಗೂ ಕರ್ನಾಟಕದ ಪ್ರಮುಖ ನೆಲೆಗಳ ಅವಶೇಷಗಳನ್ನು ಆಧಾರವಾಗಿ ತೆಗೆದುಕೊಳ್ಳಲಾಗಿದೆ.

ನಾಲ್ಕನೇ ಅಧ್ಯಾಯವು ಆದಿ ಇತಿಹಾಸದ ಕುರಿತದ್ದು. ಈ ಕಾಲಾವಧಿಯಲ್ಲಿ ಮೌರ್ಯರು ಮತ್ತು ಶಾತವಾಹನರು ಪ್ರಮುಖರು. ಇವರ ಚಟುವಟಿಕೆಯಲ್ಲಿ ಬಿಟ್ಟು ಹೋದ ಮಡಕೆ ಚೂರುಗಳು, ನಾಣ್ಯಗಳು, ಶಾಸನಗಳನ್ನು ಹಾಗೂ ವಸತಿ ನೆಲೆಯಾಗಿರುವ ಬೂದಿ ದಿನ್ನೆಗಳನ್ನು ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಚಂದ್ರವಳ್ಳಿ, ಚಿಪ್ಪಿನಕೆರೆ, ಬ್ರಹ್ಮಗಿರಿ, ಸಂಗೇನಹಳ್ಳಿಕೆರೆ, ತುರುವನೂರು ನೆಲೆಗಳ ವಿವರಣೆಗಳನ್ನು ಕಾಣಬಹುದು.

ಐದನೇ ಅಧ್ಯಾಯದಲ್ಲಿ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಕುರಿತಾಗಿದ್ದು, ದೇವಾಲಯಗಳು, ಶಾಸನಗಳು, ವೀರಗಲ್ಲುಗಳು, ಸತಿಗಲ್ಲುಗಳು, ಶೈವ ಮತ್ತು ವೈಷ್ಣವಶಿಲ್ಪಗಳು, ಶಾಕ್ತಶಿಲ್ಪಗಳು ಹಾಗೂ ರಕ್ಷಣಾ ವಾಸ್ತುಶಿಲ್ಪವನ್ನು ಅಧ್ಯಯನಮಾಡಿ ವಿವರಿಸಲಾಗಿದೆ.

ಆರನೇ ಅಧ್ಯಾಯವು ಉಪಸಂಹಾರವನ್ನು ಕುರಿತಾದದ್ದು. ಸಂಶೋಧನೆಯಲ್ಲಿ ಇದುವರೆಗೂ ಕಂಡುಕೊಂಡ ಹೊಸ ನಿಲುವುಗಳನ್ನು ವಿವರಿಸಲಾಗಿದೆ.

೧.೩. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವು ಕ್ಷೇತ್ರಕಾರ್ಯವನ್ನು ಒಳಗೊಂಡಿವೆ. ಪ್ರಾಥಮಿಕ ಮತ್ತು ಆನುಷಂಗಿಕ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕ್ಷೇತ್ರ ಕಾರ್ಯ ಮಾಡುವಾಗ ತಾಂತ್ರಿಕ ಕ್ಯಾಮರವನ್ನು ಬಳಸಿಕೊಂಡು ಅವಶೇಷಗಳ ಛಾಯಾಚಿತ್ರ ತೆಗೆಯಲಾಗಿದೆ. ಇಂತಹ ತಾಂತ್ರಿಕ ಉಪಕರಣ ಸೂಕ್ಷ್ಮವಾಗಿ ಶಿಲ್ಪಗಳನ್ನು ಅಧ್ಯಯನ ಮಾಡಲು ಸಹಾಯಕವಾಗಿವೆ. ಮಾಹಿತಿಯನ್ನು ಸಂಗ್ರಹಿಸುವಾಗ ವಿದ್ವಾಂಸರೊಂದಿಗೆ ಚರ್ಚಿಸಿ ಸಂಶಯಾತ್ಮಕ ವಿಷಯಗಳನ್ನು

ಬಗೆಹರಿಸಿಕೊಳ್ಳಲಾಗಿದೆ. ಕೊನೆಯದಾಗಿ ಅನುಬಂಧದಲ್ಲಿ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಛಾಯಾಚಿತ್ರಗಳನ್ನು ರೇಖಾಚಿತ್ರಗಳನ್ನು, ನಕ್ಷೆಗಳನ್ನು ಹಾಗೂ ಗ್ರಂಥಋಣವನ್ನು ಅಳವಡಿಲಾಗಿದೆ.

೧.೪. ಈವರೆಗಿನ ಅಧ್ಯಯನಗಳ ಸಮೀಕ್ಷೆ

ಎಂ. ಶೇಷಾದ್ರಿಯವರು ಜಾನಕಲ್ಲಿನಲ್ಲಿ, ರಾಬರ್ಟ್‌ಬ್ರೂಸ್‌ಫೂಟ್ ತಾಳ್ಯದಲ್ಲಿ ಆದಿ ಹಳೇಶಿಲಾಯುಗದ ಕಲ್ಲಿನ ಕೊಡಲಿಯನ್ನು ಪತ್ತೆ ಮಾಡಿದ್ದರೆಂದು ಕರ್ನಾಟಕ ಪುರಾತತ್ವ ನೆಲೆಗಳು ಪುಸ್ತಕದಲ್ಲಿ ಉಲ್ಲೇಖವಾಗಿದೆ. ಲಕ್ಷ್ಮಣ್‌ತೆಲಗಾವಿ ಮತ್ತು ತಂಡ ಸಂಗೇನಹಳ್ಳಿಕೆರೆಯ ನಡುಗುಡ್ಡೆಯಲ್ಲಿ ಬೂದಿ ದಿನ್ನೆಯನ್ನು, ಗೀರುಬಂಡೆ ಚಿತ್ರಗಳನ್ನು ಮತ್ತು ಕ್ರಿ.ಶ. ೧೩-೧೪ನೇ ಶತಮಾನಕ್ಕೆ ಸೇರಿದ ಶಾಸನೋಕ್ತ ವೀರಗಲ್ಲನ್ನು, ಆಂಜನೇಯ ದೇವಾಲಯದ ಅವಶೇಷವನ್ನು ಮಾತ್ರವಲ್ಲದೆ ಬೆಳಗಟ್ಟ, ಗೋನೂರು, ಕಲ್ಲೇನಹಳ್ಳಿ, ವೀರಮದಕರಿಪುರದಲ್ಲಿ ಬಯಲು ಬಂಡೆ ರೇಖಾಕೃತಿಗಳನ್ನು, ಗುಳಿಗಳನ್ನು ಶೋಧನೆ ಮಾಡಿ 'ಇತಿಹಾಸ ದರ್ಶನ' ೧೯ನೇ ಸಂಪುಟದಲ್ಲಿ ಪ್ರಕಟಿಸಿದ್ದಾರೆ. ಸೋಮಶೇಖರ್ ಎಸ್.ವೈ., ಚಿಪ್ಪಿನಕೆರೆಯಲ್ಲಿ ಶಾತವಾಹನರ ಕಾಲದ ನೆಲೆಯನ್ನು, ಚಿಕ್ಕಕಬ್ಬಿಗೆರೆಯಲ್ಲಿ ಡಾಲ್ಮೆನಾಯ್ಡ್ ಸಿಸ್ಟ ಸಮಾಧಿಯನ್ನು ಪತ್ತೆ ಮಾಡಿ ದಿನಾಂಕ ೧೪-೧೨-೨೦೦೫ರ 'ವಿಜಯಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ತಿಪ್ಪೇಸ್ವಾಮಿ ಎಸ್. ಮತ್ತು ಸೋಮಶೇಖರ ಎಸ್.ವೈ. ಜೊತೆಗೂಡಿ ಕೂನಬೇವು, ತುರುವನೂರು, ಬೆಳಗಟ್ಟ, ಚಿನ್ನೂರಿತಿಪ್ಪಯ್ಯನಹಟ್ಟಿ ಪ್ರದೇಶದಲ್ಲಿ ಶಿಲಾಗೋರಿಗಳನ್ನು ಶೋಧಿಸಿದ್ದಲ್ಲದೆ, ಬಗ್ಗುಲರಂಗವ್ವನಹಳ್ಳಿ ಪರಿಸರದಲ್ಲಿ ಗೀರು ಬಂಡೆ ಚಿತ್ರಗಳನ್ನು ಪತ್ತೆ ಮಾಡಿ 'ಇತಿಹಾಸ ದರ್ಶನ ಸಂಪುಟ-೨೨'ರಲ್ಲಿ ಪ್ರಕಟಿಸಿದರು. ತಿಪ್ಪೇಸ್ವಾಮಿ ಎಸ್. ಅವರು 'ತುರುವನೂರಿನ ಕೋಟೆ ಮತ್ತು ಸಿದ್ದವ್ವನದುರ್ಗ ಕೋಟೆ'ಯ ಬಗ್ಗೆ ಅಧ್ಯಯನ ಮಾಡಿ ತಮ್ಮ ಪಿ.ಎಚ್.ಡಿ. ಮಹಾಪ್ರಬಂಧದಲ್ಲಿ ಉಲ್ಲೇಖಿಸಿದ್ದಾರೆ. ಅವಳೇನಹಳ್ಳಿ ಮತ್ತು ಕೋತಿಗುಡ್ಡದಲ್ಲಿ ಬೃಹತ್ ಶಿಲಾಗೋರಿ ಅಪ್ರಕಟಿತವಾಗಿವೆ. ತುರುವನೂರಿನ ಬೃಹತ್ ಶಿಲಾಗೋರಿನೆಲೆಗಳು ಎಂ.ಎ.ಆರ್. ವರದಿಯಲ್ಲಿ ದಾಖಲಾಗಿವೆ. ಅಲ್ಲದೆ ಶಾಸನವೂ ಕೂಡ ಇದೇ ವರದಿಯಲ್ಲಿ ದಾಖಲಾಗಿ ರುವುದನ್ನು ಗಮನಿಸಬಹುದು. ಶಾಸನಗಳನ್ನು ಬಿ.ಎಲ್.ರೈಸ್ ಸಂಪಾದಿಸಿ 'ಎಪಿಗ್ರಪಿಯ ಕರ್ನಾಟಿಕಾ ಸಂಪುಟ ೧೧'ರಲ್ಲಿ ಪ್ರಕಟಿಸಿದ್ದಾರೆ.

• • •

.ಚಿತ್ರದುರ್ಗ ಜಿಲ್ಲಾ ನಕ್ಷೆ



ತುರುವನೂರು ಹೋಬಳಿಯ ನಕ್ಷೆ



*೧ ತುರವನೂರು
*೨ ಕೂನಬೇವು
*೩ ಹಾಯಕಲ್ಲು
*೪ ಬೆಳಗಟ್ಟ
*೫ ಚಿಕ್ಕಗೊಂಡನಹಳ್ಳಿ
*೬ ಮಾಡನಾಯಕನ ಹಳ್ಳಿ
*೭ ಮುದ್ದಾಪುರ
*೮ ಹಿರೇಕಬ್ಬಿಗೆರೆ
*೯ ಯಳಗೋಡು
*೧೦ ಸುಲ್ತಾನಿಪುರ

ಚಿತ್ರದುರ್ಗ ತಾಲೂಕಿನ ಗಡಿ ರೇಖೆ
ತುರವನೂರು ಹೋಬಳಿಯ ಗಡಿ ರೇಖೆ

ಉ

ತುರುವನೂರು ಗ್ರಾಮ ಪ್ರಾಚ್ಯ ಅವಶೇಷಗಳ ಸ್ಥಳ ನಕ್ಷೆ



ಅಧ್ಯಾಯ : ಎರಡು

ಭೌಗೋಳಿಕ ಹಿನ್ನೆಲೆ ಮತ್ತು ರಾಜಕೀಯ ಇತಿಹಾಸ

೨.೧. ಭೌಗೋಳಿಕ ಲಕ್ಷಣಗಳು

೨.೨. ರಾಜಕೀಯ ಇತಿಹಾಸ

ಅಧ್ಯಾಯ : ಎರಡು

ಭೌಗೋಳಿಕ ಹಿನ್ನೆಲೆ ಮತ್ತು ರಾಜಕೀಯ ಇತಿಹಾಸ

೨.೧. ಭೌಗೋಳಿಕ ಲಕ್ಷಣಗಳು

ಐತಿಹಾಸಿಕತೆಯನ್ನು ಹೊಂದಿರುವ ಚಿತ್ರದುರ್ಗ ಕರ್ನಾಟಕದ ಮಧ್ಯಭಾಗದಲ್ಲಿದೆ. ಚಿತ್ರದುರ್ಗದಿಂದ ಈಶಾನ್ಯಕ್ಕೆ ೨೩ ಕಿ.ಮೀ. ದೂರದಲ್ಲಿರುವುದೇ ತುರುವನೂರು ಹೋಬಳಿ ಕೇಂದ್ರ. ಫೆಡರಿಕ್ ಚಾಲ್ಮರ್ಸ್ ಪ್ರಕಾರ ಕ್ರಿ.ಶ ೧೭ನೇ ಶತಮಾನದಲ್ಲಿ ೯ ಗ್ರಾಮ ೪ ಕೊಂಪೆಗಳಿಂದ ಕೂಡಿದ ಹೋಬಳಿಯಾಗಿತ್ತೆಂದು ತಿಳಿದುಬರುವುದು.[೧] ಉತ್ತರ ಅಕ್ಷಾಂಶ ೭೦°೨೬ ಮತ್ತು ೧೪°೨೪ ಪೂರ್ವ ರೇಖಾಂಶದವರೆಗೆ ವ್ಯಾಪಿಸಿದ್ದು, ಸಮುದ್ರ ಮಟ್ಟದಿಂದ ೨೦೫೫ ಅಡಿ ಎತ್ತರದಲ್ಲಿದೆ.[೨] ಈ ಹೋಬಳಿಯಲ್ಲಿ ೯ ಗ್ರಾಮ ಪಂಚಾಯ್ತಿ, ೫೩ ಗ್ರಾಮಗಳನ್ನು ಕಾಣಬಹುದು.[೩] ಪ್ರಸ್ತುತ ಪ್ರದೇಶದ ಉತ್ತರಕ್ಕೆ ಮುಸ್ಟೂರು, ದಕ್ಷಿಣಕ್ಕೆ ಚಿತ್ರದುರ್ಗ ನಗರ, ಪೂರ್ವಕ್ಕೆ ನಾಯಕನಹಟ್ಟಿ, ಪಶ್ಚಿಮಕ್ಕೆ ಭರಮಸಾಗರ ಹೋಬಳಿಗಳು ಮೇರೆಗಳಾಗಿವೆ. ಭರಮಸಾಗರದಿಂದ ೨೫ ಕಿ.ಮೀ., ನಾಯಕನಹಟ್ಟಿಯಿಂದ ೧೪ ಕಿ.ಮೀ., ಚಿತ್ರದುರ್ಗದಿಂದ ೨೩ ಕಿ.ಮೀ., ಮುಸ್ಟೂರಿನಿಂದ ೯ ಕಿ.ಮೀ., ಜಿಲ್ಲಾ ರಸ್ತೆಯ ಮೂಲಕ ಬಂದರೆ ಪ್ರಸ್ತುತ ಪ್ರದೇಶ ತಲುಪಬಹುದು. ರಾಷ್ಟ್ರೀಯ ಹೆದ್ದಾರಿ ೧೩ ಹಾದು ಹೋಗಿರುವುದು ವ್ಯಾಪಾರಕ್ಕೆ ಮತ್ತು ಸಂಪರ್ಕಕ್ಕೆ ಅನುಕೂಲವಾಗಿದೆ.

ಪ್ರಸ್ತುತ ಪ್ರದೇಶದಲ್ಲಿ ಹಳ್ಳ, ಕೆರೆಗಳು, ನೀರಿನಾಸರೆಗಳಾಗಿವೆ. ಜನಿಗಿಹಳ್ಳ ಅಥವಾ ಚಿನ್ನಹಗರಿಹಳ್ಳ ಪ್ರಸ್ತುತ ಹೋಬಳಿಯಲ್ಲಿ ಹರಿದು ಹೋಗಿ ವೇದಾವತಿ ನದಿಯನ್ನು ಸೇರುತ್ತದೆ. ಈ ಹಳ್ಳವು ಕೃಷಿಗೆ ನೀರನ್ನು ಒದಗಿಸುವುದು ಮಾತ್ರವಲ್ಲದೆ ಪ್ರಾಚೀನ ಮಾನವನ ವಸತಿ ತಾಣವಾಗಿದೆ. ಸಂಗೇನಹಳ್ಳಿ ಕೆರೆಯ ಮಧ್ಯೆ ಬೂದಿ ದಿನ್ನೆ ಶೋಧಿತಗೊಂಡಿರುವುದನ್ನು ಉದಾಹಣೆಯಾಗಿ ನೀಡಬಹುದು, ದೊಡಗಟ್ಟ ಕೆರೆ, ಮುದ್ದಾಪುರ ಕೆರೆ, ಚಿಪ್ಪಿನ ಕೆರೆ, ಹಾಯ್ಕಲ್ ಕೆರೆ, ಕಡಬನಕಟ್ಟೆ ಕೆರೆ, ಗ್ರಾಮಾಂಬಿಕ ಕೆರೆ, ಬೆಳಗಟ್ಟ

[illegible]

[illegible]

[illegible]

ಕೆರೆಗಳಿಗೆ ನೀರುಣಿಸುವ ಹಳ್ಳಗಳು ಮಾನವನ ಬದುಕಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಆಧಾರವಾಗಿವೆ. ಹಳ್ಳಗಳು ಪ್ರತಿ ಮೂರು ಕಿ.ಮೀಗೆ ಕಂಡುಬರುತ್ತವೆ.

ಪ್ರಸ್ತುತ ಪ್ರದೇಶದ ಜನರು ಮಳೆ ಬಂದರೆ ಬೆಳೆ ಎಂಬಂತೆ, ಮಳೆಯನ್ನು ಆಶ್ರಯಿಸಿದ್ದಾರೆ. ಫಲವತ್ತಾದ ಕಪ್ಪು, ಕೆಂಪು ಹಾಗೂ ಮರಳು ಮಿಶ್ರಿತ ಕೆಂಪುಮಣ್ಣಿನಿಂದ ಕೂಡಿದ ಭೂಮಿಯನ್ನು ಹೊಂದಿದೆ. ಜೌಗುಮಣ್ಣು, ಸುಣ್ಣದ ಮಣ್ಣು ವ್ಯವಸಾಯಕ್ಕೆ ನಿರುಪಯುಕ್ತ. ಹತ್ತಿ, ನೆಲಗಡಲೆ, ಕೊತ್ತಂಬರಿ, ಸೂರ್ಯಕಾಂತಿ, ಉದ್ದು, ಕಡಲೆ, ತೊಗರಿ ಇತ್ಯಾದಿ ಬೆಳೆಗಳನ್ನು ಒಣಭೂಮಿಯಲ್ಲಿ ಬೆಳೆದರೆ, ತೋಟಗಾರಿಕೆ, ಬೆಳೆಗಳನ್ನು ನೀರಾವರಿ ಭೂಮಿಯಲ್ಲಿ ಬೆಳೆಯುತ್ತಾರೆ.

ಪ್ರಸ್ತುತ ಪ್ರದೇಶವು ಬೆಟ್ಟ-ಗುಡ್ಡ, ಮಟ್ಟಿಗಳಿಂದ ಕೂಡಿದೆ. ನೀಲಗಿರಿ ಗುಡ್ಡ, ಊರಬ್ಯಾಲದ ಗುಡ್ಡ, ಹುಲಿಗುಡ್ಡ, ಕೋತಿಗುಡ್ಡ, ಬಂಗಾರಕ್ಕನಗುಡ್ಡ, ಗೋಸಿರಪ್ಪನಗುಡ್ಡ, ಪಾಪಯ್ಯನಮಟ್ಟಿ, ಬ್ಯಾಲದಮಟ್ಟಿ, ಜುಂಜಪ್ಪನಮಟ್ಟಿ, ನ್ಯಾಕಲೋಬರಮಟ್ಟಿ, ದೊಡ್ಡ-ಚಿಕ್ಕ ಮರಡಿಗಳಿಂದ ಕೂಡಿದ ಪ್ರದೇಶ. ಇವುಗಳಲ್ಲಿ ಅಜ್ಜನಗುಡ್ಡ ಮತ್ತು ಗೋಸಿರಪ್ಪನಗುಡ್ಡ ಮಂಜಿನಮೋಡಗಳಿಗೆ ತಾಕುತ್ತವೆ. ಕೋತಿಗುಡ್ಡದಿಂದ ಚಿತ್ರದುರ್ಗನಗರ ಸಮೀಪದವರೆಗೆ ಬೆಟ್ಟಗಳ ಸಾಲುಗಳು ಪ್ರಸ್ತುತ ಪ್ರದೇಶದ ಪಶ್ಚಿಮಕ್ಕೆ ಹಬ್ಬಿವೆ. ಗುಡ್ಡಗಳ ನಡುವೆ ಅಲ್ಲಲ್ಲಿ ಕಣಿವೆಗಳುಂಟು. ಉತ್ತರದ ಬೆಟ್ಟಗಳ ಮೇಲೆ ವೇಗದ ಗಾಳಿ ಬೀಸುವ ಪರಿಣಾಮ, ಇತ್ತೀಚಿಗೆ ಕೆಲವು ಸಂಸ್ಥೆಗಳು ವಿದ್ಯುತ್ (ಪವನಶಕ್ತಿ) ಉತ್ಪಾದಿಸುವ ಫ್ಯಾನ್‌ಗಳನ್ನು ಅಳವಡಿಸಿದ್ದಾರೆ. ಗುಡ್ಡದರಂಗನಹಳ್ಳಿ ಗುಡ್ಡದಲ್ಲಿ ಚಿನ್ನ, ಪಾಪಯ್ಯನಮಟ್ಟಿಯಲ್ಲಿ ಮ್ಯಾಂಗನೀಸ್ ಉಳಿದಂತೆ ಕಬ್ಬಿಣ ನಿಕ್ಷೇಪಗಳಿವೆ. ಡೈಕ್, ಜಾಸ್ಪರ್, ಅಗೇಟ್, ಟ್ರ್ಯಾಪ್, ಬೆಣಚುಕಲ್ಲು, ಮತ್ತಿತರ ಶಿಲೆಗಳು ಸಿಗುವ ಪ್ರದೇಶ. ಈ ಎಲ್ಲಾ ಬೆಟ್ಟಗಳಲ್ಲಿ ಹಿಂದೊಮ್ಮೆ ದಟ್ಟವಾದ ಅರಣ್ಯವಿತ್ತು. ಆದರೆ ಇಂದು ಜನಸಂಖ್ಯೆಯ ಹೆಚ್ಚಳದಿಂದ ಮತ್ತು ಯಂತ್ರಮಯ ಬದುಕು ನಾಶ ಮಾಡಿದೆ. ಒಟ್ಟಾಗಿ ಈ ಪರಿಸರ ಪ್ರಾಚೀನ ಕಾಲದಿಂದ ಇಂದಿನವರೆಗೆ ಜನವಸತಿಗೆ ಆಶ್ರಯ ನೀಡುತ್ತಿದೆ.

ಪ್ರಸ್ತುತ ಪ್ರದೇಶದಲ್ಲಿ ಕುರುಚಲು ಗಿಡಗಳು, ಈಚಲು, ಹುಣಸೆ, ಮಾವು, ಬೇವು, ಹಿಪ್ಪೆಮರ, ಬ್ಯಾಲದಮರ, ತ್ಯಾಗದಮರ, ನೀಲಗಿರಿಮರ, ದಿಂಡಿಗ, ಕಕ್ಕೆ, ತಂಗಡಿಕೆ, ಬಂದರಿಕೆ, ಎಕ್ಕೆ, ತುಳಸಿ, ತುಂಬೆ ಇತ್ಯಾದಿ ಔಷಧಿ ಗುಣವುಳ್ಳ ಮರ ಗಿಡಗಳು ವ್ಯಾಪಕವಾಗಿ ಬೆಳೆದುಕೊಂಡಿವೆ. ಅರಣ್ಯ ಸಂಪತ್ತು ವೃತ್ತಿಯಾಧಾರಿತ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದು, ಸಾಂಪ್ರದಾಯಿಕ ವೈದ್ಯರಿಗೆ ಔಷಧಿ ಸಸ್ಯವನ್ನು ಒದಗಿಸುತ್ತಿವೆ. ಹುಣಸೆ ಮರದಿಂದ 'ಹುಣಸೆಕಟ್ಟೆ" ಬೇವಿನಮರದ ಕೊಂಬೆ ಕೂನವಾಗಿ ಬೆಳೆದಿದ್ದರಿಂದ 'ಕೂನಬೇವು' ಎಂಬ ಹೆಸರು ಬಂದಿರಬಹುದೆಂಬ ಐತಿಹ್ಯಗಳಿವೆ.

೨.೨ ರಾಜಕೀಯ ಇತಿಹಾಸ

ಮಾನವನ ಇತಿಹಾಸವನ್ನು ಅಧ್ಯಯನ ಮಾಡಲು ಪೂರ್ವ ಇತಿಹಾಸ ಮತ್ತು ಇತಿಹಾಸಕಾಲವೆಂದು ವಿಭಾಗ ಮಾಡಲಾಗಿದೆ. ಲಿಖಿತ ಆಧಾರಗಳಿಲ್ಲದ ಕಾಲವೇ ಪ್ರಾಗಿತಿಹಾಸ. ಅಕ್ಷರ ಜ್ಞಾನವುಳ್ಳ ಕಾಲವೇ ಇತಿಹಾಸ ಕಾಲ. ಮಾನವನು ಈ ಎರಡು ಕಾಲಮಾನದಲ್ಲೂ ಸಾಂಸ್ಕೃತಿಕ ಕೊಡುಗೆ ನೀಡುತ್ತಾ ಬಂದಿದ್ದಾನೆ. ಅಂತಹ ಕುರುಹುಗಳು ಕರ್ನಾಟಕದಾದ್ಯಂತ ವ್ಯಾಪಿಸಿವೆ. ಸಂಶೋಧಕರು ಐತಿಹಾಸಿಕ ಕುರುಹುಗಳನ್ನು ಪತ್ತೆಮಾಡಿ, ಇತಿಹಾಸದ ಮೇಲೆ ಬೆಳಕು ಚೆಲ್ಲಿದ್ದಾರೆ.

ಪ್ರಾಗಿತಿಹಾಸ

ಆದಿ ಮಾನವನು ಅಲೆಮಾರಿಯಾಗಿ ತಿರುಗಾಡುತ್ತ ನೀರಿನಾಸರೆಯನ್ನು ಆಶ್ರಯಿಸಿ ಮತ್ತು ಬೇಟೆಗಾಗಿ ಆಹಾರ ಸಂಗ್ರಹಣೆಗಾಗಿ ಶಿಲೆ, ಲೋಹ, ಮರದ ವಸ್ತುಗಳನ್ನು ಹಾಗೂ ಮಣ್ಣಿನ ಉಪಕರಣಗಳನ್ನು ಬಳಸಿದ. ಹಾಗಾಗಿ ಆ ಕಾಲವನ್ನು ಪ್ರಾಗಿತಿಹಾಸ ಕಾಲವೆಂದು ಕರೆಯಲಾಗಿದೆ. ಪ್ರಸ್ತುತ ಪ್ರದೇಶವು ಹಳೇ ಶಿಲಾಯುಗ, ಸೂಕ್ಷ್ಮಶಿಲಾಯುಗ, ನೂತನ ಶಿಲಾಯುಗ, ಶಿಲಾ-ತಾಮ್ರ ಯುಗ, ಬೃಹತ್ ಶಿಲಾಯುಗಗಳ ನೆಲೆವೀಡಾಗಿದೆ. ಚಂದ್ರವಳ್ಳಿ, ಬ್ರಹ್ಮಗಿರಿಯಲ್ಲಿನ ಉತ್ಖನನಗಳು ಈ ಪ್ರದೇಶದ ಮಹತ್ವವನ್ನು ಹೆಚ್ಚಿಸಿವೆ. ಅಧ್ಯಯನ ದೃಷ್ಟಿಯಿಂದ ಹಳೇ ಶಿಲಾಯುಗವನ್ನು ಆದಿ, ಮಧ್ಯ, ಅಂತ್ಯ ಹಳೇಶಿಲಾಯುಗ ವೆಂದು ವಿಭಾಗ ಮಾಡಲಾಗಿದೆ. ಆದಿ ಹಳೇ ಶಿಲಾಯುಗದ ಆಯುಧಗಳು ಜಾನಕಲ್ಲು (ಹೊಸದುರ್ಗ ತಾ.) ತಾಳ್ಯ (ಹೊಳಲ್ಕೆರೆ ತಾ.)ಗಳಲ್ಲಿ ಸಂಶೋಧಕರಿಗೆ ದೊರಕಿದ್ದವು. ಇದಾದ ೬೦ ವರ್ಷಗಳ ನಂತರ ಕೂನಬೇವಿನಲ್ಲಿ ಕ್ಷೇತ್ರಕಾರ್ಯ ಮಾಡಿದಾಗ ಮೋರಿಯರ ಮಟ್ಟಿಯ ಸಮೀಪ ಎರಡು ಕಡೆ ಚಕ್ಕೆಗಳನ್ನು ಎಬ್ಬಿಸಿದ ಎರಡು ಬದಿಗಳನ್ನು ಚೂಪಾಗಿ ಮಾಡಿಕೊಂಡಿರುವ ದ್ವಿಮುಖ ಆಯುಧಗಳು ಪತ್ತೆಗೊಂಡಿವೆ.[೧] ಹಾಗಾಗಿ ಕೂನಬೇವು ನೆಲೆಯಲ್ಲಿ ಮುಚ್ಚುಗತ್ತಿ ಮಾದರಿಯ ಎರಡು ಆದಿ ಹಳೇಶಿಲಾಯುಗದ ಆಯುಧಗಳು ಚಿತ್ರದುರ್ಗದಲ್ಲಿ ಪತ್ತೆಯಾಗುತ್ತಿರುವ ಮೂರನೇ ನೆಲೆ ಎಂಬ ಹೆಗ್ಗಳಿಕೆ ಪಡೆದುಕೊಂಡಿದೆ ಎನ್ನಬಹುದು.

ಸೂಕ್ಷ್ಮ ಶಿಲಾಯುಗವು ಹಳೇಶಿಲಾಯುಗ ಮತ್ತು ನೂತನ ಶಿಲಾಯುಗದ ನಡುವಿನ ಕಾಲವಾಗಿದ್ದು, ಸೂಕ್ಷ್ಮವಾದ ಚಕ್ಕೆ ಕಲ್ಲುಗಳನ್ನು ಬಳಕೆ ಮಾಡಲಾಗಿದೆ. ಅಂತಹ ಅವಶೇಷಗಳು ಸಂಗೇನಹಳ್ಳಿಯಲ್ಲಿ ದೊರಕಿವೆ.[೨] ಈ ಮೂಲಕ ಪ್ರಸ್ತುತ ಪ್ರದೇಶ ಸೂಕ್ಷ್ಮ ಶಿಲಾಯುಗದ ನೆಲೆಯಾಗಿತ್ತೆಂದು ಹೇಳಬಹುದು. ಕಲ್ಲನ್ನು ನಯವಾಗಿ ಉಜ್ಜಿ ಆಯುಧವಾಗಿ ತಯಾರಿಸಿದ ಕಾಲವೇ ನೂತನ ಶಿಲಾಯುಗ. ಕೃಷಿ ಸಂಸ್ಕೃತಿಯನ್ನು ಪ್ರತಿನಿಧಿಸುವಂತದ್ದು ಈ ಕಾಲ. ನೂತನ ಶಿಲಾಯುಗದ ಮಾನವ ನದಿ ಮುಖಜ ಭೂಮಿಯಲ್ಲಿ ವಾಸ ವಾಗಿದ್ದರು. ಅಲ್ಲದೆ ಕೆರೆ, ಹಳ್ಳದ ದಂಡೆ, ಬಯಲು ಪ್ರದೇಶಗಳಲ್ಲಿ ವಾಸವಾಗಿದ್ದಕ್ಕೆ

ಸಿಕ್ಕಂತಹ ಕುರುಹುಗಳ ಆಧಾರದ ಮೇಲೆ ದೃಢಪಡಿಸಲಾಗಿದೆ. ಪ್ರಸ್ತುತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಸಂಗೇನಹಳ್ಳಿಯಲ್ಲಿ ಬೂದು ಬಣ್ಣದ ಮಡಕೆ, ಶಿಲಾಕೊಡಲಿ, ಬೂದಿದಿಬ್ಬ ಮತ್ತು ಬಯಲು ಬಂಡೆ ರೇಖಾಚಿತ್ರಗಳು ದೊರಕಿವೆ.[೬] ಕೂನಬೇವಿನಲ್ಲಿ ನಾನು ಮತ್ತು ಎಸ್. ನಾಗರಾಜಪ್ಪನವರು ಕ್ಷೇತ್ರಕಾರ್ಯ ಮಾಡಿದಾಗ ಕೊಂಚೆ ಶಾಂತರುದ್ರಪ್ಪ ಹೊಲದಲ್ಲಿ ನಯಗೊಳಿಸಿದ ಕಲ್ಲಿನ ಕೊಡಲಿ ಪತ್ತೆಗೊಂಡಿದೆ. ಈ ಆಧಾರದ ಮೇಲೆ ಕೂನಬೇವನ್ನು ನವಶಿಲಾಯುಗಕಾಲಕ್ಕೆ ಸೇರಿಸಬಹುದು. ನವಶಿಲಾಯುಗದ ನಂತರದ ಕಾಲಘಟ್ಟವೇ ಶಿಲಾ ತಾಮ್ರಯುಗ. ತಾಮ್ರದ ಉಪಯೋಗ ಮತ್ತು ನೀಳಚಕ್ಕೆಗಳನ್ನು ಬಳಕೆ ಮಾಡಿದ್ದರಿಂದ ಶಿಲಾ ತಾಮ್ರಯುಗವೆಂದು ಕರೆಯಲಾಗಿದೆ. ಸುಟ್ಟಮಣ್ಣಿನ ಬಳಕೆ, ಸುಧಾರಿತ ಬೇಸಾಯವನ್ನು ಈ ಕಾಲದಲ್ಲಿ ಕಾಣಬಹುದು. ಪ್ರಸ್ತುತ ಪ್ರದೇಶ ಸಮೀಪ ದಲ್ಲಿರುವ ಚಂದ್ರವಳ್ಳಿಯಲ್ಲಿ ಗೀರು ಚಿತ್ರಗಳು ಮೂರು ಕಡೆ ದೊರಕಿದ್ದು ಅವುಗಳು ಶಿಲಾತಾಮ್ರ ಯುಗಕ್ಕೆ ಸೇರಿದವುಗಳೆಂದು ಗುರುತಿಸಲಾಗಿದೆ.[೭] ಹಾಗೂ ೮೦ ಕಿ.ಮೀ. ದೂರದಲ್ಲಿರುವ ಬ್ರಹ್ಮಗಿರಿಯ ಉತ್ಖನನದಲ್ಲಿ ದೊರೆತ ತಾಮ್ರದ ಕೊಡಲಿ, ಕಂಚಿನ ಸಳಿ, ತಾಮ್ರದ ಗಾಳ ಅವಶೇಷಗಳನ್ನು ಪೂರಕವಾಗಿ ನೀಡಬಹುದು.[೮]

ಬೃಹತ್ ಶಿಲಾಯುಗವು ಪ್ರಾಗಿತಿಹಾಸದ ಕೊನೇ ಕಾಲ ಘಟ್ಟವಾಗಿದ್ದು, ಕರ್ನಾಟಕ ದಲ್ಲಿ ಹೆಚ್ಚು ಹಬ್ಬಿದಂತಹ ಸಂಸ್ಕೃತಿ. ಈ ಕಾಲದ ಮಾನವನು ಕಬ್ಬಿಣದ ಲೋಹಗಳನ್ನು ಬಳಕೆಮಾಡಿದ್ದರಿಂದ ಕಬ್ಬಿಣಯುಗವೆಂತಲೂ, ಬೃಹತ್ ಶಿಲೆಯನ್ನು ಬಳಸಿ ವಿವಿಧ ಮಾದರಿಯಲ್ಲಿ ಸಮಾಧಿಗಳನ್ನು ನಿರ್ಮಿಸಿದ್ದರಿಂದ, ಬೃಹತ್ ಶಿಲಾಯುಗವೆಂದು ಕರೆಯ ಲಾಗಿದೆ. ಪ್ರಸ್ತುತ ಪ್ರದೇಶದಲ್ಲಿ ಬೆಳಗಟ್ಟದಲ್ಲಿ ಶಿಲಾಗೋರಿ, ಹಾಯ್ಕಲ್‌ನಲ್ಲಿ ಕಲ್ಲುಗುಚ್ಛ ಶಿಲಾಗೋರಿ, ಕೂನಬೇವಿನಲ್ಲಿ ವೃತ್ತಾಕಾರದ ಶಿಲಾಗೋರಿ, ತುರುವನೂರಿನಲ್ಲಿ ಶಿಲಾವೃತ್ತಾ ಗೋರಿ, ಚಿಕ್ಕಕಬ್ಬಿಗೆರೆಯಲ್ಲಿ ಪಾಂಡುಕುಳಿ ಸಮಾಧಿಗಳು ಶೋಧಿತಗೊಂಡಿವೆ. ನನ್ನ ಕ್ಷೇತ್ರ ಕಾರ್ಯದಲ್ಲಿ ಸುಲ್ತಾನಿಪುರದ ಜುಂಜಪ್ಪನಮಟ್ಟಿಯಲ್ಲಿ ಶಿಲಾ ವೃತ್ತಾಗೋರಿಗಳು ಶೋಧಿತಗೊಂಡಿವೆ. ಆದರೆ ಚಿಪ್ಪಿನಕೆರೆಯ ಬೂದಿ ಹೊಲದಲ್ಲಿ ಕಪ್ಪು ಮತ್ತು ಕೆಂಪು ಬಣ್ಣವುಳ್ಳ ಮಡಕೆ ದೊರಕಿದ್ದು, ಬೃಹತ್ ಶಿಲಾಯುಗದ ವಾಸ್ತವ್ಯದ ನೆಲೆಯೆಂದು ಗುರುತಿಸಿ ಕೊಂಡಿರುವುದು ವಿಶೇಷ.[೯] ಗೀರು/ಕುಟ್ಟಿದ ರೇಖಾಚಿತ್ರಗಳು ಪ್ರಾಚೀನ ಮಾನವನ ಸಂಸ್ಕೃತಿಯ ಪ್ರತಿಬಿಂಬ. ಅಂತಹ ಚಿತ್ರಗಳು ದೊಡಘಟ್ಟ, ಬೆಳಗಟ್ಟ, ಬಾಗೇನಾಳ್, ಹುಣಸೇಕಟ್ಟೆ, ಬಗ್ಗುಲರಂಗನಹಳ್ಳಿ, ಕೂನಬೇವು, ಸಂಗೇನಹಳ್ಳಿ ನೆಲೆಗಳಲ್ಲಿ ಶೋಧಿತಗೊಂಡಿವೆ. ಈ ಎಲ್ಲಾ ಚಿತ್ರಗಳು ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳ ಸಮೀಪವಿರುವುದರಿಂದ ಬೃಹತ್ ಶಿಲಾಯುಗಕ್ಕೆ ಸೇರಿಸಲಾಗಿದೆ.

ಇತಿಹಾಸ ಕಾಲ

ಹೀಗೆ ಇತ್ತಂತೆ, ಹೀಗೆ ನಡೆಯಿತಂತೆ ಎಂಬ ವೃತ್ತಾಂತವಾಗಿರದೆ ಇತಿಹಾಸ "ಯೋಚಿಸಲಾದ ವಿಷಯ ಹಾಗೂ ಘಟನೆಗಳ ದಾಖಲೆಯೇ ಇತಿಹಾಸವೆಂದು" ಕ್ಲೈಡ್

ಮತ್ತು ಬಿಯರ್ಸ್ ಅಭಿಪ್ರಾಯಪಟ್ಟಿದ್ದಾರೆ.[೧೦] ಮೌರ್ಯರು ಬ್ರಾಹ್ಮಿಲಿಪಿಯಲ್ಲಿ ಮತ್ತು ಖರೋಷ್ಟಿ ಲಿಪಿಯಲ್ಲಿ ಶಾಸನಗಳನ್ನು ಹಾಕಿಸುವುದರ ಮುಖಾಂತರ ಇತಿಹಾಸ ಕಾಲಕ್ಕೆ ಕರ್ನಾಟಕದಲ್ಲಿ ಅಡಿಪಾಯ ಹಾಕಿದರು. ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬ ಪಲ್ಲವರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರು, ಟಿಪ್ಪು-ಹೈದಾರಲಿ ಹಾಗೂ ಪಾಳೆಯಗಾರರು ಆಳ್ವಿಕೆ ಮಾಡಿ ಶಾಸನಗಳನ್ನು ಮತ್ತು ಉಳಿದಂತಹ ಪುರಾತತ್ವ ಆಕರಗಳನ್ನು ಅವಶೇಷಗಳ ರೂಪದಲ್ಲಿ ಬಿಟ್ಟು ಹೋಗಿದ್ದಾರೆ. ಇವುಗಳ ಅಧ್ಯಯನದ ಮೂಲಕ ಸ್ಥಳೀಯ ಇತಿಹಾಸವನ್ನು ಕಟ್ಟಬಹುದು.

ಮೌರ್ಯರು

ಕರ್ನಾಟಕದಲ್ಲಿ ಇತಿಹಾಸಕಾಲ ಆರಂಭಗೊಳ್ಳುವುದು ಮೌರ್ಯರಿಂದ ಕ್ರಿ.ಪೂ. ೩೨೫ ರಿಂದ ಕ್ರಿ.ಪೂ. ೧೮೮ರವರೆಗೆ ಇವರ ಆಳ್ವಿಕೆಯ ಅವಧಿಯಾಗಿದೆ. ಮೌರ್ಯರಲ್ಲಿ ಚಂದ್ರಗುಪ್ತ ಮೌರ್ಯ, ಬಿಂದುಸಾರ, ಅಶೋಕ ಚಕ್ರವರ್ತಿಗಳು ಪ್ರಮುಖರು. ಆಡಳಿತ ಕೇಂದ್ರ ಪಾಟಲೀಪುತ್ರ, ಕರ್ನಾಟಕದ ಬ್ರಹ್ಮಗಿರಿ, ಮಸ್ಕಿ, ಕೊಪ್ಪಳ, ನಿಟ್ಟೂರು ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳು ಆಡಳಿತ ವ್ಯಾಪ್ತಿಗೆ ಒಳಪಟ್ಟಿವೆ. ಅಶೋಕನು ಕಳಿಂಗ ಯುದ್ಧವಾದ ನಂತರ ಬೌದ್ಧಧರ್ಮ ಸೇರಿ ಅಹಿಂಸಾತತ್ವದ ಆಚರಣೆಗೆ ಮುಂದಾದನು. ಧರ್ಮಪ್ರಚಾರದ ಉದ್ದೇಶದಿಂದ ಶಾಸನವನ್ನು ಹಾಕಿಸಲು ಪ್ರಾರಂಭಿಸಿದ ಮೊದಲ ಸಾಮ್ರಟ. ಕರ್ನಾಟಕದಲ್ಲಿ ೧೭ ಶಾಸನಗಳಿದ್ದು, ಅವುಗಳಲ್ಲಿ ೧೩ ಲಘುಶಾಸನಗಳು ೪ ಶಿಲಾಶಾಸನಗಳು ಒಳಗೊಂಡಿವೆ.[೧೧] ಬ್ರಹ್ಮಗಿರಿ ಶಾಸನದಲ್ಲಿ 'ದೇವನಾಂಪ್ರಿಯ' ಪ್ರಿಯದರ್ಶಿ ಎಂದು ರಚಿತಗೊಂಡಿದೆ. ಮಸ್ಕಿ ಶಾಸನದಲ್ಲಿ ಅಸೋಕಸ ಎಂಬ ಉಲ್ಲೇಖ ಮಹತ್ವದ್ದೆನಿಸಿದೆ. ಪ್ರಸ್ತುತ ಪ್ರದೇಶದಿಂದ ಪಕ್ಕದ ಜಗಳೂರು ತಾಲ್ಲೂಕಿನ ಆಸಗೋಡಿನಲ್ಲಿ ಅಶೋಕ ತಂಗಿದ್ದನೆಂದು ತಿಳಿದು ಬಂದಿರುವುದು ಗಮನಾರ್ಹ.[೧೨] ಚಂದ್ರವಳ್ಳಿ ಸಹ ಮುಖ್ಯ ಕೇಂದ್ರವಾಗಿತ್ತೆಂದು ತಿಳಿಯಬಹುದು. ಈ ಎಲ್ಲಾ ಆಧಾರಗಳಿಂದ ಮೌರ್ಯರ ಸಾಮ್ರಜ್ಯ ೧೪° ಅಕ್ಷಾಂಶಕ್ಕೆ ಮಾತ್ರ ಸೀಮಿತವಾಗಿರದೆ ೧೨° ಅಕ್ಷಾಂಶದವರೆಗೆ ವಿಸ್ತರಿಸಿದೆ. ಹಾಗಾಗಿ ಪ್ರಸ್ತುತ ಪ್ರದೇಶವು ಈ ಅಕ್ಷಾಂಶದ ವ್ಯಾಪ್ತಿಗೆ ಒಳಪಟ್ಟಿರುವುದಾಗಿ ಹೇಳಬಹುದು.[೧೩]

ಶಾತವಾಹನರು

ಮೌರ್ಯರ ಸಾಮಂತರಾಗಿ ಆಡಳಿತ ನಿರ್ವಹಿಸುತ್ತಿದ್ದ ಶಾತವಾಹನರು ಕ್ರಿ.ಪೂ. ೨೩೫ ರಿಂದ ಸ್ವತಂತ್ರವಾಗಿ ಆಳ್ವಿಕೆ ಆರಂಭಿಸಿ ಕ್ರಿ.ಶ. ೨೨೦ರವರೆಗೆ ರಾಜ್ಯಭಾರ ಮಾಡಿದರು. ಇವರ ರಾಜಧಾನಿ ಪೈಠಾಣ. ಸಿಮುಖನು ಶಾತವಾಹನ ಸಾಮ್ರಾಜ್ಯ ಸ್ಥಾಪಕ. ಎರಡನೇ ಶಾತಕರ್ಣಿ, ಗೌತಮಿಪುತ್ರ ಶಾತಕರ್ಣಿ, ವಶಿಷ್ಠಪುತ್ರ ಪುಳಮಾಯಿ, ಯಜ್ಞ ಶಾತಕರ್ಣಿ ರಾಜ ಪ್ರಮುಖರು. ಮಹಾರಾಷ್ಟ್ರ, ಆಂಧ್ರಪ್ರದೇಶ, ಮಧ್ಯಪ್ರದೇಶ, ಕರ್ನಾಟಕ ಆಡಳಿತದ ವ್ಯಾಪ್ತಿಗೆ ಒಳಪಟ್ಟಿದ್ದವು. ಚೈತ್ಯಾಲಯಗಳ, ಸ್ತೂಪಗಳ ನಿರ್ಮಾಣದಲ್ಲಿ ಪ್ರಮುಖ

ಪಾತ್ರವಹಿಸಿದ್ದಾರೆ. ನಾಣ್ಯಗಳ ಮುದ್ರಣ, ಮಡಕೆಗಳ ಉಪಯೋಗ, ಆರ್ಥಿಕ-ಸಾಮಾಜಿಕತೆಗೆ ಹಿಡಿದ ಕನ್ನಡಿ.

ಶಾತವಾಹನರ ಪ್ರಮುಖ ಪಟ್ಟಣವಾಗಿರುವ ಚಂದ್ರವಳ್ಳಿಯಲ್ಲಿ ಕಾಲುವೆ ತೊಡುವಾಗ ನಾಣ್ಯಗಳು ಕಂಡುಬಂದವು. ಅವುಗಳನ್ನು ಪರೀಕ್ಷಿಸಿ ಇ.ಜೆ. ರ್‍ಯಾಪ್ಸನ್ ಆಂಧ್ರಭೃತ್ಯರ ನಾಣ್ಯಗಳೆಂದು ಕರೆದರು.[೧೪] ಅಲ್ಲಿ ನಡೆದಂತಹ ಉತ್ಖನನಗಳಿಂದ ಸಾಕಷ್ಟು ಅವಶೇಷಗಳು ಶೋಧಿತಗೊಂಡಿವೆ. ಈ ಶೋಧನೆಯಲ್ಲಿ ಆರ್. ನರಸಿಂಹಚಾರ್ಯ, ಎಂ.ಎಚ್. ಕೃಷ್ಣ, ಮಾರ್ಟಿಮರ್ ವೀಲ್ಹರರು ಮತ್ತಿತರ ಸಂಶೋಧಕರ ಶ್ರಮವಿದೆ. ಬಿಳಿ ವರ್ಣದ ರೇಖೆಯುಳ್ಳ ಹಾಗೂ ಹೊಳಪುಳ್ಳ ಕಪ್ಪು-ಕೆಂಪು ಮಣ್ಣಿನ ಮಡಕೆಗಳು ಶೋಧಿತಗೊಂಡಿವೆ. ಮಹಾರಥಿಗಳಿಗೆ ಸಂಬಂಧಿಸಿದ 'ನಂದ ಮಹಾರಥಿ' ಎಂದು ಮುದ್ರಿತಗೊಂಡಿರುವ ಸೀಸದ ನಾಣ್ಯಗಳು ಚಿಪ್ಪಿನಕೆರೆಯಲ್ಲಿ ದೊರಕಿವೆ. ತುರುವನೂರಿನಲ್ಲಿ 'ರಾನೊಮುದನಂದಸ' ಎಂಬ ಬರಹವಿರುವ ಸೀಸದ ನಾಣ್ಯ ದೊರಕಿರುವುದನ್ನು ಗಮನಿಸಬಹುದು.[೧೫]

ಕದಂಬರು

ಕರ್ನಾಟಕದಲ್ಲಿ ಕ್ರಿ.ಶ. ೪ನೇ ಶತಮಾನದಲ್ಲಿ ಆಳ್ವಿಕೆ ಮಾಡಿದ ಅರಸು ಮನೆತನವೆಂದರೆ ಕದಂಬರು. ಸಾಮ್ರಾಜ್ಯ ಸ್ಥಾಪಕ ಮಯೂರಶರ್ಮ. ಬನವಾಸಿ ಇವರ ರಾಜಧಾನಿ ಆಗಿತ್ತು. ಇವರು ಚಿತ್ರದುರ್ಗ, ಉತ್ತರಕನ್ನಡ, ಧಾರವಾಡ, ಬೆಳಗಾವಿ, ಹಾವೇರಿ, ಶಿವಮೊಗ್ಗ, ದಾವಣಗೆರೆ ಜಿಲ್ಲೆಗಳಲ್ಲಿ ತಮ್ಮ ಹಿಡಿತವನ್ನು ಹೊಂದಿದ್ದರು. ಚಿತ್ರದುರ್ಗದ ಚಂದ್ರವಳ್ಳಿಯಲ್ಲಿ ಕದಂಬರ ಶಾಸನವಿದೆ. ಇದನ್ನು ಎಂ.ಎಚ್. ಕೃಷ್ಣ ಕ್ರಿ.ಶ. ೧೯೨೯ರಲ್ಲಿ ಶೋಧನೆಮಾಡಿ ಬೆಳಕಿಗೆ ತಂದರು. ಇದೇ ಶಾಸನವನ್ನು ಸ್ಥಳೀಯ ಸಂಶೋಧಕರಾದ ಬಿ. ರಾಜಶೇಖರಪ್ಪ ಪರೀಕ್ಷಿಸಿ ಶಾಸನದ ಭಾಷೆ ಪ್ರಾಕೃತವಲ್ಲ ಸಂಸ್ಕೃತ, ಮಯೂರಶರ್ಮನಲ್ಲ, ವರ್ಮ. ಕೆರೆಯನ್ನು ಹೊಸದಾಗಿ ಕಟ್ಟಿಸಿದ್ದಲ್ಲ, ಸದೃಢಪಡಿಸಿದೆಂಬ ವಿಚಾರವನ್ನು ಎಂಬ ವ್ಯಕ್ತಪಡಿಸಿದ್ದಾರೆ.[೧೬] ಈ ರೀತಿಯ ಅಭಿಪ್ರಾಯವನ್ನು ಕೆಲವರು ಬೆಂಬಲಿಸಿದರೆ, ಇನ್ನೂ ಕೆಲವರು ಬೆಂಬಲಿಸುವುದಿಲ್ಲ. ಹಾಗಾಗಿ ಈ ವಿಚಾರವು ಅಸ್ಪಷ್ಟತೆ ಮತ್ತು ಅಪೂರ್ಣತೆಗೆ ಕಾರಣವಾಗಿದೆ. ಅದೇನೇ ಇದ್ದರೂ ಅದು ಕದಂಬರ ಶಾಸನ ಎನ್ನುವುದಂತು ಸತ್ಯ.

ಬಾದಾಮಿ ಚಾಲುಕ್ಯರು

ಬಾದಾಮಿ ಚಾಲುಕ್ಯರು ಕ್ರಿ.ಶ. ೬ ರಿಂದ ಕ್ರಿ ಶ. ೮ನೇ ಶತಮಾನದವರೆಗೆ ಆಳ್ವಿಕೆ ಮಾಡಿದರು. ಜಯಸಿಂಹ ಬಾದಾಮಿ ಚಾಲುಕ್ಯರ ವಂಶದ ಮೂಲ ಪುರುಷ. ಮೊದಲನೆಯ ಪುಲಿಕೇಶಿ ಬಾದಾಮಿ ಕೋಟೆಯನ್ನು ಕಟ್ಟಿಸಿ ಸಾಮ್ರಾಜ್ಯದ ವಿಸ್ತರಣೆಗೆ ಅಡಿಪಾಯ ಹಾಕಿದ ದೊರೆ. ಒಂದನೇ ಕೀರ್ತಿವರ್ಮ, ಮಂಗಳೇಶ, ಎರಡನೇ ಪುಲಿಕೇಶಿ, ಒಂದನೇ ವಿಕ್ರಮಾದಿತ್ಯ, ಎರಡನೇ ವಿಕ್ರಮಾದಿತ್ಯ ರಾಜ ಪ್ರಮುಖರು. ಇವರ ಆಳ್ವಿಕೆಯ ಅವಧಿಯಲ್ಲಿ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶಗಳ

[illegible]

ಭೂ–ಭಾಗಗಳು ಇವರ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದವು. ಕೊನೆಯ ದೊರೆ ಎರಡನೇ ಕೀರ್ತಿವರ್ಮನು ರಾಷ್ಟ್ರಕೂಟ ದೊರೆ ದಂತಿದುರ್ಗನಿಂದ ಸೋತಿದ್ದರ ಪರಿಣಾಮವಾಗಿ ಆಡಳಿತ ಕೊನೆಗೊಂಡಿತು. ಬಾದಾಮಿ ಚಾಲುಕ್ಯ ಅರಸರುಗಳು ಗುಹಾಂತರ ದೇವಾಲಯ ಗಳನ್ನು ಹಾಗೂ ರಚನಾತ್ಮ ದೇವಾಲಯಗಳನ್ನು ನಿರ್ಮಿಸಿದರಲ್ಲದೆ, ನಾಗರ, ವೇಸರ, ದ್ರಾವಿಡ ಶೈಲಿಯಲ್ಲಿ ಕಟ್ಟಿರುವುದು ಗಮನಾರ್ಹ. ಚಾಲುಕ್ಯರ ಕಾಲದಲ್ಲಿ ನೊಳಂಬಾವಾಡಿ ೩೨,೦೦೦ ಪ್ರಾಂತ್ಯದ ವ್ಯಾಪ್ತಿಗೆ ಪ್ರಸ್ತುತ ಪ್ರದೇಶ ಒಳಪಟ್ಟಿದೆ.[೧೭] ಬಾದಾಮಿ ಚಾಲುಕ್ಯರ ವೈರಿಗಳು ಪಲ್ಲವರಾಗಿದ್ದರು. ಇವರಿಬ್ಬರ ನಡುವೆ ನಡೆಯುತ್ತಿದ್ದ ನಿರಂತರ ಕಾದಾಟದಿಂದಾಗಿ ಚಿತ್ರದುರ್ಗ ಪ್ರದೇಶ ಅಶಾಂತಿಯಿಂದ ಕೂಡಿತ್ತು.[೧೮] ಕ್ರಿ.ಶ. ೬೭೦ರ ಗಂಜಿಗಟ್ಟೆ ಶಾಸನದಲ್ಲಿ 'ಶ್ರೀ ಬಿಜಾಜೆ' ಎಂಬ ಉಲ್ಲೇಖವಿದ್ದು ಈ ಪದ ಬಾದಾಮಿ ಚಾಲುಕ್ಯರ ಲಿಪಿಯನ್ನು ಹೋಲುತ್ತಿರುವ ಕಾರಣ ಆಕಾಲಕ್ಕೆ ಸೇರಿಸಲಾಗಿದೆ.[೧೯]

ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯ ಅರಸ ಎರಡನೇ ಕೀರ್ತಿವರ್ಮನನ್ನು ಸೋಲಿಸುವುದರ ಮೂಲಕ ದಂತಿದುರ್ಗನು ಕ್ರಿ.ಶ. ೮ನೇ ಶತಮಾನದಲ್ಲಿ ಸಾಮ್ರಾಜ್ಯ ಸ್ಥಾಪಿಸಿದ. ಮಾನ್ಯಖೇಡ ಇವರ ರಾಜಧಾನಿಯಾಗಿತ್ತು. ಒಂದನೇ ಕೃಷ್ಣ, ಧ್ರುವ, ನಾಲ್ಕನೇ ಗೋವಿಂದ, ಮೂರನೇ ಕೃಷ್ಣ, ಆಳ್ವಿಕೆ ಮಾಡಿ ಹೋಗಿದ್ದಾರೆ. ಮೂರನೇ ಕೃಷ್ಣನ ಮಕ್ಕಳಾದ ಖೊಟ್ಟಿಗ ಮತ್ತು ಇಮ್ಮಡಿ ಕರ್ಕರ ಕಾಲದಲ್ಲಿ ಆಡಳಿತ ಕೊನೆಗೊಂಡಿತು. ಗೋದಾವರಿಯಿಂದ ಕಾವೇರಿ ಯವರೆಗೆ ಇವರ ರಾಜ್ಯ ವ್ಯಾಪಿಸಿತ್ತು. ರಾಷ್ಟ್ರಕೂಟರ ವಾಸ್ತುಶೈಲಿ ರಚಿತಗೊಂಡಿರುವ ಅಜಂತಾ, ಎಲ್ಲೋರ, ಎಲಿಫೆಂಟ್ ಪ್ರದೇಶಗಳು ಪ್ರಸಿದ್ಧಿ ಪಡೆದಿವೆ. ಪ್ರಸ್ತುತ ಪ್ರದೇಶದ ಸುತ್ತಮುತ್ತ ೩ನೇ ಗೋವಿಂದ, ೨ನೇ ಅಮೋಘವರ್ಷ, ೩ನೇ ಕೃಷ್ಣ, ಖೊಟ್ಟಿಗ ಮತ್ತು ೨ನೇ ಕರ್ಕನ ಶಾಸನಗಳು ಕಂಡುಬಂದಿವೆ.[೨೦] ಕೂನಬೇವಿನಲ್ಲಿರುವ ವೀರಗಲ್ಲುಗಳು ಮತ್ತು ಹಾಯ್ಕಲ್ಲಿನ ರಾಮಲಿಂಗ ರಾಷ್ಟ್ರಕೂಟರ ಕಾಲಕ್ಕೆ ಸೇರಿವೆ.[೨೧]

ನೊಳಂಬ ಪಲ್ಲವರು

ನೊಳಂಬರ ಸಾಮ್ರಾಜ್ಯ ತ್ರಿಯನನಿಂದ ಸ್ಥಾಪಿತಗೊಂಡಿತು. ಹೆಂಜೇರು ಅಥವಾ ಹೇಮಾವತಿ ಮೊದಲ ರಾಜಧಾನಿ. ನಂತರ ಕಂಪ್ಲಿಗೆ ವರ್ಗಾವಣೆಗೊಂಡಿತು. ಮಂಗಳ, ಸಿಂಹಪೂತ, ಚಾರುಪೊನ್ನೇರ, ಪೊಳಾಳಚೋರ, ಮಹೇಂದ್ರ, ನನ್ನಿಗ ಅಯ್ಯಪ್ಪದೇವ, ಅಣ್ಣಿಗ ಮತ್ತು ದಿಲೀಪ ಆಳ್ವಿಕೆ ನಡೆಸಿದ ರಾಜರು. ಗಂಗ, ರಾಷ್ಟ್ರಕೂಟ, ಬಾಣರು ಮೊದಲಾದ ರಾಜ ಮನೆತನಗಳೊಂದಿಗೆ ಸಂಬಂಧವನ್ನು ಹೊಂದಿದ್ದರು. ನೊಳಂಬರು ಕೊನೆಯ ವೇಳೆಗೆ ೩೨,೦೦೦ ಪ್ರದೇಶಗಳನ್ನು ಅಧೀನಕ್ಕೆ ತೆಗೆದುಕೊಂಡಾಗ ಸಾಮ್ರಾಜ್ಯ ವಿಸ್ತಾರವಾಯಿತು. ಚಿತ್ರದುರ್ಗ, ತುಮಕೂರು, ಬಳ್ಳಾರಿ, ಅನಂತಪುರ, ಕೋಲಾರ, ಬೆಂಗಳೂರು ಜಿಲ್ಲೆಗಳು ಆ ವ್ಯಾಪ್ತಿಗೆ ಬರುತ್ತವೆ.[೨೨]

ಪ್ರಸ್ತುತ ಬಾಗೇನಾಳ್‌ನಲ್ಲಿ ಪಾಳು ಬಿದ್ದ ಈಶ್ವರ ದೇವಾಲಯದ ಮುಂದೆ ಕ್ರಿ.ಶ. ೯೧೮ರ ಶಾಸನವಿದೆ. ತುರುವನೂರಿನ ರಾಮಲಿಂಗ ದೇವಾಲಯದ ಲಿಂಗ ಕ್ರಿ.ಶ. ೮ನೇ ಶತಮಾನಕ್ಕೆ ಸೇರಿದ್ದು, ಅದರಲ್ಲಿ ಗಾವುಂಡರು ಸೇರಿಕೊಂಡು ದೇವಸ್ಥಾನಕ್ಕೆ ಜಾಗ ನೀಡಿದ್ದರೆಂಬ ವಿಷಯ ದಾಖಲಾಗಿದೆ.[೨೩] ಕಡಬನಕಟ್ಟೆಯ ಆಂಜನೇಯ ದೇವಾಲಯ ಹಿಂಭಾಗದಲ್ಲಿ ತುರುಗೋಳ್ ಶಾಸನಕಲ್ಲು ಸಂರಕ್ಷಿತಗೊಂಡಿದ್ದು, ಇದು ನೊಳಂಬರ ಕಾಲಕ್ಕೆ ಸೇರಿದೆ. ಹಾಯ್ಕಲ್ಲಿನ ಶಾಸನೋಕ್ತ ವೀರಗಲ್ಲು ಮತ್ತು ಬಾಗೇನಾಳಿನ ಸಪ್ತಮಾತೃಕೆ ಶಿಲ್ಪ ರಾಷ್ಟ್ರಕೂಟರ ಕಾಲದ ಆಕಾರಗಳಾಗಿವೆ.

ಕಲ್ಯಾಣ ಚಾಲುಕ್ಯರು

ರಾಷ್ಟ್ರಕೂಟ ದೊರೆ ೨ನೇ ಕರ್ಕನನ್ನು ೨ನೇ ತೈಲಪನನ್ನು ಸೋಲಿಸಿ ಕ್ರಿ.ಶ. ೯೭೩ರಲ್ಲಿ ರಾಜ್ಯ ಸ್ಥಾಪಿಸಿದನು. ಬಸವಕಲ್ಯಾಣ ಇವರ ರಾಜಧಾನಿ. ಆಂಧ್ರಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ಪ್ರದೇಶಗಳು ಸಾಮ್ರಾಜ್ಯದ ವ್ಯಾಪ್ತಿಗೆ ಒಳಪಟ್ಟಿದ್ದವು. ಸತ್ಯಾಶ್ರಯ ಇರೆವಬೆಡಂಗ, ಇಮ್ಮಡಿ ಜಯಸಿಂಹ, ೧ನೇ ಸೋಮೇಶ್ವರ, ೨ನೇ ಸೋಮೇಶ್ವರ, ೬ನೇ ವಿಕ್ರಮಾದಿತ್ಯ, ೩ನೇ ಸೋಮೇಶ್ವರ, ೨ನೇ ಜಗದೇಕಮಲ್ಲ ಪ್ರಸಿದ್ಧರಾದ ಅರಸರು. ಮುಮ್ಮಡಿ ತೈಲಪನ ಮಗನಾದ ೪ನೇ ಸೋಮೇಶ್ವರ ಕಲಚೂರಿಗಳನ್ನು ಎದುರಿಸಲಾಗದೆ ಬನವಾಸಿ ಕದಂಬರ ಆಶ್ರಯ ಪಡೆದನು. ಈ ಸಂದರ್ಭದಲ್ಲಿ ಹೊಯ್ಸಳರು ಪ್ರಾಬಲ್ಯಕ್ಕೆ ಬಂದಿದ್ದರ ಪರಿಣಾಮ ಕಲ್ಯಾಣ ಚಾಲುಕ್ಯರ ಸಂಸ್ಥಾನ ಕ್ರಿ.ಶ. ೧೧೫೦ರಲ್ಲಿ ಪತನಗೊಂಡಿತು. ಪ್ರಸ್ತುತ ಚಳ್ಳಕೆರೆ ಪ್ರದೇಶಗಳಲ್ಲಿ ಎರಡು ಶಾಸನಗಳು ದೊರಕಿದ್ದು,[೨೪] ೨ನೇ ಜಯಸಿಂಹ ರೊಡ್ಡಾ, ಶಿರಾ, ನೊಳಂಬವಾಡಿ, ಕದಂಬಳಿಗೆ ಮುಂತಾದ ಪ್ರಾಂತ್ಯಗಳನ್ನು ಆಳುತ್ತಿದ್ದನೆಂಬ ವಿವರಣೆ ನೀಡುತ್ತವೆ. ೬ನೇ ವಿಕ್ರಮಾದಿತ್ಯನನ್ನು ತ್ರಿಭುವನಮಲ್ಲನೆಂದು ಕರೆದಿರುವ ಶಾಸನವೆಂದರೆ ಚಿತ್ರದುರ್ಗದ ಗಾರೆಹಟ್ಟಿ ಶಾಸನ.[೨೫]

ಕಲಚೂರಿಗಳು

ಉತ್ತರಭಾರತ ಮತ್ತು ಮಧ್ಯಭಾರತ ಹಾಗೂ ದಕ್ಷಿಣಭಾರತವನ್ನು ಕ್ರಿ.ಶ. ೫೫೦ ರಿಂದ ಕ್ರಿ.ಶ. ೧೧೮೩ರವರೆಗೆ ಆಳ್ವಿಕೆ ಮಾಡಿದ್ದಾರೆ. ಕಟಚೂರಿ, ಕಲಟ್ ಚೂರಿ, ಕಲಿಚೂರಿ ಎಂಬ ಪದಗಳು ಶಾಸನಗಳಲ್ಲಿ ಕಂಡುಬಂದಿದ್ದು,[೨೬] ಕಲಚೂರಿ ಎಂಬ ಪದ ಹೀಗೆ ಬಂದಿರಬಹುದು ಎಂದು ಸ್ಪಷ್ಟಪಡಿಸಬಹುದು. ಉತ್ತರ ಭಾರತದ ಕಲಚೂರಿಗಳು ನಾಲ್ಕು ಶಾಖೆಗಳಾಗಿ ಒಡೆದು ಹಿಡೀ ಭಾರತವನ್ನೇ ಆಳ್ವಿಕೆ ಮಾಡಿದ್ದಾರೆ. ಸರಯೂಪುರ, ರತ್ನಪುರ, ತ್ರೀಪುರಿ, ಗುಜರಾತ್, ಖಾನ್‌ದೇಶ ಮತ್ತು ಮಾಳವಾಡ ಪ್ರದೇಶಗಳಲ್ಲಿ ಇವರ ಶಾಖಾ ಕೇಂದ್ರಗಳಿದ್ದವು. ಜೋಗಮ ಕಲಚೂರಿಗಳ ವಂಶದ ಸ್ಥಾಪಕ. ಪೆರ್ಮಾಡಿ, ಬಿಜ್ಜಳ, ಮೈಲುಗಿದೇವ, ಸೋವಿದೇವ, ಸಂಕಮ, ಅಹವಮಲ್ಲ, ಸಿಂಗನ, ಬರ್ಮರಸರು ಕಲಚೂರಿಗಳ ಆಡಳಿತಗಾರರಾಗಿದ್ದರು. ಕ್ರಿ.ಶ. ೧೧೮೩ರಲ್ಲಿ ದಂಡನಾಯಕ ಬರ್ಮರಸ

[illegible]

[illegible]

[illegible]

ಕಲ್ಯಾಣದ ಚಾಲುಕ್ಯ ೪ನೇ ಸೋಮೇಶ್ವರನಿಗೆ ಅಧಿಕಾರ ಬಿಟ್ಟುಕೊಟ್ಟನು.[೨೭] ಈ ಮೂಲಕ ಕರ್ನಾಟಕದಲ್ಲಿ ಕಲಚೂರಿಗಳ ಆಳ್ವಿಕೆ ಅಂತ್ಯಗೊಂಡಿತು.

ಬಿಜ್ಜಳ ಕಲ್ಯಾಣದಲ್ಲಿ ಕಲಚೂರಿಗಳ ಆಳ್ವಿಕೆಗೆ ಅಡಿಪಾಯ ಹಾಕಿದನು. ಮೂರನೇ ತೈಲಪನು ಕ್ರಿ.ಶ. ೧೧೫೫ ರಿಂದ ೧೧೬೧ವರೆಗೆ ಹೆಸರಿಗೆ ಮಾತ್ರ ಚಕ್ರವರ್ತಿಯಾಗಿದ್ದನು. ಆದರೆ ಬಿಜ್ಜಳನು ನೈಜ ಸಾವ್ರಾಟನಾಗಿದ್ದಾನೆಂದು ತಿಳಿದುಬರುವುದು. ಬಿಜ್ಜಳನ ಪೂರ್ವಿಕರು ಚೇದಿ ಕಲಚೂರಿಗಳಾಗಿದ್ದರು. ಕ್ರಿ.ಶ. ೧೧೬೮ರ ಬಳ್ಳಿಗಾವಿ ಶಾಸನವು ಬಿಜ್ಜಳನು ತನ್ನ ಆಳ್ವಿಕೆ ಕಾಲದಲ್ಲಿಯೇ ಪ್ರೀತಿಯ ಪುತ್ರನಾದ ಸೋವಿದೇವನಿಗೆ ಉತ್ತರಾಧಿಕಾರತ್ವ ನೀಡಿದನೆಂದು ತಿಳಿಸುತ್ತದೆ.[೨೮] ಇದೇ ಸಂದರ್ಭದ ಪ್ರಸ್ತುತ ಅಧ್ಯಯನ ಪ್ರದೇಶದ ಯಳಗೋಡು ಶಾಸನದಲ್ಲಿ ಸೋವಿದೇವನ ಉಲ್ಲೇಖವಿದೆ.[೨೯] ಇದರಲ್ಲಿ ದೇವಸ್ಥಾನದ ನೈವೇದ್ಯಕ್ಕೆ, ನಂದಾದೀವಿಗೆ, ಆಹಾರಕ್ಕಾಗಿ ಹಾಗೂ ಇತರೆ ವೆಚ್ಚಗಳಿಗಾಗಿ ಪಂಡಿತರಿಗೆ ಗದ್ದೆಯನ್ನು ದಾನ ಬಿಟ್ಟಿದ್ದರೆಂದು ಉಕ್ತವಾಗಿದೆ. ಆದ್ದರಿಂದ ಪ್ರಸ್ತುತ ಪ್ರದೇಶ ಕಲಚೂರಿಗಳ ಆಳ್ವಿಕೆಗೆ ಒಳಪಟ್ಟಿತ್ತೆಂದು ಸ್ಪಷ್ಟಪಡಿಸಬಹುದು.

ಹೊಯ್ಸಳರು

ಕ್ರಿ.ಶ. ೧೦೨೨ ರಿಂದ ಕ್ರಿ.ಶ. ೧೩೪೨ರವರೆಗೆ ಕರ್ನಾಟಕದಲ್ಲಿ ಆಳಿದ ಅರಸು ಮನೆತನ. ಸಳ ಸಾಮ್ರಾಜ್ಯ ಸ್ಥಾಪಕ. ದ್ವಾರಸಮುದ್ರ ಇವರ ರಾಜಧಾನಿ. ವಿನಯಾದಿತ್ಯ, ಎರೆಯಂಗ, ಒಂದನೇ ಬಲ್ಲಾಳ, ವಿಷ್ಣುವರ್ಧನ, ವಿನಯಾದಿತ್ಯ, ಒಂದನೇ ನರಸಿಂಹ, ಎರಡನೇ ಬಲ್ಲಾಳ, ಎರಡನೇ ನರಸಿಂಹ, ಸೋಮೇಶ್ವರ, ಮೂರನೇ ನರಸಿಂಹ, ರಾಮನಾಥ, ಮೂರನೇ ಬಲ್ಲಾಳ, ವಿಶ್ವನಾಥ, ನಾಲ್ಕನೇ ಬಲ್ಲಾಳ ರವರ ಆಳ್ವಿಕೆಯಲ್ಲಿ ಕರ್ನಾಟಕ ಸಾಂಸ್ಕೃತಿಕ ಕೊಡುಗೆಯನ್ನು ಪಡೆದಿದೆ. ಹಳೇಬೀಡು, ಬೇಲೂರು ದೇವಾಲಯಗಳು ವಿಶ್ವವಿಖ್ಯಾತಿ ಪಡೆದಂತವುಗಳಾಗಿವೆ.

ಪ್ರಸ್ತುತ ಪ್ರದೇಶದಿಂದ ೧೦ ಕಿ.ಮೀ. ದೂರದಲ್ಲಿ ಕಲ್ಲೇದೇವರಪುರ ದೇವಾಲಯವಿದೆ. ಇದು ಹೊಯ್ಸಳರ ಕಾಲದ್ದು. ಈ ದೇವಾಲಯವು ವಾಸ್ತುಶೈಲಿಯಲ್ಲಿ ಮಹತ್ವವನ್ನು ಪಡೆದಿದೆ. ಶಾಸನವೊಂದು ದೇವಾಲಯದಲ್ಲಿದ್ದು ಸೋಮೇಶ್ವರ ಗಂಗವಾಡಿ ೯೬,೦೦೦ ಮತ್ತು ನೊಳಂಬವಾಡಿ ೩೨,೦೦೦ ನಾಡುಗಳನ್ನು ಆಳುತ್ತಿದ್ದ ಮೊದಲಾದ ವಿವರಣೆಯನ್ನು ನೀಡುತ್ತದೆ.

ವಿಜಯನಗರ

ಹೊಯ್ಸಳರ ಅಧೀನದಲ್ಲಿದ್ದ ಬುಕ್ಕ-ಹರಿಹರರಿಂದ ಸ್ವತಂತ್ರವಾಗಿ ಹಿಂದೂ ಮತ್ತು ಮುಸ್ಲಿಂರಲ್ಲಿ ಸಾಮರಸ್ಯವನ್ನು ತರಲು ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಅಥವಾ ಬಿಜಯನಗರ ಸ್ಥಾಪಿತಗೊಂಡಿತು. ಮೊದಲು ಆನೆಗೊಂದಿಯಲ್ಲಿದ್ದ ರಾಜಧಾನಿ ಹಂಪೆಗೆ ಸ್ಥಳಾಂತರಗೊಂಡಿತು. ಹಂಪೆಯಲ್ಲಿ ಸಂಗಮ, ಸಾಳುವ, ತುಳುವ, ಅರವೀಡು ವಂಶದವರು

ಆಳ್ವಿಕೆ ಮಾಡಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಇವರ ಕಾಲಾವಧಿಯಲ್ಲಿ ಬಂದಂತಹ ವಿದೇಶಿಗರು ಸಾಮ್ರಾಜ್ಯದಲ್ಲಿ ಕಂಡಂತಹ ವಿಚಾರಗಳನ್ನು, ಅನುಭವಗಳನ್ನು ಚರಿತ್ರೆ ಪುಟಗಳಲ್ಲಿ ದಾಖಲಿಸಿದ್ದಾರೆ. ಅವುಗಳು ವಿಜಯನಗರ ಸಾಮ್ರಾಜ್ಯದ ಇತಿಹಾಸಕ್ಕೆ ಆಧಾರ. ಭವ್ಯ ಸಾಮ್ರಾಜ್ಯವೆಂದು ದಕ್ಷಿಣಭಾರತದಲ್ಲಿ ತಲೆಯೆತ್ತಿತ್ತು, ಆದರೆ ಕ್ರಿ.ಶ. ೧೫೬೫ರಲ್ಲಿ ರಕ್ಕಸತಂಗಡಿ ಕದನವಾಗಿ ಬಹುಮನಿ ಸುಲ್ತಾನರಿಗೆ ತಲೆಬಾಗಿತು. ಕ್ರಿ.ಶ. ೧೩೫೫ ಮತ್ತು ೧೩೫೬ರ ಶಾಸನಗಳು ಮಲ್ಲಿನಾಥ ಒಡೆಯನು ಬೆಮ್ಮತ್ತಕಲ್ಲನ್ನು (ಚಿತ್ರದುರ್ಗ) ಕೇಂದ್ರವಾಗಿ ಮಾಡಿಕೊಂಡು ನೇರವಾಗಿ ಆಳ್ವಿಕೆಗೆ ಒಳಪಡಿಸಿದ್ದೆನೆಂದು ಸೂಚಿಸುತ್ತವೆ.[೩೦] ೧೫ನೇ ಶತಮಾನದ ನಂತರ ಪಾಳೆಯಗಾರರ ಮೂಲಕ ಪರೋಕ್ಷವಾಗಿ ಆಡಳಿತದ ವ್ಯಾಪ್ತಿಗೆ ಒಳಪಡಿಸಿದರು. ಅಚ್ಯುತರಾಯನ ಕಾಲದಲ್ಲಿ ೨೦೦ಕ್ಕಿಂತ ಹೆಚ್ಚು ನಾಯಕರಿಗೆ ಬೆಮ್ಮತ್ತುಕಲ್ಲು ಪ್ರದೇಶವನ್ನು ಭಾಗ ಮಾಡಿ ಕೊಡಲಾಗಿತ್ತೆಂದು ತಿಳಿದು ಬಂದಿದೆ.[೩೧]

ಪಾಳೆಯಗಾರರು

ಕರ್ನಾಟಕದ ಪಾಳೆಯಗಾರರಲ್ಲಿ ಚಿತ್ರದುರ್ಗದ ಪಾಳೆಯಗಾರರು ಕ್ರಿ.ಶ ೧೫೫೮ ರಿಂದ ೧೭೭೯ರವರೆಗೆ ಆಳ್ವಿಕೆ ಮಾಡಿದರು. ಹರಪ್ಪನಹಳ್ಳಿ, ರಾಯದುರ್ಗ, ಗುಡೇಕೋಟೆ, ಬಿಳಿಚೋಡು, ತರೀಕೆರೆ ಪಾಳೆಯ ಪಟ್ಟುಗಳೊಡನೆ ಸಂಬಂಧವನ್ನು ಹೊಂದಿದ್ದರು. ತಿಮ್ಮಣ್ಣನಾಯಕ, ಒಬಣ್ಣನಾಯಕ(೧ನೇ ಮದಕರಿ), ಒಂದನೇ ಕಸ್ತೂರಿ ರಂಗಪ್ಪ, ಇಮ್ಮಡಿ ಮದಕರಿ, ಒಬಣ್ಣ ನಾಯಕ, ಲಿಂಗಣ್ಣ, ಭರಮಣ್ಣ, ನಾಯಕ ಹಿರೇಮದಕರಿ, ೨ನೇ ಕಸ್ತೂರಿರಂಗಪ್ಪ, ೫ನೇ ಮದಕರಿ ನಾಯಕರು ಏಳು ಸುತ್ತಿನ ಕೋಟೆಯನ್ನು ಕಟ್ಟಿ ಪ್ರಖ್ಯಾತಿ ಗೊಳಿಸಿದ್ದಾರೆ. ಚಿತ್ರದುರ್ಗದ ಪಾಳೆಯಗಾರರಲ್ಲಿ ವೀರವನಿತೆ ಓನಕೆ ಒಬವ್ವ ಕ್ರಿ.ಶ. ೧೭೫೫-೧೭೭೯ರ ಅವಧಿಯಲ್ಲಿ ಜೀವಿಸಿದ್ದಳು.[೩೨] ಪಾಳೆಯಗಾರರು ಅಧಿಕಾರವಧಿಯಲ್ಲಿ ದಾನದತ್ತಿ ನೀಡಿ, ದೇವಾಲಯಗಳನ್ನು ಕಟ್ಟಿಸಿದರು.

ಪ್ರಸ್ತುತ ಪ್ರದೇಶದಲ್ಲಿ ದೊರಕುವ ಶಾಸನಗಳು, ಕೋಟೆಗಳು,. ಬುರುಜುಗಳು, ಕಾವಲುಗೋಪುರಗಳು, ದೇವಾಲಯಗಳು ಪಾಳೆಯಗಾರರ ಕೊಡುಗೆಗಳಾಗಿವೆ. ಕ್ರಿ.ಶ. ೧೭೭೬ರಲ್ಲಿ ಪಾಳೆಯಗಾರರ ಪರವಾಗಿ ಧರ್ಮಣ್ಣನಿಗೂ ಹಾಗೂ ಮರಾಠರ ಪರವಾಗಿದ್ದ ವಿರೋಜಿಗೆ ಯುದ್ಧವಾಗಿತ್ತು.[೩೩] ಈ ಹೋರಾಟದಲ್ಲಿ ಪಾಳೆಯಗಾರರು ಸೋತು ಮರಾಠರಿಗೆ ಪೊಗದಿಯನ್ನು ನೀಡಿದರು. ಇಂದಿಗೂ ಕೂನಬೇವಿನ ಜಮಿನ್ದಾರರ ಮನೆಯಲ್ಲಿ ಪಾಳೆಯ ಗಾರರ ಖಡ್ಗ, ಬಾಕು ಇರುವುದನ್ನು ಗಮನಿಸಬಹುದು. ಸಿದ್ದವ್ವ ಎಂಬುವಳಿಗೆ ಕಟ್ಟಿಸಿದ ಕೋಟೆ ಸಿದ್ದವ್ವನದುರ್ಗದಲ್ಲಿದೆ. ಮತ್ತೊಂದು ಕ್ರಿ.ಶ. ೧೭ನೇ ಶತಮಾನದಲ್ಲಿ ರಚಿತಗೊಂಡಿರ ಬಹುದಾದ ಕೋಟೆ ತುರುವನೂರಿನಲ್ಲಿದೆ.[೩೪] ಈ ಕೋಟೆಯ ಲಕ್ಷಣ ಮತ್ತು ಹರತಿ ಪಾಳೆಯಗಾರರಿಂದ ರಚಿತಗೊಂಡ ಐಮಂಗಲ ಕೋಟೆಯ ಲಕ್ಷಣಗಳು ಒಂದೇ ರೀತಿ ಯದ್ದು, ಅಲ್ಲದೆ ಕೋಟೆಯ ಮುಂದೆ ರಾಮಲಿಂಗ ದೇವಾಲಯದಲ್ಲಿ ನೊಳಂಬ

ಶಾಸನವಿದೆ. ಕೋಟೆಯೊಳಗಿರುವ ಯಜಮಾನನ ಹೆಸರು ಐಯ್ಯಣ್ಣ. ಈ ಹಿನ್ನೆಲೆಯಲ್ಲಿ ತುರುವನೂರು ಕೋಟೆ ನೊಳಂಬ ಪಲ್ಲವರ ಕಾಲದ್ದಾಗಿರಬಹುದೆಂದು ಅಭಿಪ್ರಾಯ ಪಡಬಹುದು. ಕೂನಬೇವಿನಲ್ಲಿ ಕಾವಲು ಗೋಪುರ ಮನೆಯಾಗಿ ಪರಿವರ್ತನೆಗೊಂಡಿದೆ. ವೀರಮದಕರಿಪುರದಲ್ಲಿಯ ಕಾವಲುಗೋಪರ ಸ್ವಲ್ಪಮಟ್ಟಿಗೆ ನಾಶಗೊಂಡಿದೆ. ಈ ಬೇಚಾರ ಗ್ರಾಮಕ್ಕೆ ಹೊಂದಿಕೊಂಡಂತೆ ಈಶ್ವರ, ಆಂಜನೇಯ ದೇವಾಲಗಳು ಕಂಡುಬರುವವು. ಚಿಕ್ಕಪ್ಪನಹಳ್ಳಿಯಲ್ಲಿ ಈಶ್ವರ, ಆಂಜನೇಯ ದೇವಾಲಗಳಿದ್ದು ಪಾಳೆಯಗಾರರ ಕಾಲದ ವಾಸ್ತುಶೈಲಿಯಲ್ಲಿ ನಿರ್ಮಾಣಗೊಂಡಿವೆ.

ಹೈದರ್ ಮತ್ತು ಟಿಪ್ಪು

ಹೈದರಾಲಿಯು ಕ್ರಿ.ಶ. ೧೭೨೧ರಲ್ಲಿ ಬೂದಿಕೋಟೆಯ ಫತೆಮಹಮ್ಮದ್ ಮಗನಾಗಿ ಜನಿಸಿದನು. ತನ್ನ ಪ್ರೌಢ ವ್ಯವಸ್ಥೆ ಶಿರಾದ ಆಲಿಖಾನ್ ಮಗಳಾದ ಬೇಗಂಳನ್ನು ವಿವಾಹ ವಾಗಿ ಶಿರಾವನ್ನು ವಶಪಡಿಸಿಕೊಂಡನು. ಅಲ್ಲಿಂದ ಮೈಸೂರಿಗೆ ಬಂದು ಕ್ರಿ.ಶ. ೧೭೫೮-೬೦ರವರೆಗೆ ದಳವಾಯಿಯಾಗಿ ತನ್ನ ಚಾಣಕ್ಷತನದಿಂದ ೧೭೬೧ರಲ್ಲಿ ಮೈಸೂರಿನ ನವಾಬ ನಾದನು.

ಈ ಸಂದರ್ಭದಲ್ಲಿ ಪ್ರಬಲವಾಗಿದ್ದ ಪಾಳೆಪಟ್ಟುಗಳೆಂದರೆ ಚಿತ್ರದುರ್ಗ ಮತ್ತು ಬಿದನೂರು. ಕ್ರಿ.ಶ. ೧೭೬೨ರಲ್ಲಿ ಹೈದರ್ ಚಿತ್ರದುರ್ಗದ ಮೇಲೆ ದಾಳಿ ಮಾಡಿದಾಗ ಅಪಾರ ಸೈನ್ಯ ಕಂಡು ಹಿಂತಿರುಗಿದನು. ಕ್ರಿ.ಶ. ೧೭೭೯ರಲ್ಲಿ ಐದನೇ ಮದಕರಿನಾಯಕ ಚನ್ನಗಿರಿ, ಬಸವಪಟ್ಟಣ, ಸಂತೇಬೆನ್ನೂರುಗಳಿಗೆ ಕೊಳ್ಳೆ ಹೊಡೆಯಲು ಹೋಗಿದ್ದಾಗ, ಹೈದರಾಲಿ ಮಗನಾದ ಟಿಪ್ಪು ತಂದೆಯ ಪರವಾಗಿ ಚಿತ್ರದುರ್ಗದ ಕೋಟೆಗೆ ಸೈನ್ಯ ನುಗ್ಗಿಸಿದ. ತರುವಾಯ ಹೈದರ್ ಒಪ್ಪಂದಕ್ಕೆ ಕರೆದು ಮೋಸದಿಂದ ಟಿಪ್ಪುವಿನ ಉಸ್ತುವಾರಿ ಯಲ್ಲಿ ಮದಕರಿನಾಯಕ ಮತ್ತು ಮಕ್ಕಳನ್ನು ಸೆರೆ ಹಿಡಿದು ಶ್ರೀರಂಗಪಟ್ಟಣಕ್ಕೆ ಸಾಗಿಸ ಲಾಯಿತು. ಹೀಗೆ ೨೩೦ ವರ್ಷಗಳ ಕಾಲ ಆಳಿದ ಚಿತ್ರದುರ್ಗ ಪಾಳೆಯಗಾರರು ಇತಿಹಾಸ ದಲ್ಲಿ ದುರಂತವಾಗಿ ಕೊನೆಗೊಂಡರು.

ತುರುವನೂರಿನಲ್ಲಿ ಸ್ವಾತಂತ್ರ್ಯ ಚಳುವಳಿ

ಚಿತ್ರದುರ್ಗ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಗಳು ನಡೆಯುತ್ತಿದ್ದವು. ಅದರಲ್ಲಿ ತುರುವನೂರು ಚಳುವಳಿ ಮುಖ್ಯ ಎನಿಸುತ್ತದೆ. ಯಾವುದೇ ಭಾಷೆ, ಜಾತಿ ಎಂಬ ಭೇದವೆನ್ನದೇ ಪಾಲ್ಗೊಂಡು ರಾಷ್ಟ್ರಪ್ರೇಮವನ್ನು ಮೆರೆದಿದ್ದಾರೆ.

೧೯೩೯ರಲ್ಲಿ ಅಕ್ಟೋಬರ್ ೧೮ ರಂದು ತುರುವನೂರಿನಲ್ಲಿ ಈಚಲು ಮರ ಕಡಿಯು ವುದರ ಮುಖಾಂತರ ಅರಣ್ಯ ಸತ್ಯಾಗ್ರಹ ಆರಂಭಗೊಂಡಿತು. ಭಾಗೀರಥಮ್ಮ, ಶ್ರೀನಿವಾಸ್, ಎಸ್. ನಿಜಲಿಂಗಪ್ಪ, ವಾಸುದೇವರಾವ್, ಬಳ್ಳಾರಿ ಸಿದ್ದಮ್ಮ, ಪಿ.ಎಸ್. ಶ್ರೀನಿವಾಸ್, ಎಸ್.ಎನ್. ಚಿಂದೂರ್, ಮೂರ್ತಿಚಾರ್ ಭಾಗವಹಿಸಿದ್ದರು. ರಾಜಶೇಖರಯ್ಯ ನೇತೃತ್ವದಲ್ಲಿ

೧೫ ಮುಖಂಡರ ತಂಡ ಬಂಧಿತಗೊಂಡಿತು. ನಂತರ ಬಳ್ಳಾರಿ ಸಿದ್ದಮ್ಮ ಮತ್ತು ಸೀತರಾಮರೆಡ್ಡಿ ನೇತೃತ್ವದಲ್ಲಿ ಅಕ್ಟೋಬರ್ ೨೦ ರಂದು ಬಿರುಸಾಗಿ ಆರಂಭಗೊಂಡು ಒಟ್ಟು ೪೪೫ ಈಚಲು ಮರಗಳನ್ನು ಕಡಿಯಲಾಯಿತು. ಪುಂಡಾ ಮೊಕದ್ದಮೆಯನ್ನು ರದ್ದುಪಡಿಸುವಂತೆ ಜನತೆಯ ಪರವಾಗಿ ತುರುವನೂರಿನ ಗೋವಿಂದರೆಡ್ಡಿ ಮಹಾರಾಜರಿಗೆ ಮನವಿ ಪತ್ರವನ್ನು ಸಲ್ಲಿಸುವಂತೆ ಗಾಂಧೀಯವರಿಗೆ ಬಿನ್ನವಿಸಿಕೊಂಡರು.[೨೫] ತತ್ಪರಿಣಾಮವಾಗಿ ಇಂದು ತುರುವನೂರಿನಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ನೋಡಬಹುದು ಹಾಗೂ ಹೋರಾಟದ ನೆನಪಿಗಾಗಿ ಗಾಂಧೀಜಿಯ ಕಂಚಿನ ಪ್ರತಿಮೆ ಸ್ಮಾರಕವಾಗಿ ಪ್ರತಿಷ್ಠಾಪಿತ ಗೊಂಡಿದೆ.

ಟಿಪ್ಪಣಿಗಳು

೧. ಗಿರಿಜಾ ಟಿ., **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ಪು-೧೦೨.

೨. ತಿಪ್ಪೇಸ್ವಾಮಿ ಎಸ್., **ರಕ್ಷಣಾ ವಾಸ್ತುಶಿಲ್ಪ : ಚಿತ್ರದುರ್ಗ ಜಿಲ್ಲೆ,** ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ, ೨೦೦೪, ಪು-೨೫೦.

೩. **ತುರುವನೂರಿನ ನಾಡಕಛೇರಿಯಲ್ಲಿ ಪಡೆದ ಮಾಹಿತಿ.**

೪. **ಕನ್ನಡ ಪ್ರಭ,** ೧೯-೦೩-೨೦೧೦, ಪು-೩.

೫. ಸುರೇಶ್ ಬಿ., **ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ದೇವಾಲಯಗಳು,** ೨೦೦೯, ಪು-೧೧.

೬. ಶಿವತಾರಕ್ ಕೆ.ಬಿ., **ಕರ್ನಾಟಕದ ಪುರಾತತ್ವ ನೆಲೆಗಳು,** ೨೦೦೧, ಪು-೨೬೩.

೭. ಅದೇ, ಪು-೨೬೦.

೮. ಅ. ಸುಂದರ, **ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ,** ೧೯೭೩, ಪು-೩೬.

೯. ಶಿವತಾರಕ್ ಕೆ.ಬಿ., **ಪೂರ್ವೋಕ್ತ,** ೨೦೦೧, ಪು-೫.

೧೦. ವೆಂಕಟರತ್ನಂ ಎ.ವಿ. ಮತ್ತು ಪದ್ಮ ಎಂ.ಬಿ., **ಇತಿಹಾಸ ಸಂಶೋಧನಾ ಮಾರ್ಗ,** ಪು-೧.

೧೧. ಲಕ್ಷ್ಮಣ್ ತೆಲಗಾವಿ, **ಮೌರ್ಯ ಮತ್ತು ಶಾತವಾಹನಯುಗ,** ೨೦೦೪, ಪು-೩೭.

೧೨. ಸೂರ್ಯನಾಥ ಯು.ಕಾಮತ್, **ಕರ್ನಾಟಕದ ಗ್ಯಾಸೆಟಿಯರ್, ಭಾಗ-೩,** ೧೯೮೬, ಪು-೫೧೧.

೧೩. ಲಕ್ಷ್ಮಣ್ ತೆಲಗಾವಿ, **ಚಂದ್ರವಳ್ಳಿ,** ೧೯೭೬, ಪು-೨.

೧೪. ಲಕ್ಷ್ಮಣ್ ತೆಲಗಾವಿ ಮತ್ತು ವೆಂಕಣ್ಣಚಾರ್ ಕೆ. (ಸಂ), **ಐತಿಹಾಸಿಕ ಚಿತ್ರದುರ್ಗ,** ೧೯೭೯, ಪು-೩೪.

೧೫. ಇ.ದ.ಸಂ.-೧೧, ೧೯೯೬, ಪು-೩೨-೩೩.

೧೬. ರಾಜಶೇಖರಪ್ಪ ಬಿ., **ದುರ್ಗಶೋಧನ**, ೨೦೦೧, ಪು-೬.

೧೭. ಲಕ್ಷ್ಮಣ್ ತೆಲಗಾವಿ, **ಪೂರ್ವೋಕ್ತ**, ೧೯೭೬, ಪು-೧೪.

೧೮. ಅದೇ, ಪು-೧೮.

೧೯. ರಾಜಶೇಖರಪ್ಪ ಬಿ. **ಇತಿಹಾಸ ಕಥನ**, ೨೦೦೧, ಪು-೧೨೪.

೨೦. ಲಕ್ಷ್ಮಣ್ ತೆಲಗಾವಿ, **ಪೂರ್ವೋಕ್ತ**, ೧೯೭೬, ಪು-೧೯.

೨೧. ಗೋಪಾಲ್ ಆರ್. (ಸಂ), **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ೨೦೦೫, ಪು-೭೦.

೨೨. ದಿವಾಕರ ಆರ್.ಆರ್., **ಕರ್ನಾಟಕ ಪರಂಪರೆ, ಸಂ-೧, ಆದಿಕಾಲದಿಂದ ವಿಜಯನಗರದ ಕಾಲದವರೆಗೆ**, ೨೦೦೬, ಪು-೧೬೪.

೨೩) ಎ.ಕ., ಜಗಳೂರು-೩೩ (ಹಳೆಯದು).

೨೪. ಲಕ್ಷ್ಮಣ್ ತೆಲಗಾವಿ, **ಪೂರ್ವೋಕ್ತ**, ೧೯೭೬, ಪು-೧೯.

೨೫. ಎ.ಕ., **ಚಿತ್ರದುರ್ಗ**-೩೩ (ಹಳೆಯದು).

೨೬. ದಿವಾಕರ ಆರ್.ಆರ್., **ಪೂರ್ವೋಕ್ತ**, ೨೦೦೬, ಪು-೩೪೬.

೨೭. ಅದೇ, ಪು-೩೫೨.

೨೮. ದಿವಾಕರ ಆರ್.ಆರ್., **ಕರ್ನಾಟಕ ಪರಂಪರೆ ಸಂ-೧**, ೨೦೦೬, ಪು-೩೫೧.

೨೯. ಎ.ಕ., **ಚಿತ್ರದುರ್ಗ**-೭೨ (ಹಳೆಯದು).

೩೦. ಲಕ್ಷ್ಮಣ್ ತೆಲಗಾವಿ, **ಪೂರ್ವೋಕ್ತ**, ೧೯೭೬, ಪು-೮೫.

೩೧. ಅದೇ, ಪು. ೬೧.

೩೨. ಲಕ್ಷ್ಮಣ್ ಅಳವಂಡಿ, **ಇತಿಹಾಸ ಕೋಶ-೨**, ೧೯೯೮, ಪು-೧೭.

೩೩. ಗಿರಿಜಾ ಟಿ., **ಚಿತ್ರದುರ್ಗ ಜಿಲ್ಲಾ ದರ್ಶಿನಿ**, ಪು-೯೦.

೩೪. ತಿಪ್ಪೇಸ್ವಾಮಿ ಎಸ್., **ಪೂರ್ವೋಕ್ತ**, ೨೦೦೪, ಪು-೨೫೦.

೩೫. ಗೋಪಾಲ ಆರ್. (ಸಂ), **ಪೂರ್ವೋಕ್ತ**, ೨೦೦೫, ಪು-೩೨೯.

• • •

ಅಧ್ಯಾಯ : ಮೂರು

ಪ್ರಾಗಿತಿಹಾಸ

೩.೧. ಹಳೇ ಶಿಲಾಯುಗ

೩.೨. ಸೂಕ್ಷ್ಮ ಶಿಲಾಯುಗ

೩.೩. ನವಶಿಲಾಯುಗ

೩.೪. ಬೃಹತ್ ಶಿಲಾಯುಗ

ಅಧ್ಯಾಯ : ಮೂರು

ಪ್ರಾಗಿತಿಹಾಸ

ಭೂಮಿಯ ಉಗಮದ ಕಾಲವನ್ನು ಆರ್ಕಿಯಾಜೊಯಿಕ್, ಪೆಲಿಯಾಜೊಯಿಕ್, ಮೆಸೊಜೊಯಿಕ್, ಸೆನೂಜೋಯಿಕ್ ಎಂದು ವಿಭಾಗ ಮಾಡಲಾಗಿದೆ.[೧] ಸೆನೂಜೋಯಿಕ್ ಯುಗದಲ್ಲಿ ಪ್ಲಿಯೋಸಿನ್ ಮತ್ತು ಪ್ಲಿಸ್ಟೋಸಿನ್ ಎಂಬ ಎರಡು ಅವಧಿಗಳಿವೆ. ಪ್ಲಿಸ್ಟೊಸಿನ್ ಕಾಲವಧಿಯಲ್ಲಿ ಪುರಾತನ ಶಿಲಾಯುಗ ಸಂಸ್ಕೃತಿ ಕಾಣಬಹುದು. ಈ ಕಾಲಕ್ಕೆ ಮುಂಚೆ ಮಾನವನು ಮಂಗನಂತೆ ಮರದ ಮೇಲೆ ವಾಸವಾಗಿದ್ದನು. ತರುವಾಯ ಕಾಲವಧಿಯಲ್ಲಿ ಮಂಗನ ಜೀವನದಿಂದ ಬೇರ್ಪಟ್ಟು ನೆಲದ ಮೇಲೆ ವಾಸಿಸುವುದಕ್ಕೆ ಪ್ರಾರಂಭಿಸಿದನು. ಅಂದಿನಿಂದ ಆಹಾರ ಸಂಗ್ರಹಣೆಗಾಗಿ ಮತ್ತು ರಕ್ಷಣೆಗಾಗಿ ಸಲಕರಣೆಗಳು ಅವಶ್ಯಕವೆನಿಸಿದವು. ಆ ಕಾರಣದಿಂದಲೇ ಶಿಲೆ, ಲೋಹ, ಉಪಕರಣಗಳನ್ನು ಉಪಯೋಗಿಸುತ್ತ ಪ್ರಗತಿ ಸಾಧಿಸಿದನು. ಪ್ರಾಗಿತಿಹಾಸವು ಪುರಾತನ ಮಾನವರು ಉಪಯೋಗಿಸಿ ಬಿಟ್ಟು ಹೋದ ಅಲಿಖಿತ ಪುರಾತತ್ವ ಆಕರಗಳನ್ನು ಅಧ್ಯಯನ ಮಾಡುವುದು ಹಳೇ ಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗೆ ಇದರ ವ್ಯಾಪ್ತಿ. ಈ ಸಂಸ್ಕೃತಿಯ ಮಾನವರು ಹಳೇ ಶಿಲಾಯುಗ, ಮಧ್ಯ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ, ಕಬ್ಬಿಣ ಶಿಲಾಯುಗ(ಬೃಹತ್ ಶಿಲಾಯುಗ)ವನ್ನು ಹಂತಹಂತವಾಗಿ ದಾಟಿ ನಾಗರಿಕನೆಂದೆನಿಸಿಕೊಂಡರು. ತನ್ನ ಚಟುವಟಿಕೆಗಳಲ್ಲಿ ಉಪಯೋಗಿಸಿದ ವಸ್ತುಗಳನ್ನು ಅವಶೇಷಗಳು ಮತ್ತು ಪಳೆಯುಳಿಕೆಯ ರೂಪದಲ್ಲಿ ಬಿಟ್ಟು ಹೋಗಿದ್ದಾರೆ. ಅಂತಹವುಗಳನ್ನು ಸಂಶೋಧಕರು ಶೋಧಿಸುವುದರ ಮೂಲಕ ಇತಿಹಾಸದ ಪುಟಗಳಲ್ಲಿ ದಾಖಲಿಸಿದ್ದಾರೆ. ಪ್ರಾಗಿತಿಹಾಸದ ಕಾಲಘಟ್ಟದಲ್ಲಿ ಪ್ರಸ್ತುತ ಪ್ರದೇಶ ಮಹತ್ವದ್ದು. ಪ್ರಾಚೀನ ಮಾನವರು ಬದುಕಿ ಬಾಳಿದ್ದಕ್ಕೆ ಪುರಾತತ್ವ ಆಕರಗಳು ದೊರಕಿವೆ. ಇವುಗಳ ಆಧಾರ ವಾಗಿಟ್ಟುಕೊಂಡು ಪ್ರಾಗಿತಿಹಾಸವನ್ನು ಅರ್ಥೈಸಲಾಗಿದೆ.

೩.೧. ಹಳೇ ಶಿಲಾಯುಗ

ಪ್ರಾಗಿತಿಹಾಸ ಕಾಲಘಟ್ಟದ ಮೊದಲ ಹಂತವಾಗಿದೆ. ಈ ಕಾಲ ಅತ್ಯಂತ ದೀರ್ಘ ವಾದದ್ದು. ಈ ಅವಧಿಯಲ್ಲಿ 'ಹೊಮೋಹೆಬಿಲಿಸ್, ಹೋಮೋಎರೆಕ್ಟಸ್, ಹೋಮೋ ಸೆಪಿಯನ್ಸ್, ನಿಯಾಂಡ್ರಥಾಲ್ ಮಾನವರು' ಬದುಕಿದ್ದರು.[೨] ದೇಹದ ಲಕ್ಷಣ ಮತ್ತು ಪ್ರಾದೇಶಿಕ ಅಂಶಗಳ

[illegible]

ಹಿನ್ನೆಲೆಯಲ್ಲಿ ಆ ರೀತಿ ಕರೆದಿದ್ದಾರೆ. ಅಬ್ಬಿವೆಲಿಯನ್, ಅಶೂಲ್, ಲೆವಲ್ವ, ಕ್ಲಾಕ್ಟನ್ ಮಸ್ಟೂರ್ ತಂತ್ರಗಾರಿಕೆಯಿಂದ ಶಿಲೆಗಳನ್ನು ಆಯುಧವಾಗಿ ರೂಪಿಸಿದ. ಅಂತಹ ಆಯುಧಗಳು ಕರ್ನಾಟಕದಲ್ಲಿ ಶೋಧಗೊಂಡಿವೆ. ಹುಣಸಗಿ, ಸಂಗನಕಲ್ಲು, ತೆಕ್ಕಲಕೋಟೆ, ಬ್ರಹ್ಮಗಿರಿ ನೆಲೆಗಳು ಮಹತ್ವದ್ದೆನಿಸಿವೆ. ಪುರಾತನ ಮಾನವರು ಬಳಸಿದ ಆಯುಧಗಳ ತಂತ್ರಗಾರಿಕೆ ಮತ್ತು ಪರಿಸರದ ಆಧಾರದ ಮೇಲೆ ಆದಿ, ಮಧ್ಯ, ಅಂತ್ಯ ಹಳೇ ಶಿಲಾಯುಗವೆಂದು ವಿಭಾಗ ಮಾಡಲಾಗಿದೆ. ಪ್ರಸ್ತುತ ಪ್ರದೇಶದಲ್ಲಿ ಆದಿ ಹಳೇಶಿಲಾಯುಗದ ಆಯುಧಗಳು ದೊರಕಿವೆ. ಈ ಕಾಲವನ್ನು ಹೊರತುಪಡಿಸಿ ಮಧ್ಯ, ಅಂತ್ಯ ಹಳೇ ಶಿಲಾಯುಗದ ಕುರುಹುಗಳು ಕಂಡುಬಂದಿರುವುದಿಲ್ಲ.

ಆದಿ ಹಳೇಶಿಲಾಯುಗ

ಹಳೇಶಿಲಾಯುಗದಲ್ಲಿ ಆರಂಭಿಕ ಹಂತವೇ ಆದಿ ಹಳೇಶಿಲಾಯುಗ. ಕ್ವಾರ್ಟ್‌ಜೈಟ್ ಕಲ್ಲು, ಉಸುಕುಕಲ್ಲು, ಸುಣ್ಣದಕಲ್ಲು, ಉರುಟುಕಲ್ಲುಗಳು ಸಿಗುವ ಕಡೆ ವಾಸವಾಗಿದ್ದರು. ಗುಡ್ಡದ ತಪ್ಪಲಿನಲ್ಲಿ, ಸಮತಟ್ಟಾದ ಪ್ರದೇಶಗಳಲ್ಲಿ ಹಾಗೂ ನೀರಿನ ಆಶ್ರಯಗಳಲ್ಲಿ ಬದುಕನ್ನು ಕಂಡನು. ತನ್ನ ಜೀವನೋಪಯಕ್ಕಾಗಿ ಗೆಡ್ಡೆಗೆಣಸು, ಪ್ರಾಣಿಮಾಂಸ ಅವಶ್ಯಕವಾಗಿದ್ದರಿಂದ ಅಶ್ಯೂಲಿಯನ್ ಮತ್ತು ಅಬ್ಬಿವೆಲಿಯನ್ ಮಾದರಿಯಲ್ಲಿ ಕೈಕೊಡಲಿ, ಮಚ್ಚುಗತ್ತಿ, ಕೊರಗತ್ತಿಗಳು, ಸೀಳುಗತ್ತಿ ಇತ್ಯಾದಿ ಉಪಕರಣಗಳು ತಯಾರುಗೊಳಿಸಿಕೊಂಡನು. ಈ ಆಯುಧಗಳಿಂದ ಬಹುಶಃ ಗಿಡಗಳನ್ನು ಕಡಿಯಲು, ಮಾಂಸ ತುಂಡರಿಸಲು, ಪ್ರಾಣಿಗಳನ್ನು ಕೊಲ್ಲಲು, ಪ್ರಾಣಿ ಚರ್ಮಹದ ಮಾಡಲು ಬಳಸಿದ್ದರಬೇಕು. ಈ ಕಾಲವಧಿಯಲ್ಲಿ ಬಳಸಿ ಬಿಟ್ಟು ಹೋದ ಕುರುಹುಗಳು ಕರ್ನಾಟಕದ ಹುಣಸಗಿ, ನಿಟ್ಟೂರು, ಯಡಿಯಾಪುರ, ಶಿರುಗುಪ್ಪ ಇತ್ಯಾದಿ ಕಡೆ ಕಂಡುಬಂದಿರುವುದಲ್ಲದೆ ಪ್ರಸ್ತುತ ಪ್ರದೇಶದ ಕೂನಬೇವಿನಲ್ಲಿ ಆದಿ ಹಳೇ ಶಿಲಾಯುಗದ ಆಯುಧಗಳು ಶೋಧಿತಗೊಂಡಿವೆ.[೩]

ತುರುವನೂರು ಹೋಬಳಿ ಕೇಂದ್ರದಿಂದ ದಕ್ಷಿಣಕ್ಕೆ ೩ ಕಿ.ಮೀ ದೂರದ ಅಂತರದಲ್ಲಿರುವ ಗ್ರಾಮವೇ ಕೂನಬೇವು. ಹೆಸರೇ ಸೂಚಿಸುವಂತೆ ಬೇವಿನ ಮರದ ಕೊಂಬೆಗಳು ಕೂನ(ಗೂನ) ವಾಗಿ ಬೆಳೆಯುತ್ತಿದ್ದ ಕಾರಣ ಕೂನಬೇವು ಎಂಬ ಹೆಸರು ಬಂದಿರಬಹುದು. ಕ್ರಿ.ಶ. ೧೧ನೇ ಶತಮಾನಕ್ಕೆ ಸೇರಿದ ವೀರಗಲ್ಲು ತೃಟಿತಗೊಂಡ ಶಾಸನಗಳು ಐತಿಹಾಸಿಕ ಮಹತ್ವವನ್ನು ಸಾರುತ್ತವೆ. ಪಾಳೆಯಗಾರರಿಗೂ ಮತ್ತು ಮರಾಠರಿಗೂ ಯುದ್ಧ ನಡೆದ ಭೂಮಿಯಿದು. ಇಂತಹ ಪ್ರದೇಶದಲ್ಲಿ ನಾನು ಮತ್ತು ನಾಗರಾಜಪ್ಪ ಎಸ್. ಜೊತೆಗೂಡಿ ಹಳೇ ಶಿಲಾಯುಗದ ನೆಲೆಗೆ ಸೇರಿರಬಹುದಾದ ಆಯುಧವನ್ನು ಪತ್ತೆಹಚ್ಚಲಾಯಿತು. ಆಯುಧವನ್ನು ಆಧಾರವಾಗಿಟ್ಟು ಕೊಂಡು ವಿದ್ವಾಂಸರಲ್ಲಿ ಚರ್ಚಿಸಿದಾಗ ಆದಿ ಹಳೇಶಿಲಾಯುಗದ ಆಯುಧವೆಂದು ದೃಢಪಟ್ಟಿತು. ತರುವಾಯ ಕ್ಷೇತ್ರಕಾರ್ಯ ಮಾಡಿದಾಗ ಮತ್ತೆರೆಡು ಆಯುಧಗಳು ದೊರಕಿದವು. ಇವುಗಳು ಕಂದುಬಣ್ಣದ ಕಲ್ಲಿನಿಂದ ತಯಾರಾಗಿದ್ದು, ಆಯುಧದ ಎರಡು ಮುಖಗಳಲ್ಲಿ ಚಕ್ಕೆಗಳನ್ನು

ಎಬ್ಬಿಸಿದ್ದಾರೆ. ಈ ಆಯುಧಗಳ ರೇಖಾಚಿತ್ರವನ್ನು ರಚಿಸಿರುವುದನ್ನು ಕೊನೆಯಲ್ಲಿ ಗಮನಿಸ ಬಹುದು.

ಈ ಹಿಂದೆ ಭಾರತದ ಪ್ರಾಗಿತಿಹಾಸದ ಪಿತಾಮಹನಾದ ರಾಬರ್ಟ್ ಬ್ರೂಸ್ ಫೂಟ್ ಮತ್ತು ಎಂ. ಶೇಷಾದ್ರಿಯವರು ತಾಳ್ಯ(ಹೊಳಲ್ಕೆರೆ ತಾ.), ಜಾನಕಲ್ಲು(ಹೊಸದುರ್ಗ ತಾ.) ಪ್ರದೇಶಗಳಲ್ಲಿ ಆದಿ ಹಳೇಶಿಲಾಯುಗದ ಆಯುಧಗಳನ್ನು ಶೋಧನೆ ಮಾಡಿದ್ದರು. ಈ ಶೋಧನೆಯ ನಂತರ ಚಿತ್ರದುರ್ಗ ಜಿಲ್ಲೆಯಲ್ಲಿ ಬೆಳಕಿಗೆ ಬಂದಿರುವುದಿಲ್ಲ. ಆದರೆ ಕೂನಬೇವಿವಲ್ಲಿ (ಚಿತ್ರದುರ್ಗ ತಾ.) ಶೋಧನೆಗೊಂಡಿರುವುದು ಗಮನಾರ್ಹ. ಕರ್ನಾಟಕದಲ್ಲಿ ಕಲದೇವನಹಳ್ಳಿ, ತಗ್ಗಿನಹಳ್ಳಿ, ಸಡಬದಲ್ಲಿ ಕಂಡುಬಂದಿರುವ ಅಶೋಲಿಯನ್ ಸಂಸ್ಕೃತಿಯ ಆಯುಧಗಳನ್ನು ಮತ್ತು ಇತರೆ ವಸ್ತು ಅವಶೇಷಗಳನ್ನು ಥೋರಿಯಂ, ಯುರೇನಿಯಂ, ಥರ್ಮೋಲು ಮಿನಿಸೆನ್ಸ್ ವಿಧಾನಗಳಿಗೆ ಒಳಪಡಿಸಿ ಆದಿ ಹಳೇಶಿಲಾಯುಗದ ಕಾಲವನ್ನು ೧ ಲಕ್ಷದಿಂದ ೪ ಲಕ್ಷದ ಹಿಂದೆ ಬದುಕಿದ್ದರು ಎಂಬುದಾಗಿ ನಿರ್ಣಯಿಸಲಾಗಿದೆ.[೪] ಈ ಹಿನ್ನಲೆಯಲ್ಲಿ ಪ್ರಸ್ತುತ ದೊರಕಿರುವ ಆಯುಧಗಳನ್ನು ಈ ಸಾಲಿಗೆ ಸೇರಿಸಬಹುದು.

ಮಧ್ಯ ಹಳೇಶಿಲಾಯುಗ

ಆದಿ ಹಳೇಶಿಲಾಯುಗ ಮತ್ತು ಅಂತಿಮ ಹಳೇಶಿಲಾಯುಗದ ಮಧ್ಯ ಭಾಗವೇ ಮಧ್ಯ ಹಳೇಶಿಲಾಯುಗ ೧೯೫೪ರಲ್ಲಿ ಸಂಕಾಲಿಯ ಹೆಚ್.ಡಿ. ಅವರು ಮಹಾರಾಷ್ಟ್ರದ ನೆವಾಸದಲ್ಲಿ ಆಯುಧಗಳನ್ನು ಕಂಡುಹಿಡಿದರು.[೫] ಕರ್ನಾಟಕದಲ್ಲಿನ ಹುಣಸಗಿ, ನಿಟ್ಟೂರು, ಕಿಬ್ಬನಹಳ್ಳಿ ನಿವೇಶಗಳಲ್ಲಿ ಮಧ್ಯಹಳೇಶಿಲಾಯುಗದ ಅವಶೇಷಗಳು ಹರಡಿಕೊಂಡಿವೆ. ಪ್ರಸ್ತುತ ಪ್ರದೇಶದಲ್ಲಿ ಅಂತಹ ಕುರುಹಗಳು ಕಂಡುಬಂದಿಲ್ಲದ ಕಾರಣ ಸಂಶೋಧನೆಯ ಅಗತ್ಯವಿದೆ. ಈ ಕಾಲದ ಮಾನವರು ಚರ್ಟ್, ಜಾಸ್ಪರ್, ಅಗೇಟ್, ಚಾಲ್ಸಿಡೋನಿಯ, ಕಾರ್ನೀಲಿಯನ್ ಶಿಲೆಗಳನ್ನು ಬಳಸಿಕೊಂಡು ಹಾಗೂ ಲೆವಲ್ಲಾ, ಕ್ಲಾಕ್ಟನ್, ಮಸ್ಟೂರ್ ತಂತ್ರಗಳಲ್ಲಿ ಆಯುಧಗಳನ್ನು ತಯಾರು ಮಾಡುತ್ತಿದ್ದರು. ಮಚ್ಚುಗತ್ತಿಗಳು, ಬೈರಿಗೆಗಳು, ರಂಧ್ರಕೊರಕುಗಳು, ಮನಚುಗಳು, ಚೂರಿತರಹದ ಚಕ್ಕೆಗಳಂತಹ ಆಯುಧಗಳು ಮುಖ್ಯವಾಗಿವೆ. ವೈಜ್ಞಾನಿಕ ಕಾಲನಿರ್ಣಯ ಮೂಲಕ ೧,೧೦,೦೦೦ದಿಂದ ೧,೫೦,೦೦೦ ವರ್ಷಗಳಷ್ಟು ಪುರಾತನದ್ದಾಗಿದ್ದೆಂದು ಸಂಶೋಧನೆ ಯಲ್ಲಿ ತಿಳಿದುಬಂದಿದೆ.[೬]

ಅಂತಿಮ ಹಳೇಶಿಲಾಯುಗ

ದೀರ್ಘವಾದ ಹಳೇಶಿಲಾಯುಗದ ಕಾಲಘಟ್ಟದಲ್ಲಿ ಕೊನೆಯ ಹಂತವೇ ಅಂತಿಮ ಹಳೇಶಿಲಾಯುಗ. ಅಲ್ಲದೆ ಸೂಕ್ಷ್ಮಶಿಲಾಯುಗದ ಆರಂಭಕ್ಕೆ ಅನುವು ಮಾಡಿಕೊಟ್ಟ ಯುಗವಾಗಿದೆ. ಚರ್ಟ್‌ಕಲ್ಲು, ಶೇದಿಕಲ್ಲು, ಅಗೇಟ್, ಚಾಲ್ಸಿಡೋನಿ ಮುಂತಾದವುಗಳನ್ನು ಒತ್ತಡ ತಂತ್ರ, ವಕ್ಷಸ್ಥಲ ಒತ್ತಡ, ನೇರ ಒತ್ತಡ ತಂತ್ರಕ್ಕೆ ಒಳಪಡಿಸಿ ಉಪಕರಣಗಳನ್ನು ತಯಾರಿಸಿದರು. ಕರ್ನೂಲ್ ಜಿಲ್ಲೆಯ ಮುಚ್ಚಟ್ಲ ಚಿಂತಾಮನು ಗವಿಯಲ್ಲಿ ಎಲುಬಿನ ಉಪಕರಣ ದೊರಕಿರುವುದು

[illegible]

ಹೊಸ ಬೆಳವಣಿಗೆ. ಎಲುಬಿನ ಸೂಜಿಗಳನ್ನು ಬಟ್ಟೆಗಳ ತಯಾರಿಕೆಯಲ್ಲಿ ಬಳಸಿದ್ದರೆಂದು ತಿಳಿದುಬಂದಿದೆ.[೭] ಮಂಜರಾಕೊಳ್ಳದ ಬಳ್ಳೂರು, ಡೋಣಿಕೊಳ್ಳದ ಇಂಗಳೇಶ್ವರ, ಕೃಷ್ಣಕೊಳ್ಳದ ಸಾಲ್ವಡಗಿ, ತುಂಗಾಕೊಳ್ಳದ ಕಕ್ಕನಗಳ್ಳಿ ನೆಲೆಗಳಲ್ಲಿ ಅಂತಿಮ ಹಳೇಶಿಲಾಯುಗದ ಆಯುಧಗಳು ದೊರಕಿವೆ. ಸಿಕ್ಕಂತಹ ಅವಶೇಷಗಳ ಆಧಾರದ ೨೫,೦೦೦ ವರ್ಷಗಳ ಹಿಂದೆ ಬದುಕಿದ್ದಿರ ಬೇಕೆಂದು ಹೇಳಬಹುದು.[೮]

೩.೨. ಸೂಕ್ಷ್ಮ ಶಿಲಾಯುಗ

ಹಳೇಶಿಲಾಯುಗದ ಮತ್ತು ನೂತನ ಶಿಲಾಯುಗದ ಮಧ್ಯಬರುವ ಕಾಲಘಟ್ಟವೇ ಸೂಕ್ಷ್ಮಶಿಲಾಯುಗ. ಉರುಟು ಕಲ್ಲುಗಳನ್ನು ಬಿಟ್ಟು ಸೂಕ್ಷ್ಮವಾಗಿ ಆಯುಧಗಳನ್ನು ತಯಾರಿಸಿದ ಕಾಲವಾಗಿದೆ. ಬೇಟೆಗಾರಿಕೆ, ಮೀನು ಹಿಡಿಯುವುದು, ಆಹಾರ ಸಂಗ್ರಹಣೆ, ಬೇಸಾಯ ಕ್ರಮವನ್ನು ಅನುಸರಿಸಿ ಸ್ಥಿರ ಜೀವನದ ಕಡೆ ಸಾಗಿದನು. ಜಕ್ರಾಸ್ ಡಿ ಮಾರ್ಗನ್‌ರವರು ಸೂಕ್ಷ್ಮವಾದ ಚಕ್ಕೆಗಳಿಂದ ತಯಾರಿಸಿದ ಆಯುಧಗಳನ್ನು ಬೇರ್ಪಡಿಸಿ ಸೂಕ್ಷ್ಮಶಿಲಾಯುಗವೆಂದು ಕರೆದವರಲ್ಲಿ ಮೊದಲಿಗರು.[೯] ಕರ್ನಾಟಕದ ರಾಯಚೂರು ಜಿಲ್ಲೆಯಲ್ಲಿ ೧೮೪೨ರಲ್ಲಿ ಪ್ರೀಮ್‌ರೋಸ್‌ರವರು ಸೂಕ್ಷ್ಮಶಿಲಾಯುಗದ ಆಯುಧಗಳನ್ನು ಪತ್ತೆ ಮಾಡಿದರು.[೧೦] ಇದು ಕರ್ನಾಟಕದಲ್ಲಿ ಪತ್ತೆಯಾದ ಮೊದಲ ಸೂಕ್ಷ್ಮಶಿಲಾಯುಗದ ನೆಲೆಯಾಗಿದೆ. ಸಿಲಿಕಾನ್, ಚರ್ಟ, ಅಗೇಟ್, ಕ್ವಾರ್ಟ್ಜ್, ಚಾಲ್ಸಿಡೋನಿ ಮತ್ತು ಪ್ರಶಸ್ತ ಶಿಲೆಗಳನ್ನು ಆಯುಧ ತಯಾರಿಕೆಗಾಗಿ ಉಪಯೋಗಿಸಿದ್ದಾರೆ. ಬೈರಿಗೆ, ಮೊನಚು, ಗಾಳ, ಬಾಣ, ಚಾಕುವಿನ ರೂಪದಲ್ಲಿ ಉಪಯೋಗಿ ಸಲಾಗುತ್ತಿತ್ತು. ಈ ಸಂಸ್ಕೃತಿಯ ಮಾನವನ ನಿವೇಶನಗಳು ಸಮುದ್ರ ತೀರ, ನದಿ ದಂಡೆ, ಗವಿ, ಬಯಲು, ಕಲ್ಲಾಸರೆಗಳಲ್ಲಿ ಕಂಡುಬಂದಿವೆ. ಪ್ರಸ್ತುತ ಪ್ರದೇಶ ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಗೆ ಸೇರಿದೆ. ಚಿತ್ರದುರ್ಗ ಜಿಲ್ಲೆಯ ಮಹದೇವಪುರ, ದೊಡ್ಡೇರಿ, ಹಿರಿಯೂರು, ಪೂಜಾರಟ್ಟಿ, ಹಾನಗಲ್ಲು, ನುಂಕೆಮಲೆಗಳಲ್ಲಿ ಸೂಕ್ಷ್ಮಶಿಲಾಯುಗದ ಆಯುಧಗಳು ಶೋಧನೆ ಗೊಂಡಿವೆ. ಪ್ರಸ್ತುತ ಪ್ರದೇಶಗಳು ಇವುಗಳ ಸಮೀಪವಿರುವುದರಿಂದ ಪುರಾತನ ಮಾನವ ತನ್ನ ಜೀವನೋಪಯೋಗಕ್ಕೆ ಬಂದು ಹೋಗಿರಬಹುದು. ಆದ್ದರಿಂದ ಹೆಚ್ಚಿನ ಸಂಶೋಧನೆಯ ಅವಶ್ಯಕತೆ ಇದೆ.

ಭೋಪಾನಿ ಮಾಂಡೋ, ಮಹದಹ, ಮಹರಗರ್, ಸರಾಯ್ ನಹರ್ ರಾಯ್, ನೆಲೆಗಳಲ್ಲಿ ದನಗಳ, ಎಮ್ಮೆ, ಹಂದಿ, ಸಾಂಬಾರ, ಮೀನು, ಚಿರತೆ, ನೀಲ್‌ಗಯ್, ಚಿನಕಾರ, ಜಿಂಕೆ, ನರಿಗಳ ಅಸ್ಥಿಗಳು ಮತ್ತು ಗೋಧಿ, ಅಕ್ಕಿ, ಕಾಳು, ಸೊಪ್ಪು ಇತ್ಯಾದಿ ವಸ್ತು ಅವಶೇಷಗಳು ಶೋಧಿತಗೊಂಡಿದೆ.[೧೧] ಕರ್ನಾಟಕದ ಬಾದಾಮಿ ಹತ್ತಿರವಿರುವ ಅರೆಗುಡ್ಡ, ಹಿರೇಗುಡ್ಡ ಗವಿಗಳಲ್ಲಿ ಮತ್ತು ಕಲ್ಲಾಸರೆಗಳಲ್ಲಿ ಕೆಲವು ಅಪರೂಪವಾದ ಮಾನವ, ವನ್ಯಪ್ರಾಣಿಗಳ ವರ್ಣಚಿತ್ರಗಳನ್ನು ಬಿಡಿಸಿದ್ದಾರೆ.[೧೨] ಇವು ಆ ಮಾನವನಿಗೆ ಇದ್ದ ಕಲೆಯನ್ನು ಪ್ರತಿನಿಧಿಸುವುದು. ಮೃತ್ಪಾತ್ರೆಗಳನ್ನು ಮಾಡುವುದು, ಚಾಪೆ ಎಣೆಯುವುದು, ಶವಸಂಸ್ಕಾರ ಮಾಡುವ ಇತ್ಯಾದಿ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಸೂಕ್ಷ್ಮ ಶಿಲಾಯುಗ ಕಾಲವನ್ನು ೨೦೦,೦೦೦

ವರ್ಷಗಳಿಂದ ೪೦,೦೦೦ ವರ್ಷಗಳಿಗೆ ಮುಕ್ತಾಯವಾಗುತ್ತದೆ. ಇದು ಹೋಮೋಸೆಪಿಯನ್ಸ್ ಎಂಬ ಮಾನವನ ಉಗಮಕ್ಕೆ ದಾರಿ ಮಾಡಿಕೊಟ್ಟಿತು.[೧೩]

೩.೩. ನವಶಿಲಾಯುಗ

ಸೂಕ್ಷ್ಮ ಶಿಲಾಯುಗದ ನಂತರ ಬರುವ ಕಾಲಘಟ್ಟವೇ ನೂತನ ಶಿಲಾಯುಗ. ಚಾಲ್ಸಿಡೋನಿ, ಕಾರ್ನಿಲಿಯಾ, ಅಗೇಟ್, ಡೈಕ್ ಶಿಲೆಗಳನ್ನು ಉಜ್ಜಿ ಒಂದು ರೂಪಕ್ಕೆ ತಂದು ನಯಗೊಳಿಸುತ್ತಿದ್ದರು. ಕೃಷಿಯು ಮುಖ್ಯ ಕಸುಬಾಗಿ ಸ್ವೀಕರಿಸಿದರು. ಹಾಗಾಗಿ ಈ ಯುಗವನ್ನು ನವಶಿಲಾಯುಗ ಅಥವಾ ಕೊಡಲಿಯ ಸಂಸ್ಕೃತಿಯೆಂದು ಕರೆಯಬಹುದು. ನದಿಯ ಪ್ರಸ್ತಭೂಮಿಯಲ್ಲಿ, ನೂತನ ಶಿಲಾಯುಗದ ಸಂಸ್ಕೃತಿಯ ನಿವೇಶನಗಳಿವೆ. ಕರ್ನಾಟಕದ ಬ್ರಹ್ಮಗಿರಿ, ಕುಡುತಿನಿ, ಕಪ್ಪಗಲ್ಲು, ಲಿಂಗಸೂರು, ಸಂಗನಕಲ್ಲು, ಹಳ್ಳೂರು, ಟಿ. ನರಸೀಪುರ, ಬನಹಳ್ಳಿ, ಸಾಲ್ವಡಗಿ ಇತ್ಯಾದಿ ಕಡೆಗಳಲ್ಲಿ ಆಯುಧಗಳು, ಬೂದಿದಿನ್ನೆ, ಮಡಕೆ ಚೂರುಗಳು, ಅಸ್ಥಿಗಳು, ಕೆಮ್ಮಣ್ಣಿನ ವರ್ಣಚಿತ್ರಗಳು ದೊರಕಿವೆ. ಪ್ರಸ್ತುತ ಪ್ರದೇಶದಲ್ಲಿಯ ಸಂಗೇನಹಳ್ಳಿಯಲ್ಲಿ ಬೂದಿದಿನ್ನೆ ಮತ್ತು ಕೂನಬೇವಿನಲ್ಲಿ ಕಲ್ಲಿನ ಕೊಡಲಿ ಶೋಧಿತಗೊಂಡಿವೆ.

ಸಂಗೇನಹಳ್ಳಿಕೆರೆ

ಚಿಕ್ಕಗೊಂಡನಹಳ್ಳಿಯಿಂದ ಕಲ್ಲೇದೇವಾಪುರಕ್ಕೆ ಹೋಗುವ ಮುನ್ನ ಬರುವಂತಹ ಗ್ರಾಮವೇ ಸಂಗೇನಹಳ್ಳಿಕೆರೆ. ಗ್ರಾಮದ ಪಕ್ಕದಲ್ಲಿ ಕೆರೆ ಇರುವುದರಿಂದ ಆ ಹೆಸರು ಬಂದಿದೆ. ಕೆರೆಯು ವಿಸ್ತಾರವಾಗಿದ್ದು, ಕೆರೆಯ ಏರಿಯು ಜಗಳೂರು ತಾಲೂಕಿಗೆ ಸೇರಿದೆ. ಆದರೆ ಹಿನ್ನೀರು ಚಿತ್ರದುರ್ಗ ತಾಲೂಕಿಗೆ ಸೇರಿದೆ. ಜಿನಿಗೆಹಳ್ಳ ಈ ಕೆರೆಯ ಮೂಲಕ ಹರಿದು ಹೋಗಿರುವುದರಿಂದ ಕೆರೆಯ ಮಧ್ಯೆ ನಡುಗಡ್ಡೆ ಆಗಿ ಪ್ರಾಚೀನ ಕಾಲದಲ್ಲಿ ವಸತಿ ತಾಣವಾಗಿತ್ತು. ಸಂಶೋಧಕರ ತಂಡ ಕ್ಷೇತ್ರಕಾರ್ಯ ಮಾಡುವಾಗ ಬೂದಿದಿನ್ನೆ ಪತ್ತೆಗೊಂಡಿತು.[೧] ಈ ದಿನ್ನೆಯಲ್ಲಿ ಕಲ್ಲಿನ ಕೊಡಲಿ, ಬೂದುಬಣ್ಣದ ಮಡಕೆ, ಬಯಲು ಬಂಡೆ ರೇಖಾಕೃತಿಗಳನ್ನು ಬೆಳಕಿಗೆ ತಂದಿದ್ದಾರೆ. ನಡುಗಡ್ಡೆಯನ್ನು ಓಬಳಾಪುರವೆಂದು ಕರೆಯುತ್ತಿದ್ದರು. ಪೂರ್ವದಲ್ಲಿ ಪ್ರವಾಹದಿಂದ ನಡುಗಡ್ಡೆ ನೀರಿನಿಂದ ಮುಚ್ಚಿ ಹೋಗಿರಬೇಕು. ಇದರಿಂದಾಗಿಯೇ ಯಳವರ್ತಿ ಮತ್ತು ಬೊಗಳಾರಟ್ಟಿಗೆ ವಸತಿಗೆ ಸ್ಥಳಾಂತರಿಸಿದ್ದರಬೇಕೆಂದು ಹೇಳಬಹುದು.[೧೫] ಸೆಗಣಿಯನ್ನು ೬೦೦°–೧೨೦೦°ಸೆ.ವರೆಗೆ ಶಾಖದಲ್ಲಿ ಸುಟ್ಟಾಗ ಬೂದಿದಿನ್ನೆ ಹಾಗಿರಬಹುದೆಂಬುದು ವೈಜ್ಞಾನಿಕ ನಿಲುವಾಗಿದೆ.[೧೬] ಹಾಗಾಗಿ ಸಂಗೇನಹಳ್ಳಿ ಕೆರೆಯ ನಡುಗಡ್ಡೆಯಲ್ಲಿರುವ ಬೂದಿದಿನ್ನೆಯು ಆ ರೀತಿಯಲ್ಲಿ ರೂಪುಗೊಂಡಿರಬೇಕೆಂದು ಹೇಳಬಹುದು. ಮತ್ತಷ್ಟು ಸ್ಪಷ್ಟ ಮಾಹಿತಿ ದೊರಕ ಬೇಕಾದರೆ ಉತ್ಖನನ ಆಗುವ ಅವಶ್ಯಕತೆ ಇದೆ. ಇಲ್ಲವಾದಲ್ಲಿ ಈ ಪ್ರದೇಶವು ನೀರಿನಿಂದ ಮುಚ್ಚಿಕೊಂಡು ಕಾಲಂತರದಲ್ಲಿ ನಾಶವಾಗಬಹುದಾದ ಸಾಧ್ಯತೆಯಿದೆ.

ಕೂನಬೇವು

ತುರುವನೂರಿನಿಂದ ದಕ್ಷಿಣಕ್ಕೆ ೩ ಕಿ.ಮೀ ದೂರವಿರುವ ಗ್ರಾಮ ಕೂನಬೇವು. ಈ ಹಿಂದೆ ಪ್ರಸ್ತಾಪಿಸಿದಂತೆ ಈ ಪ್ರದೇಶವು ಐತಿಹಾಸಿಕ ಮಹತ್ವವನ್ನು ಹೊಂದಿದೆ. ಗ್ರಾಮ

ಪರಿಸರದಲ್ಲಿ ಸಣ್ಣಿಂಗಪ್ಪರಕಟ್ಟೆ, ದೋಸನಕಟ್ಟೆ, ಕೂನಬೇವು ಗೊಲ್ಲರಹಟ್ಟಿ ಹಳ್ಳಗಳು ಹರಿಯುತ್ತಿವೆ. ನಾನು ಮತ್ತು ಎಸ್. ನಾಗರಾಜಪ್ಪ ಕ್ಷೇತ್ರಕಾರ್ಯ ಮಾಡುವಾಗ ಕೊಂಚೆ ಶಾಂತರುದ್ರಪ್ಪರವರ ಹೊಲದಲ್ಲಿ ನವಶಿಲಾಯುಗ ಕಲ್ಲಿನ ಕೊಡಲಿ ಪತ್ತೆಗೊಂಡಿದೆ.[೧೭] ನಯವಾದ ಕಲ್ಲಿನ ಕೊಡಲಿಯ ತಳಭಾಗ ಹರಿತವಾಗಿದ್ದು ಯವುದೇ ಭಾಗವು ನಾಶವಾಗಿಲ್ಲ. ಮೇಲ್ಭಾಗ ಕೈ ಹಿಡಿಕೆಯನ್ನು ಹೊಂದಿದೆ. ಈ ರೀತಿಯ ಲಕ್ಷಣಗಳನ್ನು ಗಮನಿಸಿದರೆ, ಬಹುಶಃ ಚರ್ಮ ಕತ್ತರಿಸಲು ಬಳಸುತ್ತಿದ್ದರೆಂದು ಸ್ಪಷ್ಟಪಡಿಸಬಹುದು. ಈ ಹಿಂದೆ ಬೃಹತ್ ಶಿಲಾಯುಗ ಗೋರಿಗಳು ಮೋರೇರ ಮಟ್ಟಿಯಲ್ಲಿ ಎಸ್.ವೈ. ಸೋಮಶೇಖರ್ ಮತ್ತು ಎಸ್. ತಿಪ್ಪೇಸ್ವಾಮಿ ಕ್ಷೇತ್ರಕಾರ್ಯದಲ್ಲಿ ಪತ್ತೆಗೊಂಡಿದ್ದವು. ಆದರೆ ಪ್ರಸ್ತುತ ಶೋಧನೆ ಬೃಹತ್ ಶಿಲಾಯುಗಕ್ಕಿಂತ ಪುರಾತನ ಕಾಲಕ್ಕೆ ಕೊಂಡೊಯ್ಯುವುದು.

ಪುರಾತನ ಮಾನವರು ನವಶಿಲಾಯುಗದಲ್ಲಿ ಹೊಸ ಜೀವನಕ್ಕೆ ಹೆಜ್ಜೆಯಿಟ್ಟರು. ಈ ಹಿಂದೆ ಬೇಟೆಗಾರನಾಗಿ, ಪ್ರಾಣಿಗಳನ್ನು ಅವಲಂಬಿಸಿ ಬದುಕುತ್ತಿದ್ದವನು, ನವಶಿಲಾಯುಗದಲ್ಲಿ ವ್ಯವಸಾಯ, ಪಶುಪಾಲನೆ, ಕುಶಲ ಕಲೆಗಳನ್ನು ಅಭಿವೃದ್ಧಿಪಡಿಸಿಕೊಂಡರು. ವ್ಯವಸಾಯದ ಉದ್ದೇಶದಿಂದ ಭೀಮ, ಕೃಷ್ಣ, ವೇದಾವತಿ ನದಿಗಳ ದಂಡೆಯ ಮೇಲೆ ವಾಸಮಾಡುತ್ತಿದ್ದರೆಂಬುದಕ್ಕೆ ಸಿಕ್ಕಂತಹ ನೆಲೆಗಳು ಆಧಾರ. ಪ್ರಸ್ತುತ ಪ್ರದೇಶ ಸಂಗೇನಹಳ್ಳಿಕೆರೆ ಮತ್ತು ಕೂನಬೇವಿನಲ್ಲಿ ದೊರಕಿರುವ ಕುರುಹುಗಳು ಕೆರೆ ಮತ್ತು ಹಳ್ಳಗಳ ಪ್ರದೇಶದಲ್ಲಿ ವಾಸಮಾಡುತ್ತಿದ್ದರೆಂಬುದಕ್ಕೆ ಸಾಕ್ಷಿ. ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯಲ್ಲಿ ನಡೆದ ಉತ್ಖನನಗಳಲ್ಲಿ ಕಲ್ಲಿನ ಕೊಡಲಿ, ಬಾಚಿ, ಗಾಳ, ಕುಡುಗೋಲು ದೊರಕಿದ್ದು, ಪ್ರಸ್ತುತ ಪ್ರದೇಶಕ್ಕೆ ಮಹತ್ತರವಾದ ಕೊಡುಗೆ ನೀಡಿವೆ. ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ವಾಸವಾಗಿದ್ದನಲ್ಲದೆ ತದ್ವಿರುದ್ಧವಾಗಿ ಹೆಚ್ಚು ಮಳೆ ಬೀಳುವ ದಟ್ಟ ಅರಣ್ಯ ಪ್ರದೇಶಗಳಲ್ಲಿ ವಾಸಿಸಲು ಸಮರ್ಥರಾಗಿದ್ದರು. ನಿಲಸಕಲ್, ಹಳೇನಗರ (ಹೊಸನಗರ ತಾ.), ಎಡೆಗುಡ್ಡ (ತೀರ್ಥಹಳ್ಳಿ ತಾ.) ಇತರೆ ನೆಲೆಗಳನ್ನು ಉದಾಹರಣೆಯಾಗಿ ನೀಡಬಹುದು.[೧೮] ಈ ಎಲ್ಲಾ ವಿಚಾರಗಳನ್ನು ಗಮನಿಸಿದರೆ ನವಶಿಲಾಯುಗದ ಮಾನವರು ಭಿನ್ನ–ಭಿನ್ನ ಪರಿಸರದಲ್ಲಿ ವಾಸಮಾಡುತ್ತಿದ್ದನೆಂದು ಹೇಳಬಹುದು. ಸಂಗನಕಲ್ಲು, ತೆಕ್ಕಲುಕೋಟೆ, ಹಳ್ಳೂರುಗಳಲ್ಲಿ ನಡೆದ ಉತ್ಖನನಗಳಿಂದ ಮನೆಗಳನ್ನು ವೃತ್ತಾಕಾರವಾಗಿ ಮತ್ತು ಆಯತಕಾರವಾಗಿ ನಿರ್ಮಿಸಿಕೊಳ್ಳುತ್ತಿದ್ದರೆಂದು ಮಾಹಿತಿ ಸಂಗ್ರಹವಾಗಿದೆ. ಮನೆಗಳನ್ನು ನಿರ್ಮಿಸುವಲ್ಲಿ ಚಿಪ್ಪು ಕಲ್ಲು, ಬಿದಿರು, ಕಲಸು ಮಣ್ಣು, ಚಾಪೆ, ಬಳಕೆಗೊಂಡಿವೆ. ಕೆಲವು ಕಡೆ ಮೃಗಗಳ ಹಾವಳಿಗಳಿಂದ ತಪ್ಪಿಸಿಕೊಳ್ಳಲೆಂದು ಮರದ ದಿಮ್ಮಿಯ ಮೇಲೆ ಮತ್ತು ಸರೋವರಗಳ ಮಧ್ಯೆ ಗೃಹಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಇಂತಹವುಗಳಿಗೆ ಸರೋವರ ನಿವಾಸವೆಂದು ಕರೆಯಲಾಗಿದ್ದು, ಸ್ವಿಡ್ಜರ್‌ಲ್ಯಾಂಡಿನಲ್ಲಿ ಕಂಡುಬಂದಿದೆ.[೧೯]

ನವಶಿಲಾಯುಗದ ಮಾನವರ ಮುಖ್ಯ ಕಸುಬು ಕೃಷಿ, ಮರದ ಕೋಲನ್ನು ಉಳುಮೆಗಾಗಿ ಬಳಸಿದನಂತರ ಬೈರಿಗೆ, ಸುತ್ತಿಗೆ, ಕುಡುಗೋಲು, ಬಾಚಿ, ಕೊಡಲಿಗಳು ಕೃಷಿ ಶಿಲಾ ಉಪಕರಣಗಳಾಗಿ ಬಳಕೆಗೊಂಡಿವೆ. ಕೃಷಿ ಭೂಮಿಯಲ್ಲಿ ಭತ್ತ, ಗೋಧಿ, ಜೋಳ, ಸಜ್ಜೆ,

ಹುರುಳಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದರೆಂದು ತೆಕ್ಕಲಕೋಟೆ, ಹಳ್ಳೂರಿನಲ್ಲಿ ನಡೆದ ಉತ್ಖನನಗಳಿಂದ ದೃಢಪಟ್ಟಿದೆ. ಕೃಷಿಯಲ್ಲಿ ನೀರಾವರಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದಕ್ಕೆ ಇನಾಗಾಂವ್‌ನಲ್ಲಿ ಶೋಧನೆಗೊಂಡು ಸಾಬಿತಾಗಿದೆ.[೨೦] ಕೃಷಿಯ ಜೊತೆಗೆ ಪಶುಪಾಲನೆ, ನೂಲುವುದು, ಚಾಪೆ ಹೆಣೆಯುವುದು, ಮಡಕೆ ತಯಾರಿಸುವುದು ಉಪಕಸುಬುಗಳಾದ್ದವು. ಪಶುಪಾಲನೆಯಲ್ಲಿ ಬಳಕೆಗೊಂಡ ಪ್ರಾಣಿಗಳಲ್ಲಿ ನಾಯಿ ಮೊದಲನೆಯದು. ನಂತರ ಹಂದಿ, ಕುದುರೆ, ಜಿಂಕೆ, ಆನೆ, ಮೇಕೆ, ಕುರಿ, ಕಾಡುದನ, ಎಮ್ಮೆ, ಎತ್ತುಗಳು ಇತ್ಯಾದಿ ಸಾಕು ಪ್ರಾಣಿಗಳಾಗಿ ಇಲ್ಲವೆ ಮಾಂಸಾಹಾರಿ ಪ್ರಾಣಿಗಳಾಗಿ ಉಪಯೋಗಿಸಿರಬಹುದು.

ಶವಸಂಸ್ಕಾರವು ಪುರಾತನ ಮಾನವರ ಸಂಸ್ಕೃತಿಯ ಒಂದು ಭಾಗ. ನವಶಿಲಾಯುಗದಲ್ಲಿ ಮೂರು ರೀತಿಯಲ್ಲಿ ಶವಸಂಸ್ಕಾರ ಮಾಡುತ್ತಿದ್ದರು. ಮೊದಲನೆಯದಾಗಿ ಶವವನ್ನು ನೇರವಾಗಿ ಮಲಗಿಸುವುದು. ಇವುಗಳನ್ನು ಬನಹಳ್ಳಿ, ಪಿಕ್ಲಿಹಾಳ್, ಬ್ರಹ್ಮಗಿರಿಗಳಲ್ಲಿ ನಡೆದ ಉತ್ಖನನದಿಂದ ಕಂಡುಬಂದಿದೆ. ಹೂಳಿದ ಶವದ ಅಸ್ಥಿಯನ್ನು ಒಂದು ದೊಡ್ಡ ಪಾತ್ರೆಯಲ್ಲಿ ಹಿಡುವುದು ಶವಸಂಸ್ಕಾರದ ಇನ್ನೊಂದು ಪದ್ಧತಿ. ಸಿಕ್ಕಂತಹ ಕುರುಹುಗಳ ಆಧಾರದ ಮೇಲೆ ಕ್ರಿ.ಪೂ. ೧೦೦೦ ಆದಿಭಾಗದಿಂದ ೨೦೦ರವರೆಗೆ ನವಶಿಲಾಯುಗದ ಕಾಲಮಾನವೆಂದು ನಿರ್ಧರಿಸಲಾಗಿದೆ.[೨೧]

೩.೪. ಬೃಹತ್ ಶಿಲಾಯುಗ

ನೂತನ ಶಿಲಾಯುಗದ ಮಾನವರು ಕಲ್ಲನ್ನು ಬಿಟ್ಟು ಎಲ್ಲಾ ಆಯುಧಗಳನ್ನು ಕಬ್ಬಿಣದಲ್ಲಿಯೇ ತಯಾರಿಸಿಕೊಂಡರು. ಅಂದಿನಿಂದ ಕಲ್ಲಿನ ಯುಗ ಅಂತ್ಯಗೊಂಡು ಕಬ್ಬಿಣಯುಗ ಆರಂಭಗೊಂಡಿತು. ಈ ಯುಗದ ಮಾನವರು ಕಬ್ಬಿಣವನ್ನು ಕಲ್ಲಿಗಿಂತ ಹೆಚ್ಚು ಪರಿಣಾಮಕಾರಿ ಆಯುಧವನ್ನಾಗಿ ಮಾಡಿಕೊಂಡರು. ಮರವನ್ನು ಸುಲಭವಾಗಿ ಕಡಿಯಬಹುದು ಮತ್ತು ಬೃಹತ್ ಆದ ಕಲ್ಲುಗಳನ್ನು ಉರುಳಿಸಬಹುದೆಂಬ ಉದ್ದೇಶದಿಂದ ಬಳಿಸಿದ್ದರಬೇಕು.[೨೨] ಈ ಮಾಹಿತಿಯನ್ನು ಗಮನಿಸಿದರೆ, ಬೃಹತ್ ಆದ ಕಲ್ಲುಗಳನ್ನು ಸಮಾಧಿರಚನೆಯಲ್ಲಿ ಬಳಿಸಿಕೊಂಡಿದ್ದಾನೆ ವಿನಹಃ ಮನೆಕಟ್ಟುವುದಕ್ಕಾಗಿ ಅಥವಾ ತನ್ನ ಜೀವನೋಪಾಯಕ್ಕಾಗಿ ಬಳಿಸಿಕೊಂಡಿರುವುದಿಲ್ಲ. ಹಾಗಾಗಿ ಕಬ್ಬಿಣಯುಗವೆಂದು ಕರೆಯಬಹುದಾಗಿದ್ದು, ಬೃಹತ್ ಶಿಲಾಯುಗವೆಂದು ಕರೆಯುವುದರಲ್ಲಿ ಅರ್ಥವಿಲ್ಲ. ಹಿರಿಯೂರು ತಾಲ್ಲೂಕಿನ ಯಾದಲಗಟ್ಟ ನೆಲೆಯಲ್ಲಿ ಕಬ್ಬಿಣ ಕರಗಿಸಿದ ಕಿಟ್ಟ, ಕಬ್ಬಿಣದ ವಸ್ತುಗಳು, ಬೂದಿ, ಇದ್ದಿಲು ದೊರಕಿದ್ದು, ಅವುಗಳಿಂದ ಕಬ್ಬಿಣ ತಯಾರಿಕೆಯ ನೆಲೆಯಾಗಿರಬಹುದೆಂದು ಅಭಿಪ್ರಾಯಿಸಲಾಗಿದೆ. ಕರ್ನಾಟಕದಲ್ಲಿ ಮೊದಲಿಗೆ ಮೇಡೋಸ್ ಟೇಲರ್ ಗುಲ್ಬರ್ಗಾ, ಬಳ್ಳಾರಿ, ರಾಯಚೂರು ಪ್ರದೇಶಗಳಲ್ಲಿ ಕಬ್ಬಿಣಯುಗದ ಶಿಲಾಸಮಾಧಿಗಳನ್ನು ಶೋಧಿಸಿದರು ಕ್ರಿ.ಶ. ೧೮೮೧-೧೮೯೭ರ ಅವಧಿಯಲ್ಲಿ ರಾಬರ್ಟ್‌ಬ್ರೂಸ್ ಫೂಟ್ ಅವರು ತಾಳ್ಯ, ಚಂದ್ರವಳ್ಳಿಯಲ್ಲಿ ಶಿಲಾ ಸಮಾಧಿಗಳನ್ನು ಪತ್ತೆ ಮಾಡಿದ್ದಾರೆ. ಕ್ರಿ.ಶ. ೧೯೨೮-೧೯೪೭ರಲ್ಲಿ ಚಂದ್ರವಳ್ಳಿ, ಬ್ರಹ್ಮಗಿರಿ ಉತ್ಖನನಗಳನ್ನು ಮಾಡಿ

ಹುರುಳಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದರೆಂದು ತೆಕ್ಕಲಕೋಟೆ, ಹಳ್ಳೂರಿನಲ್ಲಿ ನಡೆದ ಉತ್ಖನನಗಳಿಂದ ದೃಢಪಟ್ಟಿದೆ. ಕೃಷಿಯಲ್ಲಿ ನೀರಾವರಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದಕ್ಕೆ ಇನಾಗಾಂವ್‌ನಲ್ಲಿ ಶೋಧನೆಗೊಂಡು ಸಾಬಿತಾಗಿದೆ.[೨೦] ಕೃಷಿಯ ಜೊತೆಗೆ ಪಶುಪಾಲನೆ, ನೂಲುವುದು, ಚಾಪೆ ಹೆಣೆಯುವುದು, ಮಡಕೆ ತಯಾರಿಸುವುದು ಉಪಕಸುಬುಗಳಾದ್ದವು. ಪಶುಪಾಲನೆಯಲ್ಲಿ ಬಳಕೆಗೊಂಡ ಪ್ರಾಣಿಗಳಲ್ಲಿ ನಾಯಿ ಮೊದಲನೆಯದು. ನಂತರ ಹಂದಿ, ಕುದುರೆ, ಜಿಂಕೆ, ಆನೆ, ಮೇಕೆ, ಕುರಿ, ಕಾಡುದನ, ಎಮ್ಮೆ, ಎತ್ತುಗಳು ಇತ್ಯಾದಿ ಸಾಕು ಪ್ರಾಣಿಗಳಾಗಿ ಇಲ್ಲವೆ ಮಾಂಸಾಹಾರಿ ಪ್ರಾಣಿಗಳಾಗಿ ಉಪಯೋಗಿಸಿರಬಹುದು.

ಶವಸಂಸ್ಕಾರವು ಪುರಾತನ ಮಾನವರ ಸಂಸ್ಕೃತಿಯ ಒಂದು ಭಾಗ. ನವಶಿಲಾಯುಗದಲ್ಲಿ ಮೂರು ರೀತಿಯಲ್ಲಿ ಶವಸಂಸ್ಕಾರ ಮಾಡುತ್ತಿದ್ದರು. ಮೊದಲನೆಯದಾಗಿ ಶವವನ್ನು ನೇರವಾಗಿ ಮಲಗಿಸುವುದು. ಇವುಗಳನ್ನು ಬನಹಳ್ಳಿ, ಪಿಕ್ಲಿಹಾಳ್, ಬ್ರಹ್ಮಗಿರಿಗಳಲ್ಲಿ ನಡೆದ ಉತ್ಖನನದಿಂದ ಕಂಡುಬಂದಿದೆ. ಹೂಳಿದ ಶವದ ಅಸ್ಥಿಯನ್ನು ಒಂದು ದೊಡ್ಡ ಪಾತ್ರೆಯಲ್ಲಿ ಹಿಡುವುದು ಶವಸಂಸ್ಕಾರದ ಇನ್ನೊಂದು ಪದ್ಧತಿ. ಸಿಕ್ಕಂತಹ ಕುರುಹುಗಳ ಆಧಾರದ ಮೇಲೆ ಕ್ರಿ.ಪೂ. ೧೦೦೦ ಆದಿಭಾಗದಿಂದ ೨೦೦ರವರೆಗೆ ನವಶಿಲಾಯುಗದ ಕಾಲಮಾನವೆಂದು ನಿರ್ಧರಿಸಲಾಗಿದೆ.[೨೧]

೩.೪. ಬೃಹತ್ ಶಿಲಾಯುಗ

ನೂತನ ಶಿಲಾಯುಗದ ಮಾನವರು ಕಲ್ಲನ್ನು ಬಿಟ್ಟು ಎಲ್ಲಾ ಆಯುಧಗಳನ್ನು ಕಬ್ಬಿಣದಲ್ಲಿಯೇ ತಯಾರಿಸಿಕೊಂಡರು. ಅಂದಿನಿಂದ ಕಲ್ಲಿನ ಯುಗ ಅಂತ್ಯಗೊಂಡು ಕಬ್ಬಿಣಯುಗ ಆರಂಭಗೊಂಡಿತು. ಈ ಯುಗದ ಮಾನವರು ಕಬ್ಬಿಣವನ್ನು ಕಲ್ಲಿಗಿಂತ ಹೆಚ್ಚು ಪರಿಣಾಮಕಾರಿ ಆಯುಧವನ್ನಾಗಿ ಮಾಡಿಕೊಂಡರು. ಮರವನ್ನು ಸುಲಭವಾಗಿ ಕಡಿಯಬಹುದು ಮತ್ತು ಬೃಹತ್ ಆದ ಕಲ್ಲುಗಳನ್ನು ಉರುಳಿಸಬಹುದೆಂಬ ಉದ್ದೇಶದಿಂದ ಬಳಿಸಿದ್ದರಬೇಕು.[೨೨] ಈ ಮಾಹಿತಿಯನ್ನು ಗಮನಿಸಿದರೆ, ಬೃಹತ್ ಆದ ಕಲ್ಲುಗಳನ್ನು ಸಮಾಧಿರಚನೆಯಲ್ಲಿ ಬಳಿಸಿಕೊಂಡಿದ್ದಾನೆ ವಿನಹಃ ಮನೆಕಟ್ಟುವುದಕ್ಕಾಗಿ ಅಥವಾ ತನ್ನ ಜೀವನೋಪಾಯಕ್ಕಾಗಿ ಬಳಿಸಿಕೊಂಡಿರುವುದಿಲ್ಲ. ಹಾಗಾಗಿ ಕಬ್ಬಿಣಯುಗವೆಂದು ಕರೆಯಬಹುದಾಗಿದ್ದು, ಬೃಹತ್ ಶಿಲಾಯುಗವೆಂದು ಕರೆಯುವುದರಲ್ಲಿ ಅರ್ಥವಿಲ್ಲ. ಹಿರಿಯೂರು ತಾಲ್ಲೂಕಿನ ಯಾದಲಗಟ್ಟ ನೆಲೆಯಲ್ಲಿ ಕಬ್ಬಿಣ ಕರಗಿಸಿದ ಕಿಟ್ಟ, ಕಬ್ಬಿಣದ ವಸ್ತುಗಳು, ಬೂದಿ, ಇದ್ದಿಲು ದೊರಕಿದ್ದು, ಅವುಗಳಿಂದ ಕಬ್ಬಿಣ ತಯಾರಿಕೆಯ ನೆಲೆಯಾಗಿರಬಹುದೆಂದು ಅಭಿಪ್ರಾಯಿಸಲಾಗಿದೆ. ಕರ್ನಾಟಕದಲ್ಲಿ ಮೊದಲಿಗೆ ಮೇಡೋಸ್ ಟೇಲರ್ ಗುಲ್ಬರ್ಗಾ, ಬಳ್ಳಾರಿ, ರಾಯಚೂರು ಪ್ರದೇಶಗಳಲ್ಲಿ ಕಬ್ಬಿಣಯುಗದ ಶಿಲಾಸಮಾಧಿಗಳನ್ನು ಶೋಧಿಸಿದರು ಕ್ರಿ.ಶ. ೧೮೮೧-೧೮೯೬ರ ಅವಧಿಯಲ್ಲಿ ರಾಬರ್ಟ್‌ಬ್ರೂಸ್ ಫೂಟ್ ಅವರು ತಾಳ್ಯ, ಚಂದ್ರವಳ್ಳಿಯಲ್ಲಿ ಶಿಲಾ ಸಮಾಧಿಗಳನ್ನು ಪತ್ತೆ ಮಾಡಿದ್ದಾರೆ. ಕ್ರಿ.ಶ. ೧೯೨೮-೧೯೪೭ರಲ್ಲಿ ಚಂದ್ರವಳ್ಳಿ, ಬ್ರಹ್ಮಗಿರಿ ಉತ್ಖನನಗಳನ್ನು ಮಾಡಿ

ಹಿಂದೆ ಎಸ್.ವೈ. ಸೋಮಶೇಖರ್ ಮತ್ತು ಎಸ್. ತಿಪ್ಪೇಸ್ವಾಮಿ ಜೊತೆಗೂಡಿ ೭೫ಕ್ಕೂ ಹೆಚ್ಚು ಶಿಲಾವೃತ್ತಗೋರಿಗಳನ್ನು ಮತ್ತು ಕಬ್ಬಿಣದ ಆಯುಧ, ಎರಡು ನೀರಿನ ಗುಡಾಣ, ಮೂರು ಕಾಲುಳ್ಳ ಐದು ಮೃತ್ಪಾತ್ರೆಗಳು, ಬಟ್ಟಲುಗಳು, ರಂದ್ರವುಳ್ಳ ಮುಚ್ಚಳ, ಸ್ವಸ್ತಿಕಕಾರದ ಗೆರೆಗಳಿರುವ ಬೋಗುಣಿ, ಚಪ್ಪಟೆಯಾದ ಕಲ್ಲುಗಳು ಮುಂತಾದ ಕೆಂಪು ಮತ್ತು ಕಪ್ಪು ಬಣ್ಣದ ಮಡಕೆಗಳು ಕ್ಷೇತ್ರಕಾರ್ಯದಲ್ಲಿ ಶೋಧಿಸಿ ಬೆಳಕಿಗೆ ತಂದಿದ್ದಾರೆ.[೨೪] ಇವುಗಳಲ್ಲಿ ಕೆಲವು ಹಂಪಿ ವಿಶ್ವವಿದ್ಯಾಲಯದ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿತಗೊಂಡಿವೆ. ಆದರೆ ನಿರ್ದೇಶಕರ ನಿರ್ಲಕ್ಷತನದಿಂದ ಚಿಪ್ಪಿನಕೆರೆ ಜೊತೆಗೆ ಕೂನಬೇವಿನ ಅವಶೇಷಗಳು ಸೇರಿ ಕೊಂಡಿವೆ. ಹಾಗಾಗಿ ಸ್ಪಷ್ಟವಾಗಿ ಗರುತಿಸಲು ಕಷ್ಟಸಾಧ್ಯ. ಸಮಾಧಿಗಳನ್ನು ವೃತ್ತಾಕರವಾಗಿ ಬೆಣಚು ಕಲ್ಲುಗಳನ್ನು ಬಳಿಸಿಕೊಂಡು ೬ ಅಡಿ ವ್ಯಾಸದಲ್ಲಿ ರಚಿಸಿದ್ದಾರೆ. ಒಂದು ಶಿಲಾವೃತ್ತ ಗೋರಿಯಲ್ಲಿ ನಿಲುಗಲ್ಲಿನ ರೀತಿ ವೃತ್ತಕಾರವಾಗಿ ಜೋಡಿಸಿರುವುದು ವಿಶೇಷವಾಗಿದೆ. ಅಪರಿಚಿತರು ತೆಗೆದ ಗೋರಿಯಲ್ಲಿನ ಅಸ್ಥಿಯನ್ನು ಗಮನಿಸಿದಾಗ ದಕ್ಷಿಣಾಭಿಮುಖವಾಗಿ ಮಲಗಿಸುತ್ತಿದ್ದರೆಂದು ತಿಳಿದುಬರುವುದು. ಇದೇ ಪ್ರದೇಶದಲ್ಲಿ ಕೊರೆದು ಮೂಡಿಸಿದ ಎತ್ತಿನ ಚಿತ್ರ ಬಂಡೆಯ ಮೇಲೆ ರಚನೆಗೊಂಡಿದ್ದು, ಅವರ ಕಲೆಯನ್ನು ಬಿಂಬಿಸುವುದು.

ಮತ್ತೊಂದು ನೆಲೆಯು ಪಾಂಡವರ ಬೀಳಾಗಿದ್ದು. ಕೂನಬೇವು ಗೊಲ್ಲರಹಟ್ಟಿ ಹಿಂಭಾಗದಲ್ಲಿ ೧೧ ಶಿಲಾವೃತ್ತ ಗೋರಿಗಳಿವೆ. ಕೆಲವೊಂದು ಗೋರಿಗಳಲ್ಲಿ ವೃತ್ತಾಕಾರವಾಗಿರುವ ಕಲ್ಲುಗಳು ಅಳಿದುಳಿದುಕೊಂಡಿವೆ. ಉಳಿದಂತಹ ವೃತ್ತಾ ಶಿಲಾ ಗೋರಿಗಳು ದಿನ್ನೆಯಂತೆ ಉಳಿದಿವೆ. ಸಮಾಧಿಗಳು ೨೫x೨೫ ಅಡಿ ಉದ್ದ ಅಳತೆಯಲ್ಲಿ ರಚಿತಗೊಂಡಿದೆ. ಈ ಹಿಂದೆ ಪಾಂಡವರ ಬೀಳು ಎಲ್ಲಿಯೂ ಉಲ್ಲೇಖಗೊಂಡಿರುವುದಿಲ್ಲ. ಹಾಗಾಗಿ ಇದು ಹೊಸ ಶೋಧನೆಯೆಂದು ಪರಿಗಣಿಸಬಹುದು.

ಬೆಳಗಟ್ಟ

ತುರುವನೂರುನಿಂದ ದಕ್ಷಿಣಕ್ಕೆ ೯ ಕಿ.ಮೀ. ದೂರದಲ್ಲಿರುವ ಗ್ರಾಮವೇ ಬೆಳಗಟ್ಟ, ಹೆಸರೇ ಸೂಚಿಸುವಂತೆ ಎತ್ತರವಾದ ಪ್ರದೇಶದಲ್ಲಿ ಊರು ಬೆಳದಿರುವುದರಿಂದ ಬೆಳಗಟ್ಟವೆಂದು ಹೆಸರು ಬಂದಿರಬಹುದು. ಪಶ್ಚಿಮಕ್ಕೆ ಎತ್ತರವಾದ ಬೆಟ್ಟಗಳನ್ನು ಕಾಣಬಹುದು. ಈ ಹಿಂದೆ ಎಸ್.ವೈ. ಸೋಮಶೇಖರ್, ತಿಪ್ಪೇಸ್ವಾಮಿ ಎಸ್. ಜೊತೆಗೂಡಿ ಮೋರೇರ ಮಟ್ಟಿಯಲ್ಲಿ ಬೃಹತ್ ಶಿಲಾ ಸಮಾಧಿಗಳನ್ನು ಶೋಧಿಸಿದ್ದರು. ಲಕ್ಷ್ಮಣ್ ತೆಲಗಾವಿ ಅವರು ಎದ್ದಲು ಬಂಡೆಯಲ್ಲಿ ಕೊರೆದ ರೇಖಾಕೃತಿಗಳನ್ನು ಪತ್ತೆ ಮಾಡಿದ್ದಾರೆ.

ಬೆಳಗಟ್ಟದ ಪಶ್ಚಿಮಕ್ಕೆ ಅರ್ಧ ಕಿ.ಮೀ ದೂರದಲ್ಲಿ ಮೋರೇರ ಮಟ್ಟಿಯಿದೆ. ಮಟ್ಟಿಯ ಉತ್ತರಕ್ಕೆ ಕೆರೆಯನ್ನು ಕಾಣಬಹುದು. ಮಟ್ಟಿಯ ಮೇಲೆ ೬೦ಕ್ಕೂ ಹೆಚ್ಚು ಶಿಲಾವೃತ್ತಗೋರಿಗಳು ರಚನೆಗೊಂಡಿವೆ. ಶಿಲಾ ಸಮಾಧಿಗಳು ವೃತ್ತಾಪ್ರಕಾರಕ್ಕೆ ಸೇರಿದ್ದು, ಪಾಂಡು ಕುಣಿ ಮಾದರಿ ಸಮಾಧಿಯನ್ನು ಗುರುತಿಸಬಹುದು. ಈ ರೀತಿಯ ಸಮಾಧಿಯು ವೃತ್ತಕಾರವಾಗಿ ಹಸಿರು

ಹಿಂದೆ ಎಸ್.ವೈ. ಸೋಮಶೇಖರ್ ಮತ್ತು ಎಸ್. ತಿಪ್ಪೇಸ್ವಾಮಿ ಜೊತೆಗೂಡಿ ೭೫ಕ್ಕೂ ಹೆಚ್ಚು ಶಿಲಾವೃತ್ತಗೋರಿಗಳನ್ನು ಮತ್ತು ಕಬ್ಬಿಣದ ಆಯುಧ, ಎರಡು ನೀರಿನ ಗುಡಾಣ, ಮೂರು ಕಾಲುಳ್ಳ ಐದು ಮೃತ್ಪಾತ್ರೆಗಳು, ಬಟ್ಟಲುಗಳು, ರಂಧ್ರವುಳ್ಳ ಮುಚ್ಚಳ, ಸ್ವಸ್ತಿಕಕಾರದ ಗೆರೆಗಳಿರುವ ಬೋಗುಣಿ, ಚಪ್ಪಟೆಯಾದ ಕಲ್ಲುಗಳು ಮುಂತಾದ ಕೆಂಪು ಮತ್ತು ಕಪ್ಪು ಬಣ್ಣದ ಮಡಕೆಗಳು ಕ್ಷೇತ್ರಕಾರ್ಯದಲ್ಲಿ ಶೋಧಿಸಿ ಬೆಳಕಿಗೆ ತಂದಿದ್ದಾರೆ.[೨೪] ಇವುಗಳಲ್ಲಿ ಕೆಲವು ಹಂಪಿ ವಿಶ್ವವಿದ್ಯಾಲಯದ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿತಗೊಂಡಿವೆ. ಆದರೆ ನಿರ್ದೇಶಕರ ನಿರ್ಲಕ್ಷತನದಿಂದ ಚಿಪ್ಪಿನಕೆರೆ ಜೊತೆಗೆ ಕೂನಬೇವಿನ ಅವಶೇಷಗಳು ಸೇರಿ ಕೊಂಡಿವೆ. ಹಾಗಾಗಿ ಸ್ಪಷ್ಟವಾಗಿ ಗರುತಿಸಲು ಕಷ್ಟಸಾಧ್ಯ. ಸಮಾಧಿಗಳನ್ನು ವೃತ್ತಾಕರವಾಗಿ ಬೆಣಚು ಕಲ್ಲುಗಳನ್ನು ಬಳಿಸಿಕೊಂಡು ೬ ಅಡಿ ವ್ಯಾಸದಲ್ಲಿ ರಚಿಸಿದ್ದಾರೆ. ಒಂದು ಶಿಲಾವೃತ್ತ ಗೋರಿಯಲ್ಲಿ ನಿಲುಗಲ್ಲಿನ ರೀತಿ ವೃತ್ತಕಾರವಾಗಿ ಜೋಡಿಸಿರುವುದು ವಿಶೇಷವಾಗಿದೆ. ಅಪರಿಚಿತರು ತೆಗೆದ ಗೋರಿಯಲ್ಲಿನ ಅಸ್ಥಿಯನ್ನು ಗಮನಿಸಿದಾಗ ದಕ್ಷಿಣಾಭಿಮುಖವಾಗಿ ಮಲಗಿಸುತ್ತಿದ್ದರೆಂದು ತಿಳಿದುಬರುವುದು. ಇದೇ ಪ್ರದೇಶದಲ್ಲಿ ಕೊರೆದು ಮೂಡಿಸಿದ ಎತ್ತಿನ ಚಿತ್ರ ಬಂಡೆಯ ಮೇಲೆ ರಚನೆಗೊಂಡಿದ್ದು, ಅವರ ಕಲೆಯನ್ನು ಬಿಂಬಿಸುವುದು.

ಮತ್ತೊಂದು ನೆಲೆಯು ಪಾಂಡವರ ಬೀಳಾಗಿದ್ದು. ಕೂನಬೇವು ಗೊಲ್ಲರಹಟ್ಟಿ ಹಿಂಭಾಗದಲ್ಲಿ ೧೧ ಶಿಲಾವೃತ್ತ ಗೋರಿಗಳಿವೆ. ಕೆಲವೊಂದು ಗೋರಿಗಳಲ್ಲಿ ವೃತ್ತಾಕಾರವಾಗಿರುವ ಕಲ್ಲುಗಳು ಅಳಿದುಳಿದುಕೊಂಡಿವೆ. ಉಳಿದಂತಹ ವೃತ್ತಾ ಶಿಲಾ ಗೋರಿಗಳು ದಿನ್ನೆಯಂತೆ ಉಳಿದಿವೆ. ಸಮಾಧಿಗಳು ೨೫x೨೫ ಅಡಿ ಉದ್ದ ಅಳತೆಯಲ್ಲಿ ರಚಿತಗೊಂಡಿದೆ. ಈ ಹಿಂದೆ ಪಾಂಡವರ ಬೀಳು ಎಲ್ಲಿಯೂ ಉಲ್ಲೇಖಗೊಂಡಿರುವುದಿಲ್ಲ. ಹಾಗಾಗಿ ಇದು ಹೊಸ ಶೋಧನೆಯೆಂದು ಪರಿಗಣಿಸಬಹುದು.

ಬೆಳಗಟ್ಟ

ತುರುವನೂರುನಿಂದ ದಕ್ಷಿಣಕ್ಕೆ ೯ ಕಿ.ಮೀ. ದೂರದಲ್ಲಿರುವ ಗ್ರಾಮವೇ ಬೆಳಗಟ್ಟ. ಹೆಸರೇ ಸೂಚಿಸುವಂತೆ ಎತ್ತರವಾದ ಪ್ರದೇಶದಲ್ಲಿ ಊರು ಬೆಳದಿರುವುದರಿಂದ ಬೆಳಗಟ್ಟವೆಂದು ಹೆಸರು ಬಂದಿರಬಹುದು. ಪಶ್ಚಿಮಕ್ಕೆ ಎತ್ತರವಾದ ಬೆಟ್ಟಗಳನ್ನು ಕಾಣಬಹುದು. ಈ ಹಿಂದೆ ಎಸ್.ವೈ. ಸೋಮಶೇಖರ್, ತಿಪ್ಪೇಸ್ವಾಮಿ ಎಸ್. ಜೊತೆಗೂಡಿ ಮೋರೇರ ಮಟ್ಟಿಯಲ್ಲಿ ಬೃಹತ್ ಶಿಲಾ ಸಮಾಧಿಗಳನ್ನು ಶೋಧಿಸಿದ್ದರು. ಲಕ್ಷ್ಮಣ್ ತೆಲಗಾವಿ ಅವರು ಎದ್ದಲು ಬಂಡೆಯಲ್ಲಿ ಕೊರೆದ ರೇಖಾಕೃತಿಗಳನ್ನು ಪತ್ತೆ ಮಾಡಿದ್ದಾರೆ.

ಬೆಳಗಟ್ಟದ ಪಶ್ಚಿಮಕ್ಕೆ ಅರ್ಧ ಕಿ.ಮೀ ದೂರದಲ್ಲಿ ಮೋರೇರ ಮಟ್ಟಿಯಿದೆ. ಮಟ್ಟಿಯ ಉತ್ತರಕ್ಕೆ ಕೆರೆಯನ್ನು ಕಾಣಬಹುದು. ಮಟ್ಟಿಯ ಮೇಲೆ ೭೦ಕ್ಕೂ ಹೆಚ್ಚು ಶಿಲಾವೃತ್ತಗೋರಿಗಳು ರಚನೆಗೊಂಡಿವೆ. ಶಿಲಾ ಸಮಾಧಿಗಳು ವೃತ್ತಾಪ್ರಕಾರಕ್ಕೆ ಸೇರಿದ್ದು, ಪಾಂಡು ಕುಣಿ ಮಾದರಿ ಸಮಾಧಿಯನ್ನು ಗುರುತಿಸಬಹುದು. ಈ ರೀತಿಯ ಸಮಾಧಿಯು ವೃತ್ತಕಾರವಾಗಿ ಹಸಿರು

[illegible]

ಮಿಶ್ರಿತ ಕಲ್ಲುಗಳನ್ನು ನಿಲ್ಲಿಸಿದ್ದಾರೆ. ಮಧ್ಯೆ ದಕ್ಷಿಣೋತ್ತರವಾಗಿ ೮ ರಿಂದ ೧೦ ಅಡಿ ಉದ್ದ ಮತ್ತು ೩ ರಿಂದ ೪ ಅಡಿ ಅಗಲದ ಬಂಡೆಯನ್ನು ಮುಚ್ಚಿದ್ದಾರೆಂದು ಉಲ್ಲೇಖಿತಗೊಂಡಿದೆ.[೨೫] ಸಂಶೋಧಕನಾದ ನಾನು ಕ್ಷೇತ್ರಕಾರ್ಯ ಮಾಡಿದಾಗ ಆಂಗ್ಲ ಸಂಖ್ಯೆ 8 (ಎಂಟು) ಆಕಾರದಲ್ಲಿ ಎರಡು ವೃತ್ತಗೋರಿಗಳು ಕಂಡುಬಂದಿವೆ. ಒಂದು ಶಿಲಾಗೋರಿ ೬೦ ಅಡಿ ವ್ಯಾಸವನ್ನು ಹೊಂದಿದ್ದು ವಿಶೇಷವೆನಿಸಿದೆ.

ಬಯಲು ಬಂಡೆರೇಖಾಕೃತಿ ನೆಲೆಯು ಬೆಳಗಟ್ಟದಿಂದ ಚಿತ್ರದುರ್ಗಕ್ಕೆ ಹೋಗುವ ಮಾರ್ಗದಲ್ಲಿ ೧ ಕಿ.ಮೀ. ಅಂತರದಲ್ಲಿ ಬಲಭಾಗಕ್ಕೆ ಎದ್ದಲುಬಂಡೆಯಲ್ಲಿವೆ. ಈ ಎದ್ದಲುಬಂಡೆ ಎಂಬುದು ತೆಲಗಿನ ಮೂಲ ಪದ. ಕನ್ನಡದಲ್ಲಿ 'ಎತ್ತುಗಳ ಗುಡ್ಡ' ಎಂಬ ಅರ್ಥ ಕೊಡುವುದು. ಕೊರೆದ ರೇಖಾಕೃತಿಗಳು ನೂರುಜುಶಿಲೆ, ಪೆಂಟಿಶಿಲೆ, ಮರಳುಶಿಲೆ, ಸುಣ್ಣಶಿಲೆಗಳ ಮೇಲೆ ರಚಿತಗೊಂಡಿವೆ.[೨೬] ಬಯಲು ಬಂಡೆಗಳಮೇಲೆ ಪಾದಾದೃತಿಗಳು, ಗುಳಿಗಳು, ಎತ್ತುಗಳು, ಕುದುರೆ ಸವಾರ ಇತ್ಯಾದಿ ರೇಖಾಕೃತಿಗಳನ್ನು ಅಂದಿನ ಮಾನವರು ಕೊರೆದು ಮೂಡಿಸಿದ್ದಾರೆ. ಇವು ಅವರಲ್ಲಿ ಅಡಗಿರಬಹುದಾದ ಕಲೆಯನ್ನು ಅಭಿವ್ಯಕ್ತಿಗೊಳಿಸುತ್ತವೆ. ಪಾದದ ಚಿತ್ರಗಳು ಬೃಹತ್ ಶಿಲಾಯುಗ ಕಾಲದ ಮಾನವನಿಗೆ ಕಲ್ಪನೆಯಿರಲಿಲ್ಲ, ಇತಿಹಾಸ ಆರಂಭ ಕಾಲದಲ್ಲಿ ರಚಿಸಿದ್ದಿರಬಹುದೆಂದು ಚಿತ್ರಕಲೆಯ ಉಪನ್ಯಾಸಕರು ಮಾಹಿತಿ ಕೊಡುತ್ತಾರೆ. ಎತ್ತುಗಳು ಕೃಷಿಯ ಸೂಚಕವಾದರೆ, ಕುದುರೆ ಸಾರಿಗೆ ಸಾಧನವಾಗಿರಬೇಕು. ಗುಳಿಗಳು ಬಹುಶಃ ಆಟವನ್ನು ಆಡುವುದಕ್ಕೆ ಇಲ್ಲವೆ ಆಯುಧಗಳನ್ನು ಉಜ್ಜಲು ರಚಿತಗೊಳಿಸಿದ್ಧಿರಬೇಕು. ಇವುಗಳು ಪುರಾತನ ಮಾನವನ ಸಂಸ್ಕೃತಿಯ ಬಿಂಬಿತವಾಗಿವೆ. ಎದ್ದಲು ಬಂಡೆಯಲ್ಲಿ ಮಾನವ ವಾಸವಾಗಿದ್ದಕ್ಕೆ ಬೇರೆ ಕುರುಹುಗಳು ಕಂಡುಬಂದಿರುವುದಿಲ್ಲ. ಆದರೆ ಸಮೀಪದಲ್ಲಿರುವ ಮೋರೇರ ಮಟ್ಟಿಯಲ್ಲಿ ಕಬ್ಬಿಣಯುಗದ ಶಿಲಾಗೋರಿಗಳಿರುವುದರಿಂದ ಕೊರೆದ ರೇಖಾಕೃತಿಗಳನ್ನು ಆ ಕಾಲಕ್ಕೆ ಸೇರಿಸಬಹುದು ಹಾಗೂ ಪಾಳೆಯಗಾರ ಕಾಲದ ಬೇಚಾರ ಗ್ರಾಮ ದಕ್ಷಿಣಕ್ಕೆ ಹತ್ತಿರ ಇರುವುದರಿಂದ ಈ ಕಾಲದ ಮಾನವನು ಕೆಲವು ರೇಖಾಕೃತಿಗಳನ್ನು ರಚಿಸಿರಬಹುದು.

ಚಿನ್ನೂರಿತಿಪ್ಪಯ್ಯನಹಟ್ಟಿ

ಪ್ರಸ್ತುತ ಪ್ರದೇಶದ ಹಾಯ್ಕಲ್ಲಿನಿಂದ ನಾಯಕನಹಟ್ಟಿಗೆ ಹೋಗುವ ಮಾರ್ಗದಲ್ಲಿ ೨ ಕಿ.ಮೀ. ಅಂತರದಲ್ಲಿ ಉಪ್ಪಹಳ್ಳ ಹರಿಯುತ್ತಿದೆ. ಈ ಹಳ್ಳದ ಬಲದಂಡೆಯ ಮೇಲೆ ಇರುವುದೇ ವಡೇಲುನಗರ (ಬೇಚಾರಕ್ ಗ್ರಾಮ). ಇದರಲ್ಲಿ ೧೫ಕ್ಕೂ ಹೆಚ್ಚು ಶಿಲಾವೃತ್ತ ಗೋರಿಗಳಿವೆ.[೨೭] ಅವುಗಳನ್ನು ಕಬ್ಬಿಣಯುಗಕ್ಕೆ ಸೇರಿಲಾಗಿದೆ. ಶಿಲಾವೃತ್ತಗೋರಿಗಳು ಕಲ್‌ಕುಪ್ಪೆ ಸಮಾಧಿಗಳ ರೂಪದಲ್ಲಿವೆ. ಮಧ್ಯಮ ಗಾತ್ರದ ಬೆಣಚುಕಲ್ಲುಗಳಿಂದ ಸಮಾಧಿಯನ್ನು ಮುಚ್ಚಿ ನಿರ್ಮಿಸಿದ್ದಾರೆ. ಈ ರೀತಿಯ ಸಮಾಧಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಗ್ಗಲೀಪುರ ಹೋಬಳಿಯ ಗಿರಿಗೌಡನ ದಡ್ಡಿಯಲ್ಲಿ ಬೃಹತ್ ಶಿಲಾವೃತ್ತಗೋರಿ ಶೋಧಿತ ಗೊಂಡಿದೆ.[೨೮] ಪ್ರಸ್ತುತ ಶಿಲಾಸಮಾಧಿಗಳು ೨೫x೨೪ ಉದ್ದ ಅಳತೆಯಲ್ಲಿ ರಚಿತಗೊಂಡಿದ್ದು,

ಕೃಷಿ ಕಾರ್ಯದಿಂದ ನಾಶಗೊಂಡಿವೆ. ಪೂರ್ವಜರ ನೆನಪನ್ನು ಮಾಡಿಕೊಳ್ಳುಲು ಯುಗಾದಿ ಹಬ್ಬದಲ್ಲಿ ಹಿರಿಯರ ಹಬ್ಬವೆಂದು ಆಚರಣೆ ಮಾಡುತ್ತಾರೆ. ಅದೇ ಸಂಪ್ರದಾಯದ ಜನರು ತಮ್ಮ ಪೂರ್ವಿಕರ ಕಬ್ಬಿಣಯುಗದ ಶಿಲಾಸಮಾಧಿಗಳನ್ನು ನಾಶಮಾಡುತ್ತಿರುವುದು ಅವರಲ್ಲಿ ಇತಿಹಾಸದ ಅರಿವಿಲ್ಲದಿರುವುದೇ ಅದಕ್ಕೆ ಕಾರಣ. ಹಾಗಾಗಿ ಜನಸಾಮಾನ್ಯರಿಗೆ ಪುರಾತನ ಮಾನವನು ರಚಿಸಿ ಬಿಟ್ಟು ಹೋದ ಸಮಾಧಿಗಳ ಬಗ್ಗೆ ಅರಿವು ಮೂಡಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ.

ಚಿಕ್ಕಕಬ್ಬಿಗೆರೆ

ಪ್ರಸ್ತುತ ಪ್ರದೇಶವಾದ ಚಿಕ್ಕಕಬ್ಬಿಗೆರೆ ಯಳಗೋಡಿನಿಂದ ಮೂರು ಕಿ.ಮೀ. ದೂರದಲ್ಲಿದೆ. ಯಳಗೋಡಿನಿಂದ ಚಿಕ್ಕಕಬ್ಬಿಗೆರೆಗೆ ಹೋಗುವಾಗ ಮುಂಚೆ ೨ ಕಿ.ಮೀ. ದೂರದಲ್ಲಿ ರಸ್ತೆಯ ಎಡ ಭಾಗಕ್ಕೆ ಪಾಂಡುಕುಳಿ ಸಮಾಧಿ ಮಾದರಿಯು ಸಿಗುವುದು. ರಸ್ತೆಯಿಂದ ನೋಡಿದರೆ ಸಮಾಧಿಯು ಪೂರ್ವಕ್ಕೆ ಮುಖಮಾಡಿದ್ದು, ಈ ಮುನ್ನ ನೈಸರ್ಗಿಕವಾಗಿ ರಚನೆಗೊಂಡಿರುವ ಅಥವಾ ಬೃಹತ್ ಶಿಲಾಯುಗದ ಮಾನವನಿಂದ ರಚನೆಗೊಂಡಿರಬಹುದಾದ ನೀರಿನ ಸಂಗ್ರಹ ದೋಣೆಯನ್ನು ದಾಟಿ ಹೋಗಬೇಕು. ಪಾಂಡುಕುಣಿ ಸಮಾಧಿಗೆ ಸ್ಥಳೀಯರು ಕರಿಯಮ್ಮ ಎಂದು ಪೂಜಿಸುತ್ತಿದ್ದಾರೆ. ಆದ್ದರಿಂದ ಶಿಲಾಸಮಾಧಿ ನೆಲೆಗೆ ದೋಣೆ ಕರಿಯಮ್ಮ ಎಂದೇ ಪ್ರಸಿದ್ಧಿ. ಸಮಾಧಿಯನ್ನು ದಪ್ಪನೆಯ ಕಲ್ಲು ಬಂಡೆಗಳನ್ನು ಬಳಸಿಕೊಂಡು ಪೂರ್ವಭಾಗ ತೆರೆದಿರುವಂತೆ ಮೂರು ಕಡೆಯಿಂದ ನಿಲ್ಲಿಸಿ, ಈ ಬಂಡೆಗಳ ಮೇಲೆ ಕಲ್ಲು ಬಂಡೆಯನ್ನು ಹಾಸಿದ್ದಾರೆ. ಇಂದು ಸ್ಥಳೀಯರು ಪೂರ್ವಕ್ಕೆ ತೆರೆದ ಒಳಭಾಗದಲ್ಲಿ ಕಲ್ಲು ಗುಂಡುಗಳನ್ನು ಜೋಡಿಸಿ ಪೂಜಿಸುತ್ತಿರುವರು. ಈ ನೆಲೆಯಲ್ಲಿ ಪಾಂಡುಕುಣಿ ಸಮಾಧಿ ನೆಲದ ಮೇಲೆ ಕಂಡುಬಂದರೆ, ಬೆಳಗಟ್ಟದ ನೆಲೆಯಲ್ಲಿ ನೆಲದ ಒಳಭಾಗದಲ್ಲಿ ನಿರ್ಮಿತಗೊಂಡಿರುವುದು ವಿಶೇಷ.

ಪ್ರಸ್ತುತ ನೆಲೆಯು ಈ ಹಿಂದೆ ಸಂಶೋಧಕರಿಂದ ಶೋಧಿತಗೊಂಡು, ಪಾಂಡುಕುಳಿ ಮಾದರಿ ಸಮಾಧಿಯೆಂದು ಗುರುತಿಸಿಕೊಂಡಿದೆ.[೨೮] ಸಮಾಧಿಯ ಸ್ವರೂಪ, ಐತಿಹಾಸಿಕತೆ ಇತ್ಯಾದಿ ಮಹತ್ವದ ವಿಚಾರಗಳನ್ನು ಪ್ರಕಟಿಸುವುದರ ಮುಖಾಂತರ ಪ್ರಸ್ತುತ ಪರಿಸರದ ಮೇಲೆ ಬೆಳಕು ಚೆಲ್ಲಿದ್ದಾರೆ.

ಕೋತಿಗುಡ್ಡ

ಚಿಕ್ಕಗೊಂಡನಹಳ್ಳಿಯಿಂದ ಹೊಸಪೇಟೆಗೆ ಹೋಗುವ ಮಾರ್ಗದಲ್ಲಿ ೧ ಕಿ.ಮೀ. ದೂರದಲ್ಲಿರುವ ಕೊಂಚೇರಮಾಳಿಗೆ ಎದುರಿಗೆ ಇರುವುದೇ ಕೋತಿಗುಡ್ಡ. ಚಿಕ್ಕದಾದ ಈ ಗುಡ್ಡದಲ್ಲಿ ೨೬ಕ್ಕೂ ಹೆಚ್ಚು ಶಿಲಾವೃತ್ತಾಗೋರಿಯನ್ನು ಶೋಧಿಸಿದ್ದೇನೆ. ಸ್ಥಳೀಯವಾಗಿ ಸಿಗುವ ಕಲ್ಲುಗಳನ್ನು ಬಳಸಿಕೊಂಡು ವೃತ್ತಾಕಾರವಾಗಿ ಜೋಡಿಸಿ ಸಮಾಧಿಯನ್ನು ರಚಿಸಿದ್ದಾರೆ. ಅತ್ಯಂತ ದೊಡ್ಡದು ೨೭ x ೨೪ ಅಡಿ ಉದ್ದ ಅಳತೆಯಿಂದ ಮತ್ತು ಚಿಕ್ಕದು ೧೫ x ೧೫

ಅಡಿ ಅಳತೆಯನ್ನು ಹೊಂದಿವೆ. ಪ್ರಸ್ತುತ ಗುಡ್ಡದಲ್ಲಿ ಕಬ್ಬಿಣದ ಮಿಶ್ರಿತ ಕಲ್ಲುಗಳು ಸಿಗುತ್ತವೆ. ಸಮೀಪದಲ್ಲಿ ಸಂಗೇನಹಳ್ಳಿಕೆರೆಯಲ್ಲಿ ವಸತಿ ನೆಲೆ ಶೋಧಿತಗೊಂಡಿದೆ. ನನ್ನ ಕ್ಷೇತ್ರ ಕಾರ್ಯದಲ್ಲಿ ಕೋತಿಗುಡ್ಡದ ಸಮೀಪದಲ್ಲಿರುವ ಹವಳೇನಹಳ್ಳಿಯ ಆಳೂರಿನಲ್ಲಿ ಎರಡು ಶಿಲಾವೃತ್ತಗೋರಿಗಳು ಕಂಡುಬಂದಿವೆ. ಆದ್ದರಿಂದ ಪ್ರಸ್ತುತ ಪರಿಸರ ಪ್ರಾಚೀನ ಮಾನವನ ಸಂಸ್ಕೃತಿಯ ತಾಣ ವಾಗಿತ್ತೆಂದು ಹೇಳಬಹುದು. ಈ ನಿವೇಶನಗಳಲ್ಲಿ ಉತ್ಖನನಗಳಾದರೆ ಸಾಂಸ್ಕೃತಿಕವಾಗಿ, ಮಹತ್ವ ಸಾರಲು ಸಾಧ್ಯವಾಗುತ್ತದೆ.

ಸುಲ್ತಾನಿಪುರ

ಹೆಸರೇ ಸೂಚಿಸುವಂತೆ ಮುಸ್ಲಿಂ ಜನಾಂಗದವರು ಹೆಚ್ಚಾಗಿ ವಾಸವಾಗಿದ್ದರಿಂದ ಸುಲ್ತಾನಿಪುರ ಎಂಬ ಹೆಸರು ಬಂದಿರಬಹುದು. ಈ ಗ್ರಾಮಕ್ಕೆ ಮೊದಲು ಹೆಸರು ಲಿಂಗದಹಳ್ಳಿ. ಸುಲ್ತಾನಿಪುರ ಏಳು ಗ್ರಾಮಗಳನ್ನು ಒಳಗೊಂಡ ಗ್ರಾಮ ಪಂಚಾಯ್ತಿ ಕೇಂದ್ರ, ಚಿತ್ರದುರ್ಗದಿಂದ ೧೫ ಕಿ.ಮೀ ದೂರದಲ್ಲಿದೆ.

ಸುಲ್ತಾನಿಪುರದಿಂದ ರಿಮ್ಮಘಟ್ಟಕ್ಕೆ ಹೋಗುವ ಮಾರ್ಗ ಮಧ್ಯೆ ರಸ್ತೆಯ ಬಲಭಾಗಕ್ಕೆ ಜುಂಜಪ್ಪನ ಮಟ್ಟಿ ಕಂಡುಬರುವುದು. ಈ ಮಟ್ಟಿಯಲ್ಲಿ ನಾನು ಮತ್ತು ಮಂಜಣ್ಣ ಪಿ.ಬಿ. ಜೊತೆಗೂಡಿ ೧೧ ಶಿಲಾವೃತ್ತಾಗೋರಿಗಳನ್ನು ಶೋಧಿಸಿದ್ದೇವೆ. ಇವುಗಳಲ್ಲಿ ಒಂದು ಆಯಾತಕಾರ ವಾಗಿರುವ ಶಿಲಾಗೋರಿಯಿರುವುದು ವಿಶೇಷ. ವೃತ್ತಕಾರದ ಶಿಲಾಗೋರಿಗಳು ೨೫x೨೫ ಅಡಿ ಉದ್ದ ಅಳತೆಯನ್ನು ಹೊಂದಿದ್ದರೆ, ಆಯಾತಕಾರವಾಗಿರುವ ಶಿಲಾಗೋರಿ ೧೦x೫ ಅಡಿ ಉದ್ದ ಅಳತೆಯನ್ನು ಹೊಂದಿದೆ. ಮಟ್ಟಿಯ ಸುತ್ತಮುತ್ತ ಸಿಗುವ ಕಲ್ಲುಗುಂಡುಗಳನ್ನು ವೃತ್ತಾಕಾರವಾಗಿ ಜೋಡಿಸಿ ಶಿಲಾಗೋರಿಗಳನ್ನು ನಿರ್ಮಿಸಿದ್ದಾರೆ. ಈ ಹಿಂದೆ ಶೋಧ ಗೊಂಡಿರುವ ನೆಲೆಗಳನ್ನು ಪಾಂಡವರ ಮನೆ, ಮೋರೇರಮಟ್ಟಿ, ಎಂಬ ಹೆಸರಿನಿಂದ ಕರೆಯುತ್ತಿದ್ದಾರೆ. ಆದರೆ ಸುಲ್ತಾನಿಪುರ ನೆಲೆಗೆ ಜುಂಜಪ್ಪನ ಮಟ್ಟಿ ಎಂದು ಕರೆದಿರುವುದು ವಿಶೇಷ.

ಗೋಸಿರಪ್ಪನಗುಡ್ಡ

ತುರುವನೂರು ಹೋಬಳಿಯ ಗೌರಮ್ಮನಹಳ್ಳಿಯಿಂದ ೩ ಕಿ.ಮೀ. ದೂರದಲ್ಲಿ ತೋರಣ ಗಟ್ಟೆ ಗ್ರಾಮ ಸಿಗುವುದು. ಇಲ್ಲಿಂದ ಬಿದರಕೆರೆಗೆ ಹೋಗುವ ಮಾರ್ಗದಿಂದ ಎಡಭಾಗಕ್ಕೆ ೧ ಕಿ.ಮೀ ದೂರದಲ್ಲಿ ಗೋಸಿರಪ್ಪನ ಗುಡ್ಡಕ್ಕೆ ಪ್ರವೇಶಿಸಬಹುದು. ಪ್ರವೇಶ ಮಾಡುತ್ತಿದ್ದಂತೆ ಕರಿಯಮ್ಮದೇವರ ಮಟ್ಟಿಯಲ್ಲಿ ೩೮ಕ್ಕೂ ಹೆಚ್ಚು ಶಿಲಾವೃತ್ತ ಗೋರಿಗಳು ನನಗೆ ಮತ್ತು ಮಂಜಣ್ಣ ಪಿ.ಬಿ.ಯವರಿಗೆ ಕಂಡುಬಂದಿವೆ. ಈ ನೆಲೆಯು ಬೃಹತ್ ಶಿಲಾಯುಗ ಕಾಲಕ್ಕೆ ಸೇರಿದ್ದು, ಕ್ರಿ.ಪೂ. ೧೦೦೦ದಿಂದ ಕ್ರಿ.ಶ. ೧ನೇ ಶತಮಾನದ ಅವಧಿಯಲ್ಲಿ ಶಿಲಾಗೋರಿಗಳು ನಿರ್ಮಾಣಗೊಂಡಿರಬೇಕೆಂದು ಹೇಳಬಹುದು. ಸ್ಥಳೀಯವಾಗಿ ಸಿಗುವ ಕಲ್ಲುಗಳಿಂದ ವೃತ್ತಾಕಾರ ವಾಗಿ ಜೋಡಿಸಿ ಸಮಾಧಿ ನಿರ್ಮಿಸಿದ್ದಾರೆ. ಶಿಲಾ ಸಮಾಧಿಗಳು ವೃತ್ತಪ್ರಕಾರಕ್ಕೆ ಸೇರಿದ್ದು,

ಅತ್ಯಂತ ದೊಡ್ಡದು ೩೦ x ೩೦ ಅಡಿ ಉದ್ದ ಅಳತೆಯಿದ್ದರೆ, ಚಿಕ್ಕದು ೧೫ x ೧೫ ಅಡಿ ಉದ್ದ ಅಗಲದಲ್ಲಿ ನಿರ್ಮಾಣಗೊಂಡಿವೆ. ಶಿಲಾವೃತ್ತ ಗೋರಿಗಳನ್ನು ಕುರಿಕಾಯುವರು ಕಟ್ಟಿದ್ದಾರೆ, ಅಲ್ಲದೆ ಇವುಗಳನ್ನು ಕರಿಯಮ್ಮದೇವರೆಂದು ಪೂಜಿಸುತ್ತಿದ್ದಾರೆಂಬುದಾಗಿ ಸ್ಥಳೀಯರ ಅಭಿಪ್ರಾಯ ವಾಗಿದೆ. ಕೂನಬೇವು ಮತ್ತು ತುರುವನೂರು ಪ್ರದೇಶದಲ್ಲಿ ಬೃಹತ್ ಶಿಲಾಯುಗ ಸಮಾಧಿಗಳನ್ನು ಹೋಲಿಕೆ ಕೊಡುವುದರಿಂದ ಅವುಗಳು ಬೃಹತ್ ಶಿಲಾಯುಗದಲ್ಲಿಯೇ ನಿರ್ಮಾಣಗೊಂಡಿವೆ ಎಂದು ಸ್ಪಷ್ಟಪಡಿಸಬಹುದು. ಬ್ರಹ್ಮಗಿರಿ ಶಿಲಾಸಮಾಧಿಗಳಲ್ಲಿ ಸಿಕ್ಕಂತಹ ಕಬ್ಬಿಣದ ಆಯುಧಗಳು, ಮಡಕೆ ಚೂರುಗಳು, ಮಾನವನ ಮೂಳೆ ಅವಶೇಷಗಳು ಪ್ರಸ್ತುತ ಸಮಾಧಿಗಳಲ್ಲಿ ಸಿಗುತ್ತವೆಂದು ಹೇಳಬಹುದು.

ಹುಲ್ಲೇಹಾಳ್

ಚಿತ್ರದುರ್ಗ ತಾಲೂಕಿನಲ್ಲಿ ಹುಲ್ಲೇಹಾಳ್ ಗ್ರಾಮವಿದೆ. ಬಿದರೆಕೆರೆಯಿಂದ ಹುಲ್ಲೇಹಾಳಿಗೆ ಹೋಗುವ ಮಾರ್ಗ ಮಧ್ಯೆ ತಾಲೂಕು ಗಡಿ ಫಲಕವಿದ್ದು, ಫಲಕದ ಸಮೀಪವೇ ರಸ್ತೆಯ ಎಡಭಾಗದ ಶಿವಲಿಂಗಪ್ಪನ ಹೊಲದಲ್ಲಿ ಕಬ್ಬಿಣಯುಗದ ಶಿಲಾವೃತ್ತಗೋರಿಯನ್ನು ನಾನು ಮತ್ತು ಮಂಜಣ್ಣ ಪಿ.ಬಿ ಕ್ಷೇತ್ರಕಾರ್ಯದಲ್ಲಿ ಪತ್ತೆ ಮಾಡಿದ್ದೇವೆ.

ಪ್ರಸ್ತುತ ಪ್ರದೇಶದಕ್ಕೆ ಹುಲ್ಲೇಹಾಳ್ ಗ್ರಾಮ ಸೇರದಿದ್ದರೂ, ಶಿವಲಿಂಗಪ್ಪನ ಹೊಲ ತುರುವನೂರು ಹೋಬಳಿಗೆ ಸೇರಿದ ಗ್ರಾಮಕ್ಕೆ ಅಂಟಿಕೊಂಡಿರುವ ಗೋಸಿರಪ್ಪನ ಗುಡ್ಡದ ಹಿಂಭಾಗದ ತಪ್ಪಲಿನಲ್ಲಿರುವುದರಿಂದ ಒಂದೇ ಪರಿಸರಕ್ಕೆ ಸೇರುವುದು. ಆದ್ದರಿಂದ ಪ್ರಸ್ತುತ ನೆಲೆಯನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಶಿವಲಿಂಗಪ್ಪನ ಹೊಲದಲ್ಲಿರುವ ಶಿಲಾವೃತ್ತ ಗೋರಿ ೨೪ x ೨೪ ಅಡಿ ಉದ್ದವನ್ನು ಹೊಂದಿದ್ದು, ಸ್ಥಳೀಯ ಕಲ್ಲಿನಿಂದ ರಚಿತಗೊಂಡಿವೆ. ಗೋರಿಯ ಮೊಗ್ಗಲಲ್ಲಿರುವ ಏಳು ಅಡಿ ಎತ್ತರದ ಲಿಂಗಮುದ್ರೆ ಕಲ್ಲನ್ನು ಮತ್ತು ಸಮಾಧಿಯನ್ನು ಪೂಜಿಸುತ್ತಿದ್ದಾರೆ.

ದೊಡಗಟ್ಟ

ತುರುವನೂರಿನಿಂದ ನಾಯಕನಹಟ್ಟಿಗೆ ಹೋಗುವ ದಾರಿಯಲ್ಲಿ ದೊಡಗಟ್ಟ ಗ್ರಾಮವಿದೆ. ಈ ಗ್ರಾಮಕ್ಕೆ ಹೊಂದಿಕೊಂಡಿರುವ ಕೆರೆಯ ಎಡದಂಡೆಯ ಮೇಲೆ ಕಲ್ಲಿನ ಸಮೂಹಗಳಿವೆ. ಇವುಗಳ ಮೇಲೆ ಕುಟ್ಟಿ/ಕೊರೆದು ಮೂಡಿಸಿದ ರೇಖಾಕೃತಿಗಳು ಇರುವುದನ್ನು ನಾನು ಮತ್ತು ನಾಗರಾಜಪ್ಪ ಎಸ್. ಜೊತೆಗೂಡಿ ಗುರುತಿಸಿದ್ದೇವೆ. ಕುಟ್ಟಿ ಮೂಡಿಸಿದ ರೇಖಾಕೃತಿಗಳಲ್ಲಿ ಜೋಡಿಪಾದ, ಬರ್ಚಿಹಿಡಿದ ಮನುಷ್ಯ, ಜ್ಯಾಮಿತಿ ವಿನ್ಯಾಸ, ಎತ್ತಿನ ಸಾಲುಗಳು, ಗೂಳಿ, ಗುಳಿ ಮೊದಲಾದವುಗಳು ಪ್ರಮುಖವು. ದೊಡ್ಡ ಭುಜವಿರುವ ಗೂಳಿಯ ರೇಖಾಕೃತಿಗಳು ೪ ಇಂಚುನಿಂದ ೮ ಇಂಚು ಎತ್ತರ, ೩ ಇಂಚುನಿಂದ ೧೦ ಇಂಚು ಎತ್ತರವಿದೆ. ಬರ್ಚಿ ಹಿಡಿದಿರುವ ಮನುಷ್ಯನ ರೇಖಾಕೃತಿಯನ್ನು ಗಮನಿಸಿದಾಗ ಕಬ್ಬಿಣದ ಆಯುಧವನ್ನು ಬಳಸುತ್ತಿದ್ದ ರೆಂದು ತಿಳಿದುಬರುತ್ತದೆ. ಈ ನೆಲೆಯ ಪೂರ್ವಕ್ಕೆ ನಾಯಕಹಟ್ಟಿಗೆ ಹೋಗುವ ರಸ್ತೆಯ

[illegible]

ಬಲಕ್ಕೆ ಒಂದು ಶಿಲಾಸಮಾಧಿ ಕಂಡುಬಂದಿದೆ. ಅಲ್ಲದೆ ಪಶ್ಚಿಮಕ್ಕೆ ತುರುವನೂರಿನ ಹಾಳೂರಲ್ಲಿ ಬೃಹತ್ ಶಿಲಾಗೋರಿಗಳು ಶೋಧನೆಗೊಂಡಿವೆ. ಇಲ್ಲಿಂದ ಯಾವುದೋ ಸಂದರ್ಭದಲ್ಲಿ ಪ್ರಸ್ತುತ ನೆಲೆಗೆ ಬಂದಿರಬೇಕೆಂದು ಹೇಳಬಹುದು. ಆದ್ದರಿಂದ ಈ ರೇಖಾಕೃತಿಗಳು ಬೃಹತ್ ಶಿಲಾಯುಗ ಕಾಲಕ್ಕೆ ಸೇರಿಸಲಾಗಿದೆ.

ಬಗ್ಗುಲರಂಗವ್ವನಹಳ್ಳಿ

ಬೆಳಗಟ್ಟದಿಂದ ಹಾಯ್ಕಲ್ಲಿಗೆ ಹೋಗುವ ಮಾರ್ಗ ಮಧ್ಯೆ ಎಡಭಾಗಕ್ಕೆ ೨ ಕಿ.ಮೀ ದೂರದಲ್ಲಿರುವುದೇ ಬಗ್ಗುಲರಂಗವ್ವನಹಳ್ಳಿ. ಗ್ರಾಮದ ಮಾರಿಕಟ್ಟೆ ಹಳ್ಳದ ಎಡ ಮತ್ತು ಬಲದಂಡೆಯ ಮೇಲೆ ಕಲ್ಲಿನ ಸಮೂಹ ಕಾಣಬಹುದು. ಬಯಲು ಬಂಡೆಗಳ ಮೇಲೆ ರೇಖಾಕೃತಿಗಳು ರಚಿತಗೊಂಡಿವೆ. ಪ್ರಸ್ತುತ ನೆಲೆಯ ರೇಖಾಕೃತಿಗಳನ್ನು ತಿಪ್ಪೇಸ್ವಾಮಿ.ಎಸ್. ಅವರು ಶೋಧಿಸಿದ್ದಾರೆ.[೩೦] ಬಂಡೆಗಳ ಮೇಲೆ ಆಂಗ್ಲ ವಿ(V) ಆಕಾರದ ಮತ್ತು ಯು (U) ಆಕಾರದ ಕೊಡುಗುಳ್ಳುಳ್ಳ ಗೂಳಿ ಚಿತ್ರಗಳನ್ನು ಬೃಹತ್‌ಶಿಲಾಯುಗದ ಮಾನವರು ಕುಟ್ಟಿ ಮೂಡಿಸಿದ್ದಾರೆ. ಎದುರುಬದರು ನಿಂತುಕೊಂಡಿರುವ ಎತ್ತುಗಳ ಚಿತ್ರಗಳನ್ನು ಮತ್ತು ಪಾದದ ರೇಖಾಕೃತಿಯಲ್ಲಿ ಬೆರಳುಗಳನ್ನು ಕುಟ್ಟಿಮೂಡಿಸಲಾಗಿದೆ. ಎತ್ತುಗಳ ಒಳಭಾಗವನ್ನು ತೋರಿಸದಿರುವುದರಿಂದ ದಷ್ಟ ಪುಷ್ಟತೆಯಿಂದ ಕೂಡಿಲ್ಲವೆಂದು ಹೇಳಬಹುದು. ಎದುರುಬದರು ಇರುವ ಎತ್ತಿನ ಚಿತ್ರವನ್ನು ಗಮನಿಸಿದರೆ ದೇಹ, ಕೊಡುಗಳು ಚಿಕ್ಕದು ದೊಡ್ಡದೆಂದು ಗುರುತಿಸಲು ಸಾಧ್ಯವಿದೆ. ಬೆಳಗಟ್ಟ, ಹಾಯ್ಕಲ್, ಗೋರಿನೆಲೆಗಳು ಸಮೀಪವಿರುವುದರಿಂದ, ಕಬ್ಬಿಣಯುಗದ ರೇಖಾಕೃತಿಗಳಾಗಿರಬಹುದೆಂದು ನಿರ್ಧರಿಸಲಾಗಿದೆ.

ಬಾಗೇನಾಳ್

ಕೂನಬೇವಿನಿಂದ ದಕ್ಷಿಣಕ್ಕೆ ೪ ಕಿ.ಮೀ ದೂರದಲ್ಲಿರುವ ಗ್ರಾಮವೇ ಬಾಗೇನಾಳ್. ಅತ್ಯಂತ ಚಿಕ್ಕದಾದ ಗ್ರಾಮವಾಗಿದ್ದರು ಐತಿಹಾಸಿಕ ಮಹತ್ವ ಪಡೆದುಕೊಂಡಿರುವ ಪ್ರದೇಶ. ಹಾಯ್ಕಲ್ಲಿನ ಕರಿಬಂಟನ ಕತೆಯಲ್ಲಿರುವಂತೆ ಬಾಗೇನಾಳ್ ಬಾಗೆಯೂರು ಆಗಿತ್ತು, ಕರಿಬಂಟ ತೋಣ್ಣೂರು ರಾಕ್ಷಸಿಯಿಂದ ತಪ್ಪಿಸಿಕೊಂಡು ಬಾಗೆಯೂರು ಕೋಟೆಯಲ್ಲಿ ಬಚ್ಚಿಟ್ಟುಕೊಂಡಿದ್ದನೆಂಬ ಪ್ರತೀತಿ ಇದೆ. ಪಾಪಯ್ಯನಮಟ್ಟಿಯಲ್ಲಿ ಜನರು ಈ ಹಿಂದೆ ವಾಸವಾಗಿದ್ದರು, ಅದು ಬಾಗೇಪಟ್ಟಣವಾಗಿತ್ತೆಂದು ಸ್ಥಳೀಯರ ಅಭಿಪ್ರಾಯವಾಗಿದೆ.[೩೧]

ಪಾಪಯ್ಯನ ಮಟ್ಟಿಯಲ್ಲಿ ಸಾಕಷ್ಟು ಕಲ್ಲಿನ ಸಮೂಹಗಳಿದ್ದು, ಅವುಗಳ ಮೇಲೆ ಉಜ್ಜಿ ಮತ್ತು ಕುಟ್ಟಿದ ರೇಖಾಕೃತಿಗಳು ರಚಿತಗೊಂಡಿರುವುದು ಬೆಳಕಿಗೆ ಬಂದಿದೆ.[೩೨] ಲೇಖಕನಾದ ನಾನು ಕ್ಷೇತ್ರಕಾರ್ಯ ಮಾಡುವಾಗ ೬ ಇಂಚು ಎತ್ತರವಾಗಿ ಗೂಳಿಯನ್ನು ಮೂಡಿಸಿರುವುದು ಕಂಡುಬಂದಿದೆ. ಗೂಳಿಯು ಬಲಿಷ್ಟವಾಗಿದ್ದು, ಗೂಳಿಯ ಒಳಭಾಗವನ್ನು ತೋರಿಸಿದ್ದರಿಂದ ಆ ರೀತಿ ಹೇಳಬಹುದು. ಗೂಳಿಯ ಕೊಂಬುಗಳು ಆಂಗ್ಲ ಪದ ವಿ (V) ಆಕಾರದಲ್ಲಿ ಮುಂದೆ ಬಾಗಿದ್ದು, ಸಿಟ್ಟಿನಿಂದ ಹಾಯಲು ಬರುತ್ತಿದೆ ಎಂಬಂತೆ ಕುಟ್ಟಿ

[illegible]

ಮೂಡಿಸಿದ್ದಾರೆ. ಇಂತಹದ್ದು ಗೋವಾ ರಾಜ್ಯ ಉಸ್‌ಗಾಲಿಮೋಲ್ ಮತ್ತು ಕಾಜೂರ್‌ನಲ್ಲಿ ರೇಖಾಕೃತಿ ರಚನೆಗೊಂಡಿರುವುದಾಗಿ ಹೇಳಬಹುದು.[೩೩] ಒಂದು ಹಸಿರು ಮಿಶ್ರಿತ ಕಲ್ಲಿನ ಮೇಲೆ ಎತ್ತಿನ ಚಿತ್ರವನ್ನು ಕುಟ್ಟಿ ಮೂಡಿಸಿದ್ದಾರೆ. ನೀಳವಾದ ಕೊಡುಗಳು ಮತ್ತು ಎತ್ತಿನ ಮೇಲೆ ಮನುಷ್ಯ ಕುಳಿತಿರುವುದು ಕಾಣಬಹುದು. ಉಳಿದಂತೆ ಹಾವು, ಗುಳಿಗಳು ಇತ್ಯಾದಿ ರೇಖಾಕೃತಿಗಳನ್ನು ಗಮನಿಸಬಹುದಾಗಿದೆ. ಈ ನೆಲೆಯ ಸುತ್ತಮುತ್ತ ಬೃಹತ್ ಶಿಲಾಯುಗ ಸಮಾಧಿಗಳು ಶೋಧನೆಗೊಂಡಿರುವುದರಿಂದ ಬೃಹತ್ ಶಿಲಾಯುಗಕ್ಕೆ ಸೇರಿಸಲಾಗಿದೆ.

ಬೆಳಗಾವಿ, ವಿಜಾಪುರ ಭಾಗದಲ್ಲಿ ಮುನಿವಾಸನ ಗುಹೆ, ಬಳ್ಳಾರಿ ರಾಯಚೂರು, ಚಿತ್ರದುರ್ಗ ಭಾಗದಲ್ಲಿ ಮೋರಿಯರ ಮಟ್ಟಿ, ಪಾಂಡವರ ಬೀಳು ಎಂತಲೂ, ದಕ್ಷಿಣ ಧಾರವಾಡ ಭಾಗದಲ್ಲಿ ಸಿದ್ದರಕಟ್ಟೆ, ಚಸ್ಮದಕಟ್ಟೆಗಳೆಂದು ದಕ್ಷಿಣ ಕರ್ನಾಟಕದಲ್ಲಿ ಪಾಂಡವರ ಕಟ್ಟೆಯೆಂದು ಬೇರೆಬೇರೆ ಹೆಸರುಗಳಲ್ಲಿ ಕಬ್ಬಿಣಯುಗದ ನೆಲೆಗಳಲ್ಲಿ ಶಿಲಾವೃತ್ತ ಗೋರಿಗಳು ಗುರುತಿಸಿಕೊಂಡಿವೆ.[೩೪] ಪ್ರಸ್ತುತ ಪ್ರದೇಶದಲ್ಲಿ ಮೋರೇರ ಮಟ್ಟಿ, ಪಾಂಡವರ ಬೀಳು, ಆಳೂರು, ಜುಂಜಪ್ಪನ ಮಟ್ಟಿ, ಪಾಪಯ್ಯನಮಟ್ಟಿ, ವಡೇಲುನಗರ, ಪಾಂಡವರ ಮನೆ, ಕೋತಿಗುಡ್ಡ, ಕರಿಯಮ್ಮ ದೇವರಮಟ್ಟಿ, ಎದ್ದುಲುಬಂಡೆ, ದೊಣ್ಣೆಕರಿಯಮ್ಮ ಎಂಬ ಹೆಸರಿನಿಂದ ಕರಿಯುವ ನೆಲೆಗಳು ಕಬ್ಬಿಣಯುಗದ ಸಂಸ್ಕೃತಿಯ ಕಾಲಕ್ಕೆ ಸೇರಿವೆ.

ಕಬ್ಬಿಣಯುಗದ ಮಾನವರು ಬೆಟ್ಟಗಳ ತಪ್ಪಲಿನಲ್ಲಿ, ಕಲ್ಲುಗುಡ್ಡಗಳ ಸಮೀಪ, ಕೆರೆ, ಹಳ್ಳಗಳ ದಂಡೆಯ ಮೇಲೆ, ಬಯಲು ಪ್ರದೇಶಗಳಲ್ಲಿ ಆಶ್ರಯ ಹೊಂದಿದ್ದರು. ಇಂತಹ ಮಾನವನು ಉತ್ತರ ಭಾರತದಿಂದ ದಕ್ಷಿಣಭಾರತದ ಕಡೆ ಬಂದನೆಂದು ಆಧಾರಗಳಿವೆ. ಬ್ರಹ್ಮಗಿರಿಯ ಪೂರ್ಣಕಪ್ಪು, ಕಪ್ಪು-ಕೆಂಪು ದ್ವಿವರ್ಣದ ಮೃತ್ಪಾತ್ರೆಗಳ ರಚನೆಗೂ ಗುಜಾರಾತ್ ಪ್ರದೇಶದ ಪಾತ್ರೆಗಳಿಗೆ ದಕ್ಷಿಣಭಾಗದ ಹಳ್ಳೂರಿನ ಪಾತ್ರೆಗಳಿಗೆ ಹೋಲುತ್ತವೆ ಎಂದು ನಿರ್ಣಯಿಸಲಾಗಿದೆ.[೩೫]

ಬೃಹತ್ ಶಿಲಾಯಗದ ಮಾನವರು ಸತ್ತಬಳಿಕ ವಿವಿಧ ಪ್ರಕಾರದಲ್ಲಿ ಶವಸಂಸ್ಕಾರ ಮಾಡುತ್ತಿದ್ದರು. ಅವುಗಳು ದೇಶಾದ್ಯಂತ ಹರಡಿಕೊಂಡಿವೆ. ವರ್ತುಲಾಕಾರದ ಸಮಾಧಿ, ಎರಡು ವೃತ್ತಾಕಾರದ ಸಮಾಧಿ, ಕೋಣೆ, ಕಂಡಿಕೋಣೆ ಗೋರಿ, ಟೋಪಿ ಆಕಾರದ ಸಮಾಧಿ, ಸ್ವಸ್ತಿಕಕಾರದ ಗೋರಿ, ಗುಂಡಿವೃತ್ತಗೋರಿ, ಗುಹಾಸಮಾಧಿ, ಸ್ಯಾಕ್ರಿಫೋಗಿಯ ಸಮಾಧಿ, ಮನುಷ್ಯನಾಕೃತಿ ಸಮಾಧಿ, ಅಲೈನ್‌ಮೆಂಟ್ ಸಮಾಧಿಗಳು ಅಂದಿನ ಮಾನವನ ನಿರ್ಮಿತಿಗಳಾಗಿವೆ. ಇವುಗಳು ಬೃಹತ್ ಶಿಲಾಯುಗದ ಸ್ಮಾರಕಗಳಾಗಿದ್ದು ಬೌದ್ಧ ವಾಸ್ತುಶಿಲ್ಪಕ್ಕೆ ಪ್ರಭಾವವನ್ನು ಬೀರಿವೆ. ಸಮಾಧಿಗಳಲ್ಲಿ ಮಡಕೆ, ಧಾನ್ಯ ವಸ್ತುಗಳನ್ನು, ಆಯೋಧಪಕರಣಗಳನ್ನು ಮತ್ತು ಅಭರಣಗಳನ್ನು ಶವದ ಜೊತೆಗೆ ಉಳುತ್ತಿದ್ದರೆಂದು ಉತ್ಖನನಗಳಲ್ಲಿ ದೊರಕಿದ ಅವಶೇಷಗಳು ಆಧಾರ ನೀಡುತ್ತವೆ.

[illegible]

ಕಬ್ಬಿಣಯುಗದ ಮಾನವರು ಅಸ್ಟ್ರೋಲಾಯ್ಡ್ ಬುಡಕಟ್ಟಿನ ಜನರಾಗಿದ್ದರೆಂದು ಬ್ರಹ್ಮಗಿರಿಯಲ್ಲಿನ ಉತ್ಖನನದಲ್ಲಿ ದೊರಕಿದ ಅಸ್ಥಿಯ ವಿಶ್ಲೇಷಣೆಯಿಂದ ದೃಢಪಟ್ಟಿದೆ.[೬] ಈ ಮಾನವರು ರಾಗಿ ಬಳಸುತ್ತಿದ್ದರೆಂಬುದಕ್ಕೆ ಹಳ್ಳೂರಿನ ಉತ್ಖನನದಲ್ಲಿ ದೊರಕಿದೆ. ಬೃಹತ್ ಶಿಲಾಗೋರಿ ಉತ್ಖನನಗಳಿಂದ ಅವಶೇಷಗಳು ಬೆಳಕಿಗೆ ಬಂದಿವೆ. ಇವುಗಳನ್ನು ಆಧಾರವಾಗಿಟ್ಟು ಕೊಂಡು ವರ್ಗವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಮಡಕೆಗಳ ತಯಾರು ಮಾಡುವವರು, ಕಬ್ಬಿಣ ತಯಾರು ಮಾಡುವವರು, ಚಾಪೆ ಎಣೆಯುವವರು, ಮೊದಲಾದವರು ಆಯಾ ವೃತ್ತಿಗೆ ಸಂಬಂಧಿಸಿದಂತಹ ಜನರು ವಾಸವಾಗಿದ್ದರೆಂದು ಕಂಡುಬರುತ್ತದೆ. ಕಲೆಯು ಎಲ್ಲರಲ್ಲಿ ಅಡಗಿರುತ್ತದೆ. ಆದರೆ ಅಭಿವ್ಯಕ್ತಗೊಳ್ಳುವುದು ಕೆಲವರಲ್ಲಿ ಮಾತ್ರ ಆದ್ದರಿಂದ ಬಯಲು ಬಂಡೆ ರೇಖಾಕೃತಿಗಳನ್ನು ಗಮನಿಸಿದರೆ ಬೃಹತ್‌ಶಿಲಾಯುಗದ ಜನರು ಕಲೆಯುಳ್ಳುವ ರೆಂದು ನಿರ್ಧರಿಸಬಹುದು. ಮೊದಲು ಕಡ್ಡಿ ಚಿತ್ರಗಳು ರಚನೆಗೊಳ್ಳುತ್ತಿದ್ದವು. ನಂತರ ಕಾಲದಲ್ಲಿ ಅಲಂಕರಣೆಗಳು ಸೇರಿಕೊಂಡು ಆಧುನಿಕತೆಯನ್ನು ಪಡೆದವು.

ಯಾವುದೇ ಒಂದು ಸಂಸ್ಕೃತಿನ್ನು ಗುರುತಿಸುವಾಗ ಕಾಲಮಾನದ ಅಗತ್ಯತೆಯಿದೆ. ಆದ್ದರಿಂದ ಬೃಹತ್ ಶಿಲಾಯುಗ ಅಥವಾ ಕಬ್ಬಿಣಯುಗದ ಕಾಲಮಾನವನ್ನು ಕ್ರಿಪೂ. ೧೨೦೦ ರಿಂದ ಕ್ರಿಪೂ. ೩ನೇ ಶತಮಾವೆಂದು ಗುರುತಿಸಬಹುದು. ಕೆಲವು ಪ್ರದೇಶಗಳಲ್ಲಿ ಕ್ರಿ.ಶ. ೧–೨ನೇ ಶತಮಾನದವರೆಗೆ ಮುಂದುವರೆದಿದೆ.[೭]

ಟಿಪ್ಪಣಿಗಳು

೧. ತಂಬಂಡ ವಿಜಯಪೂಣಚ್ಚ (ಸಂ), **ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ಚರಿತ್ರೆ, ಸಂ–೪,** ೨೦೦೧, ಪು–೭೪.

೨. ಅದೇ, ಪು–೭೬–೭೭.

೩. **ಸಂಯುಕ್ತ ಕರ್ನಾಟಕ,** ೧೯–೦೩–೨೦೧೦, ಪು–೨.

೪. **ಶಿವತಾರಕ್ ಕೆ ಬಿ., ಕರ್ನಾಟಕ ಪುರಾತತ್ವ ನೆಲೆಗಳು,** ೨೦೦೧, ಪು–೧೨.

೫. ಅ. ಸುಂದರ (ಸಂ), **ಕರ್ನಾಟಕ ಚರಿತ್ರೆ ಸಂ–೧,** ೧೯೯೪, ಪು–೧೦೫.

೬. ಕನ್ನಡ ವಿಶ್ವವಿದ್ಯಾಲಯ ದೂರಶಿಕ್ಷಣ ಕೇಂದ್ರ ಪಠ್ಯ, **ಪುರಾತತ್ವ ಸಂಸ್ಕೃತಿ ಮತ್ತು ಪ್ರವಾಸೋದ್ಯಮ,** ಪು–೫.

೭. ತಂಬಂಡ ವಿಜಯಪೂಣಚ್ಚ, **ಪೂರ್ವೋಕ್ತ,** ೨೦೦೧, ಪು–೭೭.

೮. ಅದೇ, ಪು–೭೭.

೯. ರಾಮದಾಸರೆಡ್ಡಿ ಎಸ್.ಜಿ., **ಚಿತ್ರದುರ್ಗ ಜಿಲ್ಲೆಯ ಪ್ರಾಚೀನ ಚಾರಿತ್ರಿಕ ಅಧ್ಯಯನ (ಪ್ರಕಟಿತ),** ೨೦೦೯, ಪು–೧೫೧.

[illegible]

೧೦. ಅ. ಸುಂದರ, **ಆರ್ಕಿಯಾಲಾಜಿ ಇನ್ ಕರ್ನಾಟಕ,** ೧೯೯೦, ಪು-೪೮.

೧೧. ಅ. ಸುಂದರ, (ಸಂ), **ಪೂರ್ವೋಕ್ತ,** ೧೯೯೪, ಪು-೧೨೯.

೧೨. ಅದೇ, ಪು-೧೩೨.

೧೩. ತಂಬಂಡ ವಿಜಯಪೂಣಚ್ಚ, **ಪೂರ್ವೋಕ್ತ,** ೨೦೦೧, ಪು-೭೬.

೧೪. ಗೋಪಾಲ್ ಆರ್ (ಸಂ), **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ೨೦೦೫, ಪು-೨೭.

೧೫. **ಸಂಯುಕ್ತ ಕರ್ನಾಟಕ,** ೦೫-೦೪-೧೯೯೬, ಪು-೨.

೧೬. ಅ. ಸುಂದರ, (ಸಂ), **ಪೂರ್ವೋಕ್ತ,** ೧೯೯೪, ಪು-೧೮೬-೧೮೭.

೧೭. **ಸಂಯುಕ್ತ ಕರ್ನಾಟಕ,** ೧೯-೦೩-೨೦೧೦, ಪು-೨.

೧೮. ಅ. ಸುಂದರ, **ಪೂರ್ವೋಕ್ತ,** ೧೯೯೪, ಪು-೧೫೪.

೧೯. ರಾಮಲಿಂಗಪ್ಪ ಹೆಚ್., **ಆಧುನಿಕ ವಿಶ್ವ,** ೨೦೦೧, ಪು-೩೮.

೨೦. ಅ. ಸುಂದರ (ಸಂ), **ಪೂರ್ವೋಕ್ತ,** ಪು-೧೬೨.

೨೧. ಗೋಪಾಲ್ ಆರ್ (ಸಂ), **ಪೂರ್ವೋಕ್ತ,** ೨೦೦೫, ಪು-೩೩.

೨೨. ಅ. ಸುಂದರ, **ಕರ್ನಾಟಕ ಪ್ರಾಗೈತಿಹಾಸ ಅಥವಾ ಇತಿಹಾಸ ಪೂರ್ವಕಾಲ,** ೧೯೭೧, ಪು-೭೯-೮೧.

೨೩. **ಎಂ.ಎ.ಆರ್.,** ೧೯೪೭-೫೬, ಪು-೩೬.

೨೪. **ಇ.ದ.ಸಂ.-೨೨,** ೨೦೦೭, ಪು-೧೪.

೨೫. **ಅದೇ.** ಪು-೧೫.

೨೬. **ಅದೇ.-ಸಂ-೧೯,** ೨೦೦೪, ಪು-೨.

೨೭. **ಅದೇ.-ಸಂ-೨೨,** ೨೦೦೭, ಪು-೧೫.

೨೮. **ಅದೇ.-ಸಂ-೧೪,** ೧೯೯೯, ಪು-೧೩-೧೫.

೨೯. **ವಿಜಯ ಕರ್ನಾಟಕ,** ೧೪-೧೨-೨೦೦೫, ಪು-೧೨.

೩೦. **ಇ.ದ.ಸಂ.-೨೨,** ೨೦೦೭, ಪು-೧೫-೧೬.

೩೧. **ಸಂಯುಕ್ತ ಕರ್ನಾಟಕ,** ೧೨-೦೮-೨೦೦೯, ಪು-೩.

೩೨. ಗಿರಿಜಾ ಟಿ., **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ಪು-೧೧೨.

೩೩. ಇ.ದ.ಸಂ.–೧೯, ೨೦೦೪, ಪು–೨.

೩೪. ಅ. ಸುಂದರ ಮತ್ತು ತಿಪ್ಪೇಸ್ವಾಮಿ ಪಿ.ಆರ್. (ಸಂ), **ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ,** ೧೯೯೪, ಪು–೩೪.

೩೫. ಅ. ಸುಂದರ, **ಪ್ರಾಚ್ಯವಸ್ತು ಸಂಶೋಧನೆ,** ೧೯೭೨, ಪು–೨೪.

೩೬. ಅ. ಸುಂದರ, (ಸಂ), **ಪೂರ್ವೋಕ್ತ,** ೧೯೯೪, ಪು–೧೫೩.

೩೭. ಅ. ಸುಂದರ, **ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ,** ೧೯೭೩, ಪು–೫೦.

ಇದುವರೆಗೂ ಶೋಧನೆಗೊಂಡ ನೆಲೆಗಳು

ಕ್ರಸಂ.	ಸ್ಥಳ	ಸಂಸ್ಕೃತಿ	ಪ್ರಕಟಣೆ ವಿವರ
೧.	ಸಂಗೇನಹಳ್ಳಿಕೆರೆ	ನೂತನ ಶಿಲಾಯುಗದನೆಲೆ ಹಾಗೂ ಶಾತವಾಹನರನೆಲೆ	ದಿನಪತ್ರಿಕೆ: ಸಂಯುಕ್ತ ಕರ್ನಾಟಕ ೫-೪-೧೯೯೬, ಪುಟ-೨
೨.	ತುರುವನೂರು	ಬೃಹತ್‌ಶಿಲಾ ಗೋರಿನೆಲೆ	ಎಂ.ಎ.ಆರ್.ವರದಿ ೧೯೪೮-೫೬ ಪುಟ-೩೬
೩.	ಕೂನಬೇವು	ಬೃಹತ್‌ಶಿಲಾ ಗೋರಿನೆಲೆ. ಬಯಲುಗೊಂಡ ರೇಖಾಕೃತಿಗಳು ಶೋಧನೆಗೊಂಡಿವೆ.	ಇತಿಹಾಸದರ್ಶನ ಸಂಪುಟ-೨೨ ಪುಟ-೧೩
೪.	ಬಾಗೇನಾಳ್	ಬೃಹತ್‌ಶಿಲಾಯುಗದ ಬಯಲುಬಂಡ ರೇಖಾಕೃತಿ ಶೋಧನೆಗೊಂಡಿವೆ.	ಇತಿಹಾಸದರ್ಶನ ಸಂಪುಟ-೧೯ ಪುಟ-೨
೫.	ಬೆಳಗಟ್ಟ	ಬೃಹತ್‌ಶಿಲಾಯುಗದ ಗೋರಿನೆಲೆ. ಬೃಹತ್‌ಶಿಲಾ ಯುಗದ ರೇಖಾಕೃತಿಗಳು ಶೋಧನೆಗೊಂಡಿವೆ.	ಇತಿಹಾಸದರ್ಶನ ಸಂಪುಟ-೨೨ ಪುಟ-೧೫ ಇತಿಹಾಸ ದರ್ಶನಸಂಪುಟ-೧೯ ಪುಟ-೨
೬.	ಚಿನ್ನೂರಿ ತಿಪ್ಪಯ್ಯನಹಟ್ಟಿ	ಬೃಹತ್‌ಶಿಲಾಯುಗದ ಗೋರಿನೆಲೆ.	ಇತಿಹಾಸದರ್ಶನ ಸಂಪುಟ-೨೨ ಪುಟ-೧೫
೭.	ಬಗ್ಗುಲರಂಗವ್ವನಹಳ್ಳಿ	ಬೃಹತ್‌ಶಿಲಾಯುಗ ಬಯಲುಬಂಡ ರೇಖಾಕೃತಿಗಳು ಶೋಧನೆಗೊಂಡಿವೆ.	ಇತಿಹಾಸದರ್ಶನ ಸಂಪುಟ-೨೨ ಪುಟ-೧೫-೧೬
೮.	ಚಿಕ್ಕಜಗಲೂರು	ಬೃಹತ್‌ಶಿಲಾಯುಗ ಬಯಲು ಬಂಡೆ ರೇಖಾಕೃತಿಗಳು ಶೋಧನೆಗೊಂಡಿವೆ.	ಇತಿಹಾಸದರ್ಶನ ಸಂಪುಟ-೧೯ ಪುಟ-೨
೯.	ವೀರಮದಕರಿಪುರ (ಬೇಚಾರಗ್ರಾಮ)	ಬೃಹತ್‌ಶಿಲಾಯುಗ ಬಯಲು ಬಂಡೆ ರೇಖಾಕೃತಿಗಳು ಶೋಧನೆಗೊಂಡಿವೆ.	ಇತಿಹಾಸದರ್ಶನ ಸಂಪುಟ-೧೯ ಪುಟ-೨
೧೦.	ಚಿಕ್ಕಕಬ್ಬಿಗೆರೆ	ಬೃಹತ್‌ಶಿಲಾಯುಗದ ನೆಲೆ	ದಿನಪತ್ರಿಕೆ: ವಿಜಯಕರ್ನಾಟಕ ೧೪-೧೨-೨೦೦೫, ಪುಟ-೧೨
೧೧.	ಚಿಪ್ಪಿನಕೆರೆ	ಬೃಹತ್‌ಶಿಲಾಯುಗದ ವಾಸ್ತವ್ಯ ನೆಲೆ. ಶಾತವಾಹನರ ನೆಲೆ.	ಇತಿಹಾಸದರ್ಶನ ಸಂಪುಟ-೧೧ ಪುಟ-೩೨-೩೩

ಹೊಸದಾಗಿ ಶೋಧನೆಗೊಂಡ ನೆಲೆಗಳು

ಕ್ರ.ಸಂ.	ಸ್ಥಳ	ಸಂಸ್ಕೃತಿ	ಪ್ರಕಟಣೆ ವಿವರ
೧.	ಕೂನಬೇವು	ಆದಿ ಹಳೇಶಿಲಾಯುಗದ ಆಯುಧ ಮತ್ತು ನೂತನಶಿಲಾಯುಗದ ಆಯುಧಗಳು ಶೋಧನೆ	ದಿನಪತ್ರಿಕೆ: ಸಂಯುಕ್ತ ಕರ್ನಾಟಕ ೧೯-೦೩-೨೦೧೦, ಪುಟ-೩
೨.	ದೊಡಘಟ್ಟ	ಬೃಹತ್‌ಶಿಲಾಯುಗದ ಬಯಲು ಬಂಡೆ ರೇಖಾಕೃತಿ ಶೋಧನೆ	ದಿನಪತ್ರಿಕೆ: ದುರ್ಗದಕೂಗು ೧೨-೦೮-೨೦೦೯, ಪುಟ-೨
೩.	ಸುಲ್ತಾನಿಪುರ	ಬೃಹತ್‌ಶಿಲಾಯುಗದ ಗೋರಿನೆಲೆ	ದಿನಪತ್ರಿಕೆ: ಪ್ರಜಾವಾಣಿ ೨೫-೦೫-೨೦೧೦, ಪುಟ-೩
೪.	ಹವಳೇನಹಳ್ಳಿ	ಬೃತಹ್‌ಶಿಲಾಯುಗದ ಗೋರಿನೆಲೆ	ಅಪ್ರಕಟಿತ
೫.	ಕೂನಬೇವು ಗೊಲ್ಲರಹಟ್ಟಿ	ಬೃಹತ್‌ಶಿಲಾಯುಗದ ಗೋರಿನೆಲೆ	ಅಪ್ರಕಟಿತ
೬.	ಹುಲ್ಲೇಹಾಳ್ (ಗಡಿಭಾಗಕ್ಕೆ ಹೊಂದಿಕೊಂಡಿದೆ)	ಬೃಹತ್‌ಶಿಲಾಯುಗದ ಗೋರಿನೆಲೆ	ದಿನಪತ್ರಿಕೆ: ಬ್ರಹ್ಮಗಿರಿ ೧೪-೦೭-೨೦೧೦, ಪುಟ-೨
೭.	ಕೋತಿಗುಡ್ಡ	ಬೃಹತ್‌ಶಿಲಾಯುಗದ ಗೋರಿನೆಲೆ	ಅಪ್ರಕಟಿತ
೮.	ಗೋಸಿರಪ್ಪನಗುಡ್ಡ	ಬೃಹತ್‌ಶಿಲಾಯುಗದ ಗೋರಿನೆಲೆ	ದಿನಪತ್ರಿಕೆ: ಜನಸಾಗರ ೧೦-೦೮-೨೦೧೦, ಪುಟ-೨

• • •

ಅಧ್ಯಾಯ : ನಾಲ್ಕು

ಆದಿ ಇತಿಹಾಸ ಕಾಲ

೪.೧. ಮೌರ್ಯರು

೪.೨. ಶಾತವಾಹನರು

ಅಧ್ಯಾಯ : ನಾಲ್ಕು

ಆದಿ ಇತಿಹಾಸ ಕಾಲ

ಮಾನವನ ಇತಿಹಾಸವನ್ನು ಅಧ್ಯಯನ ಮಾಡುವ ಉದ್ದೇಶದಿಂದ ಪ್ರಾಗಿತಿಹಾಸ ಮತ್ತು ಇತಿಹಾಸ ಕಾಲವೆಂದು ವಿಭಾಗಿಸಲಾಗಿದೆ. ಅಲಿಖಿತ ಪುರಾವೆಗಳು ಸಿಗುವ ಕಾಲವನ್ನು ಪ್ರಾಗಿತಿಹಾಸವೆಂದು, ಲಿಖಿತ ಪುರಾವೆ ಸಿಗುವ ಕಾಲವನ್ನು ಇತಿಹಾಸ ಕಾಲವೆಂದು ಗುರುತಿಸ ಲಾಗಿದೆ. ಇತಿಹಾಸ ಅಥವಾ ಚಾರಿತ್ರಿಕ ಯುಗದಲ್ಲಿ ಮೌರ್ಯರು ಮತ್ತು ಶಾತವಾಹನರು ಪ್ರಮುಖರು. ಇವರಲ್ಲಿ ಮೌರ್ಯರು ಶಾಸನಗಳನ್ನು ಹಾಕಿಸುವುದರ ಮೂಲಕ ಲಿಖಿತ ದಾಖಲೆಗಳ ಇತಿಹಾಸಕ್ಕೆ ಅಡಿಪಾಯ ಹಾಕಿದರು. ಆದರೆ, ನಮ್ಮ ಭಾರತೀಯ ಸಂಸ್ಕೃತಿಯನ್ನು ಪ್ರಾಚೀನತೆಗೆ ತೆಗೆದುಕೊಂಡು ಹೋದ ಸಿಂಧೂಬಯಲಿನ ನಾಗರೀಕತೆಯಲ್ಲಿ ದೊರಕಿದ ಮುದ್ರೆಗಳಲ್ಲಿರುವ ಬರಹಗಳು ಸ್ಪಷ್ಟಗೊಂಡರೆ ಮೌರ್ಯರಿಂದ ಗುರುತಿಸಿಕೊಂಡ ಇತಿಹಾಸ ಕಾಲ ಮತ್ತಷ್ಟು ಪ್ರಾಚೀನ ಕಾಲಕ್ಕೆ ಕರೆದುಕೊಂಡು ಹೋಗುತ್ತದೆ. ಶಾತವಾಹನರು ಮೌರ್ಯರ ಸಾಮಂತರಾಗಿ ನಂತರ ಕಾಲಾವಧಿಯಲ್ಲಿ ಸ್ವತಂತ್ರಗೊಂಡು ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ್ದಾರೆ. ಈ ಎರಡು ರಾಜ ಮನೆತನಗಳ ಕಾಲವನ್ನು ಆದಿ ಇತಿಹಾಸ ಕಾಲವೆಂದು ಕರೆಯಲಾಗಿದ್ದು, ಕ್ರಿ.ಪೂ. ೪ನೇ ಶತಮಾನದಿಂದ ಕ್ರಿ.ಶ. ೩ನೇ ಶತಮಾನದವರೆಗೆ ಈ ಕಾಲವನ್ನು ಗುರುತಿಸ ಬಹುದು.

೪.೧. ಮೌರ್ಯರು

ಕರ್ನಾಟಕದಲ್ಲಿ ಮೌರ್ಯರು ಆಳ್ವಿಕೆ ಮಾಡಿದವರಲ್ಲಿ ಮೊದಲಿಗರು. ಮೌರ್ಯರ ಕುರಿತು ಸಾಕಷ್ಟು ಗೊಂದಲಗಳಿವೆ. ಜೈನ ದಾಖಲೆಗಳ ಪ್ರಕಾರ ಮೌರ್ಯರ ಮೂಲ ಪುರುಷನಾದ ಚಂದ್ರಗುಪ್ತನು ನವಿಲುಗಳನ್ನು ಪೋಷಿಸುತ್ತಿದ್ದ ಮುಖಂಡನೊಬ್ಬನ ಮಗಳಿಗೆ ಜನಿಸಿದವನು. ಹಾಗಾಗಿ ಮೌರ್ಯ ಹೆಸರು ಹೀಗೆ ಬಂದಿರಬೇಕೆಂದೂ, ಹಿಂದೂ ಪರಂಪರೆಯ ಸಿದ್ಧಾಂತದಲ್ಲಿ ಶೂದ್ರ ಕುಟುಂಬಕ್ಕೆ ಸೇರಿದವರೆಂದು ಉಕ್ತವಾಗಿದೆ. ಅಲ್ಲದೇ ಮುದ್ರಾರಾಕ್ಷಸ ನಾಟಕದಲ್ಲಿ ಮೌರ್ಯರು ಶೂದ್ರ ಕುಲದವರೆಂದು ಹೇಳಿಕೊಂಡಿದ್ದಾರೆ. ಇವುಗಳಿಗೆ ಬೆಂಬಲಿತ ವಾಗಿ ಗ್ರೀಕ್ ಸಿದ್ಧಾಂತವು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಆದರೆ, ಈ ಮೇಲಿನ ಸಿದ್ಧಾಂತಗಳಿಗೆ ವ್ಯತಿರಿಕ್ತವಾಗಿ ಬೌದ್ಧ ಗ್ರಂಥಗಳು ಚಂದ್ರಗುಪ್ತನು ಮೊರಿಯ ಎಂಬ ಕ್ಷತ್ರಿಯ

ಕುಲದಲ್ಲಿ ಜನಿಸಿದವನು. ಅಲ್ಲದೇ ಮೂಲತಃ ಮೊರಿಯರ ಕ್ಷತ್ರಿಯ ಪಂಗಡವು ಪಿಪ್ಪಿಲಾ ವನದಲ್ಲಿತ್ತೆಂದು ತಿಳಿಸುವುದು.[೧] ಈ ಎಲ್ಲಾ ಮಾಹಿತಿಗಳನ್ನು ಗಮನಿಸಿದಾಗ ಮೌರ್ಯರು ಶೂದ್ರವರ್ಗದವರೇ?, ಕ್ಷತ್ರಿಯ ಕುಲದವರೆ? ಎಂಬುದು ಸ್ಪಷ್ಟವಾಗಿ ಹೇಳುವುದಕ್ಕೆ ಕಷ್ಟಸಾಧ್ಯ. ಭಬ್ರು ಶಾಸನದಲ್ಲಿ ಅಶೋಕನ ಮಗಧ ರಾಜನೆಂದು ಹಾಕಿಸಿರುವುದರಿಂದ ಮೌರ್ಯರು ಮಗಧ ಸಾಮ್ರಾಜ್ಯದವರೆಂದು ನಿರ್ಧರಿಸಬಹುದು.[೨]

ಕ್ರಿ.ಪೂ. ನಾಲ್ಕನೇ ಶತಮಾನದಲ್ಲಿ ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಮೆಗಸ್ಥನೀಸನು ರಾಯಭಾರಿಯಾಗಿ ಬಂದಿದ್ದನು. ತನ್ನ 'ಇಂಡಿಕಾ' ಗ್ರಂಥದಲ್ಲಿ ಮೌರ್ಯರ ರಾಜಧಾನಿಯ ಸ್ಥಳವರ್ಣನೆ, ಕೋಟೆಕೊತ್ತಲಗಳು, ಅರಮನೆಗಳ ವಿವರಣೆಗಳನ್ನು ನೀಡಿದ್ದಾನೆ.[೩] ನಂತರ ಬಂದ ಬಿಂದುಸಾರ ಹಾಗೂ ಸಾಮ್ರಾಟ ಅಶೋಕ ಸಾಮ್ರಾಜ್ಯ ಅಧಿಪತಿಗಳಾದರು. ಇವರ ಕಾಲಾವಧಿಯಲ್ಲಿ ಪಾಟಲೀಪುತ್ರದಿಂದ ಕರ್ನಾಟಕದವರೆಗೆ ರಾಜ್ಯವ್ಯಾಪಿಸುತ್ತೆಂಬುದಕ್ಕೆ ಶಾಸನಗಳು ಆಧಾರಗಳಾಗಿವೆ. ಅಶೋಕ ಸಾಮ್ರಾಟನ ತರುವಾಯ ಬಂದವರು ಅಸಮರ್ಥರಾಗಿದ್ದರು. 'ರಾಜತರಂಗಿಣಿ' ಪ್ರಕಾರ ಅಶೋಕ ಚಕ್ರವರ್ತಿಯ ಮೊಮ್ಮಗನಾದ ಬೃಹದ್ರತನನ್ನು ಪುಷ್ಯಮಿತ್ರಶುಂಗ ಕ್ರಿ.ಪೂ. ೧೮೮ರಲ್ಲಿ ಸೊಲಿಸಿದನು.[೪] ತತ್ಪರಿಣಾಮವಾಗಿ ಶುಂಗ ಮನೆತನಕ್ಕೆ ಮಗಧ ಸಾಮ್ರಾಜ್ಯ ವಶವಾಯಿತು. ಈ ಮೇಲ್ಕಂಡ ಆಧಾರದಲ್ಲಿ ಮೌರ್ಯರ ಸಾಮ್ರಾಜ್ಯ ಕ್ರಿ.ಪೂ. ೪ನೇ ಶತಮಾನದಿಂದ ಕ್ರಿ.ಪೂ. ೧೮೮ರವರೆಗೆ ಆಳ್ವಿಕೆ ನಡೆಸಿದರೆಂದು ಸ್ಪಷ್ಟಪಡಿಸ ಬಹುದು.

ಪ್ರಸ್ತುತ ಪ್ರದೇಶವು ಚಿತ್ರದುರ್ಗ ಜಿಲ್ಲೆ ವ್ಯಾಪ್ತಿಗೆ ಒಳಪಟ್ಟಿದೆ. ವೀಲ್ಹರ್‌ರವರು ೧೯೪೭ರಲ್ಲಿ ಬ್ರಹ್ಮಗಿರಿಯಲ್ಲಿ ಉತ್ಖನನ ಮಾಡಿ ಮೌರ್ಯರಿಗೆ ಸಂಬಂಧಿಸಿದ ಅವಶೇಷಗಳನ್ನು ಶೋಧಿಸಿ ದ್ದಲ್ಲದೆ, ಅಶೋಕನ ಕಾಲಕ್ಕೆ ಸಂಬಂಧಿಸಿದ್ದರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.[೫] ಇದಕ್ಕೆ ಪೂರಕವಾಗಿ ಜಿಲ್ಲೆಯಲ್ಲಿ ಬೃಹತ್ ಶಿಲಾಗೋರಿ ನೆಲೆಗಳಿಗೆ ಮೌರ್ಯರ ಮನೆಗಳೆಂದು ಕರೆಯುತ್ತಿರುವುದನ್ನು ಗಮನಿಸಿದರೆ ಮೌರ್ಯರ ಪ್ರಭಾವವಿತ್ತೆಂದು ತಿಳಿದುಬರುತ್ತದೆ. ಹಾಗೆಂದು ಬೃಹತ್‌ಶಿಲಾಗೋರಿಗಳು ಮೌರ್ಯರ ಕಾಲದವುಗಳಲ್ಲ, ಅವು ಬೃಹತ್‌ಶಿಲಾಯುಗದ ಕಾಲದವು. ಮೌರ್ಯರು ಬೃಹತ್‌ಶಿಲಾ ಸಮಾಧಿಗಳನ್ನು ನಿರ್ಮಿಸುವುದನ್ನು ಮುಂದುವರೆಸಿಕೊಂಡು ಬಂದಿರಬೇಕು. ಹಾಗಾಗಿ ಬೃಹತ್‌ಶಿಲಾಗೋರಿಗಳನ್ನು ಅಶೋಕನ ಕಾಲಕ್ಕೆ ಸೇರಿಸಿದ್ದಿರಬಹುದು. ಆದ್ದರಿಂದ ಬ್ರಹ್ಮಗಿರಿ ನೆಲೆಯನ್ನು ಮರುಪರಿಶೀಲಿಸುವ ಅಗತ್ಯತೆಯಿದೆ.

ನೆಲೆಗಳು

ಬ್ರಹ್ಮಗಿರಿ:– ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ಬ್ರಹ್ಮಗಿರಿಯು ಮೈದಾನದಿಂದ ೬೦೦ ಅಡಿ ಎತ್ತರದಲ್ಲಿದೆ.[೬] ಇದರ ಪಶ್ಚಿಮಕ್ಕೆ ಸಿದ್ಧಾಪುರ ಗ್ರಾಮದ ಮತ್ತು ಗುಡ್ಡ, ಉತ್ತರಕ್ಕೆ ೨ ಕಿ.ಮೀ. ದೂರದಲ್ಲಿ ಜಟಿಂಗರಾಮೇಶ್ವರ ಬೆಟ್ಟಗಳಿವೆ. ಈ ಬೆಟ್ಟಗಳ ನಡುವೆ ಚಿನ್ನಹಗರಿ ನದಿ ಹರಿಯುತ್ತಿದೆ.[೭] ಬ್ರಹ್ಮಗಿರಿಯ ಬೆಟ್ಟದಲ್ಲಿ ದೊಡ್ಡ ಬಂಡೆಯ

ಮೇಲೆ ಶಾಸನವಿದ್ದು, ಇದನ್ನು ಬಿ.ಎಲ್.ರೈಸ್ ೧೮೯೨ರಲ್ಲಿ ಪತ್ತೆಮಾಡಿ ಪ್ರಕಟಿಸಿದ್ದಾರೆ.[೮] ಈ ಶಾಸನವಲ್ಲದೆ ಜಟಿಂಗರಾಮೇಶ್ವರ ಮತ್ತು ಸಿದ್ಧಾಪುರ ಶಾಸನಗಳು ಈ ಶೋಧನೆಗೆ ಒಳಗೊಂಡಿವೆ. ಈ ಎಲ್ಲಾ ಶಾಸನಗಳು ಒಂದೇ ಪಾಠವನ್ನು ಹೊಂದಿದ್ದು, ಬ್ರಾಹ್ಮಿಲಿಪಿ, ಪ್ರಾಕೃತಭಾಷೆಯಲ್ಲಿ ರಚಿತಗೊಂಡಿವೆ. ಈ ಶಾಸನಗಳ ಫಲಕಗಳಲ್ಲಿ ಎರಡೆರಡೂ ಶಾಸನಗಳು ಸೇರಿಕೊಂಡಿವೆ. ಮೊದಲನೇಯ ಭಾಗ ರೂಪನಾಥ, ಮತ್ತು ಎರಡನೆಯ ಭಾಗ ಎರ್ರಗುಡಿ, ಶಾಸನಗಳಿರುವುದರಿಂದ ಎರಡೆರಡು ಶಾಸನಗಳು ಸೇರಿ ಒಟ್ಟು ಆರು ಶಾಸನಗಳಾಗಿವೆ.[೯] ಅಕ್ಷರಗೊಂಡು ಎಂದು ಪ್ರಸಿದ್ಧಿಯಾಗಿರುವ ಬ್ರಹ್ಮಗಿರಿ ಶಾಸನ ೧೩ ಸಾಲುಗಳಿಂದ, ಬಳೆಗಾರ ಗೊಂಡು ಶಾಸನ ೨೮ ಸಾಲುಗಳಿಂದ ಕೂಡಿದ್ದು, ಎಮ್ಮೆತಿಮ್ಮನಗೊಂಡು ೨೨ ಸಾಲುಗಳಲ್ಲಿ ರಚಿತಗೊಂಡಿವೆ. ಇವುಗಳಲ್ಲಿ ಬ್ರಹ್ಮಗಿರಿ ಶಾಸನದ ಕೊನೆಯ ಸಾಲಿನಲ್ಲಿ ಖರೋಷ್ಠಿ ಲಿಪಿಯಲ್ಲಿ ಚಪಡಕ ಎಂದು ಕರೆದಿರುವುದನ್ನು ಗಮನಿಸಬಹುದು.[೧೦]

ಶಾಸನಗಳ ಸಾರಾಂಶ

ಸುವರ್ಣಗಿರಿಯ ಆಯಾಪುತ ಮತ್ತು ಮಹಾಮಾತರ ಇಸಿಲ ಮಹಾಮಾತರ ಕುಶಲವನ್ನು ವಿಚಾರಿಸುತ್ತಾರೆಂದು ಆರಂಭವಾಗುತ್ತದೆ. ದೇವನಾಂಪ್ರೀಯ ಪ್ರಿಯದರ್ಶಿ ಎರಡುವರೆ ವರ್ಷಗಳಿಂದೀಚೆಗೆ ಧರ್ಮಾಚರಣೆಯಲ್ಲಿದ್ದರೂ ಒಂದು ವರ್ಷದಿಂದೀಚೆಗೆ ಸಂಘವನ್ನು ಸೇರಿ ಜಂಬುದ್ವೀಪದಲ್ಲಿರುವ ಅವನ ಪ್ರಜೆಗಳು ಮೊದಲ ಅಂಧಶ್ರದ್ಧೆಯಿಂದ ಕೆಳಮಟ್ಟದಲ್ಲಿರುವ ಅವನ ಧರ್ಮಪ್ರಚಾರದ ಪ್ರಯತ್ನದ ಫಲದಿಂದ ಅವರು ಗುಣವಂತರಾಗಿ ಉತ್ತಮರಾಗಿದ್ದಾರೆ. ಈ ರೀತಿಯಲ್ಲಿ ಪ್ರಯತ್ನಪಟ್ಟರೆ ಕೇವಲ ಶ್ರೀಮಂತ, ಬಲ್ಲಿದವರು ಮಾತ್ರವಲ್ಲದೆ ತೀರಾ ಕೀಳುಮಟ್ಟದ ಜನರೂ ಕೂಡ ಉತ್ತಮರಾಗಿ ಸ್ವರ್ಗಸುಖವನ್ನು ಪಡೆಯಬಹುದು. ಅವನ ಗಡಿಯಲ್ಲಿನ ಜನರು ಇದನ್ನು ತಿಳಿಯಬೇಕೆಂದು ಮತ್ತು ಈ ಪ್ರಯತ್ನ ನಡೆಯುವಂತಾಗಬೇಕು ಎಂಬ ಹಂಬಲದಿಂದ ಈ ಘೋಷಣೆಯನ್ನು ೨೫೬ ರಾತ್ರಿಗಳನ್ನು ಸಂಚಾರದಲ್ಲಿ ಕಳೆದಾಗ ಹೊರಡಿಸಲಾಗಿದೆ. ತಾಯಿ, ತಂದೆ ಮತ್ತು ಹಿರಿಯರಿಗೆ ವಿಧೇಯಕನಾಗಿರಬೇಕು. ಪ್ರಾಣಿದಯ ತೋರಿಸಬೇಕು. ಸತ್ಯವನ್ನು ಹೇಳಬೇಕು. ಶಿಷ್ಯರು ಗುರುಗಳಿಗೆ ಗೌರವವನ್ನು ತೋರಿಸಬೇಕು. ಬಂಧು-ಬಳಗದವರೊಡನೆ ಸೌಜನ್ಯದಿಂದ ವರ್ತಿಸಬೇಕೆಂದು ಶಾಸನ ಹಾಕಿಸಿದ್ದಾನೆ.[೧೧]

ಶಾಸನದಲ್ಲಿ 'ಇಸಿಲ' ಎಂಬ ಉಲ್ಲೇಖವಿದೆ. ೧೯೪೦ರಲ್ಲಿ ಎಂ.ಹೆಚ್. ಕೃಷ್ಣವರವರು ಶಾಸನದ ಉತ್ತರ ಬದಿಯಿಂದ ಸ್ವಲ್ಪ ಹೆಚ್ಚು ಕಡಿಮೆ ಅರ್ಧಚಂದ್ರಕಾರದಲ್ಲಿ ವಿಸ್ತಾರವಾಗಿದ್ದು, ಇಸಿಲ ಪಟ್ಟಣವಿದ್ದ ನೆಲೆಯನ್ನು ಬ್ರಹ್ಮಗಿರಿಯಲ್ಲಿ ಗುರುತಿಸಿದರು. ಈ ನೆಲೆಯಲ್ಲಿ ಸುಟ್ಟ ಇಟ್ಟಿಗೆ, ಕಟ್ಟಡ, ಮೃತ್‌ಪಾತ್ರೆಗಳು, ಮಣ್ಣಿನಿಂದ, ಲೋಹದಿಂದ ತಯಾರುಗೊಂಡ ಆಭರಣಗಳು, ಗೊಂಬೆಗಳು, ಅನೇಕ ಬೃಹತ್‌ಶಿಲಾ ಗೋರಿಗಳನ್ನು ಉತ್ಖನನದಿಂದ ಬೆಳಕಿಗೆ ತಂದರು. ಈ ಆಧಾರದ ಮೇಲೆ ಉತ್ಖನನದಲ್ಲಿ ಮೇಲಿನಿಂದ ಎರಡನೇ ಸ್ಥರವನ್ನು ಮೌರ್ಯರ ಕಾಲದ ಸಂಸ್ಕೃತಿಯೆಂದು ಗುರುತಿಸಲಾಗಿದೆ.[೧೨] ಇಸಿಲ ಎಂಬುವರು ರಿಷ್ಯಡಕದ ಪ್ರಾಕೃತ ರೂಪವುದು. ಋಷ್ಯಮೂಕ ಪರ್ವತದ ಬಳಿ, ಅಂದರೆ ಹಂಪಿಯ ಬಳಿ ಇದ್ದಿರಬೇಕೆಂದು,

ಇನ್ನೊಂದು ವಾದವನ್ನು ಇತಿಹಾಸಕಾರರು ಹೇಳಿದ್ದಾರೆ. ಆದರೆ ಶೇಷಾದ್ರಿ ಎಂ. ಮತ್ತಿತರ ಇತಿಹಾಸಕಾರರು ಬ್ರಹ್ಮಗಿರಿಯೇ ಇಸಿಲ ಪಟ್ಟಣವಾಗಿತ್ತೆಂಬ ಅಭಿಪ್ರಾಯಕ್ಕೆ ಬೆಂಬಲಿಸಿದ್ದಾರೆ.[೧೩]

ಸುವರ್ಣಗಿರಿಯನ್ನು ಗುರುತಿಸುವ ಬಗ್ಗೆ ಭಿನ್ನಾಭಿಪ್ರಾಯಗಳಿಗೆ. ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಜೊನ್ನಗಿರಿ ಎಂದು ಕೆಲವರು, ಕರ್ನಾಟಕದ ರಾಯಚೂರು ಜಿಲ್ಲೆಯ ಕನಕಗಿರಿ ಎಂದು ಇನ್ನು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಗುಲ್ಬಗಾ ಜಿಲ್ಲೆಯ ಸನ್ನತಿಯಲ್ಲಿ ಅಶೋಕನ ಪ್ರತ್ಯೇಕ ಶಾಸನಗಳು ಸೇರಿದಂತೆ ಪ್ರಧಾನ ಶಾಸನಗಳು ದೊರೆತಿವೆ. ಆದ್ದರಿಂದ ಸನ್ನತಿ ಸುವರ್ಣಗಿರಿಯಾಗಿರಬೇಕೆಂದು ಇತ್ತೀಚಿನ ಅಭಿಪ್ರಾಯವಾಗಿದೆ.[೧೪] ಬ್ರಹ್ಮಗಿರಿ ಶಾಸನದಲ್ಲಿ ಉಲ್ಲೇಖವಾಗಿರುವ ಸುವರ್ಣಗಿರಿ ಯಾವುದು ಎಂಬುದರ ಬಗ್ಗೆ ಸ್ಪಷ್ಟತೆ ಇರುವುದಿಲ್ಲವೆಂದು ಹೇಳಬಹುದು.

೪.೨. ಶಾತವಾಹನರು

ಶಾತವಾಹನರು ಕರ್ನಾಟಕದ ಪ್ರಮುಖ ರಾಜಮನೆತಗಳಲ್ಲಿ ಪ್ರಮುಖರು. 'ಶಾತವಾಹನ' ಎಂಬುದು ಸಂಸ್ಕೃತವಾದ ಸಪ್ತವಾಹನ ಅಪಭ್ರಂಶ (ಸೂರ್ಯ). ಜೈನ ಸಾಹಿತ್ಯದಲ್ಲಿ ಪೈಠಾಣದ ಬಗ್ಗೆ ಉಲ್ಲೇಖವಿರುವುದರಿಂದ ಇವರ ಮೂಲ ನೆಲೆ ಪಶ್ಚಿಮ ದಖನ್ ಪ್ರದೇಶ ವಾಗಿರಬೇಕು. ಆಂಧ್ರವಲ್ಲವೆಂಬುದಾಗಿ ಹೇಳಬಹುದು.[೧೫] ಶಾತವಾಹನರು ತಮ್ಮನ್ನು ಕುಂತಳ ಸ್ವಾಮಿಗಳೆಂದು ಕರೆದುಕೊಂಡಿದ್ದು, ಆಂಧ್ರಭೃತ್ಯರು, ಶಾತಕರ್ಣಿಗಳೆಂಬ ಹೆಸರಿನಿಂದ ಕರೆಯುವುದು ರೂಡಿಯಲ್ಲಿದೆ.[೧೬] ಸಿಮುಖ ರಾಜಸ್ಥಾಪಕನಾದರೆ ಎರಡನೇ ಶಾತಕರ್ಣಿ, ಗೌತಮಿಪುತ್ರ ಶಾತಕರ್ಣಿ, ವಶಿಷ್ಠಪುತ್ರ ಪುಳಮಾಯಿ, ಯಜ್ಞಶ್ರೀ ಶಾತಕರ್ಣಿ ರಾಜ ಪ್ರಮುಖರು. ಗೌತಮಿ, ಬಾಲಶ್ರೀ ಎಂಬುದಾಗಿ ತಾಯಿ ಹೆಸರನ್ನು ಸೇರಿಸಿಕೊಂಡು ರಾಜರು ಹೆಸರುಗಳನ್ನು ಕರೆದು ಕೊಂಡಿದ್ದಾರೆ. ಶಾತವಾಹನರ ಮಾಂಡಲಿಕರಾಗಿ ಮಹಾರಥಿಗಳು, ಚುಟುಗಳು ಆಳ್ವಿಕೆ ಮಾಡಿದ್ದಾರೆ. ಮತ್ಸ್ಯಪುರಾಣದ ಪ್ರಕಾರ ಶಾತವಾಹನರು ೪೬೬ ವರ್ಷಗಳ ಕಾಲ ಆಳ್ವಿಕೆ ಮಾಡಿದ್ದಾರೆ. ಈ ಮಾಹಿತಿ ಆಧರಿಸಿ ವಿ.ಎ.ಸ್ಮಿತ್ ಮತ್ತು ಗೋಪಾಲಚಾರ್ಯರು ಕ್ರಿ.ಪೂ. ೨೩೫ ರಿಂದ ಕ್ರಿ.ಶ. ೨೨೫ ಇವರ ಕಾಲ ಎಂದು ಅಭಿಪ್ರಾಯಪಟ್ಟಿದ್ದಾರೆ.[೧೭] ಶಾತವಾಹನರ ಆಡಳಿತ ಅವಧಿಯಲ್ಲಿ ಬನವಾಸಿ, ಸನ್ನತಿ, ಆಡಳಿತ ಕೇಂದ್ರವಾಗಿದ್ದವು. ವಡಗಾಂವ್, ಮಾಧವಾಪುರ ಮತ್ತು ಚಂದ್ರವಳ್ಳಿ ನೆಲೆಗಳು ಉಪ ಕೇಂದ್ರಗಳಾಗಿದ್ದವೆಂದು ತಿಳಿದುಬಂದಿದೆ.[೧೮]

ಪ್ರಸ್ತುತ ಪ್ರದೇಶವು ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವುದು. ಇದುವರೆಗೆ ತಿಳಿದುಬಂದಿರುವಂತೆ ಶಾಸನ ಆಧಾರಗಳು ಸಿಗದಿದ್ದರೂ ಮೊಳಕಾಲ್ಮೂರಿನ ಬ್ರಹ್ಮಗಿರಿಯಲ್ಲಿ ಬೌದ್ಧ ಚೈತ್ಯಾಲಯದಂತಿರುವ ಇಟ್ಟಿಗೆ ಕಟ್ಟಡದ ಅವಶೇಷಗಳು ದೊರೆತಿವೆ.[೧೯] ಹೊಸದುರ್ಗ ತಾಲ್ಲೂಕಿನ ತಣಿಗೆಕಲ್ಲಿನ ಬಳಿ ಶಾತವಾಹನ ಕಾಲದ ನಯವಾದ ಹೊಳೆಯುವ ಚಿತ್ತಾರಗಳನ್ನು ಬರೆದ ಮಡಕೆಗಳು ದೊರತಿವೆ.[೨೦] ಪ್ರಸ್ತುತ ಚಿಪ್ಪಿನಕೆರೆ, ಸಂಗೇನಹಳ್ಳಿಕೆರೆ, ತುರುವನೂರು ಶಾತವಾಹನರ ಕಾಲದ ನೆಲೆಗಳನ್ನು ಕಾಣಬಹುದು. ಚಿತ್ರದುರ್ಗ ತಾಲ್ಲೂಕಿನ ಚಂದ್ರವಳ್ಳಿ

[illegible]

[illegible]

ನೆಲೆಯಲ್ಲಿ ಉತ್ಖನನವಾಗಿದ್ದು, ಇಲ್ಲಿ ಸಿಕ್ಕಂತಹ ಆಧಾರದ ಮೇಲೆ ಪ್ರಸ್ತುತ ನೆಲೆಗಳನ್ನು ಅಧ್ಯಯನ ಮಾಡಲಾಗಿದೆ.

ಚಂದ್ರವಳ್ಳಿ

ಪ್ರಸ್ತುತ ಪ್ರದೇಶದಿಂದ ದಕ್ಷಿಣಕ್ಕೆ ೨೫ ಕಿ.ಮೀ. ದೂರದಲ್ಲಿದೆ. ಈ ಪ್ರದೇಶವು ತ್ರಿಕೋನಾಕಾರವಾಗಿದ್ದು, ಚಿನ್ಮೂಲಾದ್ರಿ, ಚೋಳಗುಡ್ಡ, ಮತ್ತು ದವಳಪ್ಪನ ಗುಡ್ಡಗಳಿಂದ ಸುತ್ತುವರೆಯಲ್ಪಟ್ಟಿದೆ.[೨೧] ಐತಿಹ್ಯದ ಪ್ರಕಾರ ಕಣಿವೆ ಅರ್ಧಚಂದ್ರನ ಆಕಾರದಲ್ಲಿರುವುದರಿಂದ ಚಂದನಾವತಿ (ಚಂದ್ರವಳಿ?) ಎಂತಲೂ ಕರೆದು, ಕ್ರಮೇಣ ಚಂದ್ರವಳ್ಳಿ ಎಂದು ಕರೆಯಲಾಗಿದೆ.[೨೨]

ಚಂದ್ರವಳ್ಳಿಯಲ್ಲಿ ಕಾಲುವೆ ತೋಡುವಾಗ ಸಿಕ್ಕನಾಣ್ಯವನ್ನು ಲಂಡನ್ ಮ್ಯೂಸಿಯಂನ ತಜ್ಞ ಇ.ಜೆ. ರ್‍ಯಾಪ್ಸನ್ ಅವುಗಳನ್ನು ಆಂಧ್ರಬೃತ್ಯರ ನಾಣ್ಯಗಳೆಂದು ಘೋಷಿಸಿದರು.[೨೩] ೧೯೦೯ರಲ್ಲಿ ಆರ್. ನರಸಿಂಹಚಾರ್ ಚಂದ್ರವಳ್ಳಿಯಲ್ಲಿ ೮ ಗುಂಡಿಗಳನ್ನು ತೋಡಿ ಶಾತವಾಹನರ ಅವಶೇಷಗಳನ್ನು ಹೊರತೆಗೆದರು. ೧೯೨೮ರಲ್ಲಿ ಎಂ.ಹೆಚ್. ಕೃಷ್ಣ ಅದೇ ನೆಲೆಯಲ್ಲಿ ಉತ್ಖನನ ಮಾಡಿದಾಗ ಸುಮಾರು ೩೬ ಗುಂಡಿಗಳಲ್ಲಿ ಇಟ್ಟಿಗೆಗಳು, ಆಭರಣಗಳು, ಕಟ್ಟಡದ ಅವಶೇಷಗಳು, ನಾಣ್ಯಗಳು, ಮಣಿಗಳು, ಬಿಳಿಬಣ್ಣದ ರೇಖಾಚಿತ್ರವುಳ್ಳ ಮಣ್ಣಿನಪಾತ್ರೆಗಳು ಶೋಧಿತಗೊಂಡಿವೆ. ೩೬ ಗುಂಡಿಗಳಲ್ಲಿ ೧೫ನೇ ಗುಂಡಿ ಮುಖ್ಯವಾಗಿದ್ದು, ಇದರಲ್ಲಿ ಯಜ್ಞಶ್ರೀ ಶಾತಕರ್ಣಿ, ಮುಡಾನಂದನಾಣ್ಯ ಮತ್ತು ಗೌತಮಿಪುತ್ರ ವಿಳವಾಯಕರ, ಮಹಾರಥಿ ಸದಕಣ ಕಳಲಾಯ ನಾಣ್ಯಗಳು ಹಾಗೂ ರೋಮನ್ ನಾಣ್ಯಗಳು ಕಂಡುಬಂದಿವೆ.[೨೪] ಇಟ್ಟಿಗೆ ಕಟ್ಟಡದ ಅವಶೇಷ ೩೬ನೇ ಗುಂಡಿಯಲ್ಲಿ ಶೋಧನೆಗೊಂಡಿದೆ. ಇದು ವಿಸ್ತಾರವಾಗಿದ್ದು, ನಾಲ್ಕಕ್ಕಿಂತ ಹೆಚ್ಚು ಕೊಠಡಿಗಳನ್ನು ಹೊಂದಿದ್ದು, ಸುಮಾರು ೩ ಮೀ. x ೨.೪೦ ಮೀ. ಉದ್ದ ಅಗಲವಾಗಿದೆ. ಗೊಡೆಗಳಿಗೆ ಸುಣ್ಣವನ್ನು ದಪ್ಪವಾಗಿ ಲೇಪನಮಾಡಿ ನಿರ್ಮಿಸಿದ್ದಾರೆ.[೨೫] ೧೯೪೭ರಲ್ಲಿ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯನ್ನು ಪುನರ್‌ಆಯ್ಕೆ ಮಾಡಿಕೊಂಡರು. ಚಂದ್ರವಳ್ಳಿ ಶಾತವಾಹನರ ನಾಣ್ಯಗಳು, ರೋಮನ್ ಚಕ್ರವರ್ತಿಗಳಾದ ಅಗಸ್ಟಸ್ (ಕ್ರಿ.ಪೂ. ೨೭-೧೪ ಕ್ರಿ.ಶ.) ಟೈಬರಿಸ್ (ಕ್ರಿ.ಶ. ೧೪-೩೭) ನಾಣ್ಯಗಳು ಮತ್ತು ರೌಲೆಟೆಡ್ ಮಣ್ಣಿನಪಾತ್ರೆಗಳು ದೊರಕಿದ್ದಾವೆ.[೨೬] ಆದ್ದರಿಂದ ರೋಮನ್ ಸಾಮ್ರಾಜ್ಯದೊಂದಿಗೆ ಇವರ ವ್ಯಾಪಾರ ಸಂಪರ್ಕವಿತ್ತೆಂದು ಸ್ಪಷ್ಟಪಡಿಸಬಹುದು. ೧೯೭೮ರಲ್ಲಿ ಎ.ಕೆ. ಮಿಶ್ರಾ ಮತ್ತು ಕೆ.ವಿ. ರಾವ್ ಜೊತೆಗೂಡಿ ಚಂದ್ರವಳ್ಳಿ ಉತ್ಖನನ ಮಾಡಿ ಮಣ್ಣಿನ ಪಾತ್ರೆಗಳು, ಕುಂಬಾರನ ಮನೆಯಲ್ಲಿದ್ದಿರಬಹುದಾದ ಸ್ಥಳ, ಸೀಸದ ನಾಣ್ಯಗಳನ್ನು ಶೋಧಿಸಿದರು.[೨೭] ೧೯೦೮ರಲ್ಲಿ ಆರ್. ನರಸಿಂಹಚಾರ್‌ರವರಿಗೆ ತಾಮ್ರದ ನಾಣ್ಯ ಶೋಧಿತಗೊಂಡಿತ್ತು. ಈ ನಾಣ್ಯವು ಕ್ರಿ.ಪೂ. ೧೩೮, ಕ್ರಿ.ಶ. ೫೦೨ ಮತ್ತು ಕ್ರಿ.ಪೂ. ೧೩೮ ರಿಂದ ಹಾನ್‌ಸಂತತಿಯ ಕಾಲದಲ್ಲಿ ಮುದ್ರಿತಗೊಂಡಿವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ೧೯೫೬ರಲ್ಲಿ ಮಿಕಮಿ ಚಂದ್ರವಳ್ಳಿಯಲ್ಲಿ ಸಿಕ್ಕಂತಹ ಚೀನದ ನಾಣ್ಯಗಳನ್ನು ಮೈಸೂರು ಪ್ರಾಚ್ಯವಸ್ತು ಸಂಗ್ರಾಹಾಲಯದಲ್ಲಿ ಕಂಡರು. ಅವುಗಳನ್ನು ಪರಿಶೀಲಿಸಿ ಉತ್ತರಸುಂಗ್

[illegible]

(ಕ್ರಿ.ಶ. ೯೭೦-೧೨೭೮) ಕಾಲದಲ್ಲಿ ರಚನೆಗೊಂಡಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.[೨೮] ಒಟ್ಟಿನಲ್ಲಿ ಚಂದ್ರವಳ್ಳಿ ಶಾತವಾಹನರ ಕಾಲದಲ್ಲಿ ಪ್ರಮುಖ ಪಟ್ಟಣವಾಗಿತ್ತೆಂದು ಹೇಳಬಹುದು.

ಚಿಪ್ಪಿನಕೆರೆ

ತುರುವನೂರು ಹೋಬಳಿಯಲ್ಲಿ ಬರುವ ಗ್ರಾಮ ಚಿಪ್ಪಿನಕೆರೆ. ತುರುವನೂರಿನಿಂದ ಪಶ್ಚಿಮಕ್ಕೆ ೧೦ ಕಿ.ಮೀ. ಅಂತರ ಮತ್ತು ಚಂದ್ರವಳ್ಳಿಯಿಂದ ಉತ್ತರಕ್ಕೆ ೨೫ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಸುತ್ತಲೂ ಹಳ್ಳಕೊಳ್ಳ ತುಂಬಿ ಹರಿದಾಗ ಯಾವ ಕಡೆ ಹೋಗಲು ಕೂಡ ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಚಿಪ್ಪಿನೊಳಗೆ ಉದುಗಿದ ಊರು ಎಂದು ಕರೆದಿರಬೇಕು.[೨೯] ಚಿಪ್ಪಿನಕೆರೆಯ ಹಳ್ಳದ ದಂಡೆಯ ಮೇಲೆ ಬೂದಿ ಹೊಲಗಳೆಂದು ಕರೆಯುವ ನೆಲೆ ಇದೆ. ಈ ಬೂದಿ ಹೊಲಗಳು ೫ ರಿಂದ ೮ ಎಕರೆಗಳಷ್ಟು ವಿಸ್ತಾರವಾಗಿದ್ದು, ಶಾತವಾಹನರ ಮತ್ತು ಮಹಾರಥಿಗಳ ಅವಶೇಷಗಳು ಸಿಗುತ್ತವೆ. ಈ ನೆಲೆಯಲ್ಲಿ ಬಿಳಿವರ್ಣದ ರೇಖೆಗಳ ಸಹಿತವಾದ ಹಾಗೂ ಹೊಳಪುಳ್ಳ ಕಪ್ಪು ಮತ್ತು ಕೆಂಪು ಮಡಕೆ ಚೂರುಗಳು, ವಿವಿಧ ಬಗೆಯ ಮಣಿಗಳು, ದಂತದ ಚೂರುಗಳು, ಸುಟ್ಟ ಇಟ್ಟಿಗೆಗಳನ್ನು ಸಂಶೋಧಕರ ತಂಡವು ಶೋಧಿಸಿ ಬೆಳಕಿಗೆ ತಂದಿದ್ದಾರೆ.[೩೦] ನನ್ನ ಕ್ಷೇತ್ರ ಕಾರ್ಯದಲ್ಲಿ ಕೆಂಪು ಬಣ್ಣದ ಹೊಳಪುಳ್ಳ ಮಡಕೆ ಚೂರುಗಳು ಜೊತೆಗೆ ಸೀಸದ ನಾಣ್ಯ ಕೂಡ ದೊರಕಿರುತ್ತದೆ. ಈ ಹಿಂದೆ ದೊರೆತ ನಾಣ್ಯ ೧೨ ಗ್ರಾಂ. ತೂಕವನ್ನು ಹೊಂದಿ ವೃತ್ತಾಕಾರವಾಗಿದೆ. ಒಂದು ಮುಖದಲ್ಲಿ ವೃಷಭ, ಅದರ ಸುತ್ತಲೂ ನಂದಮಹಾರಥಿಗಳೆಂದು ಬ್ರಾಹ್ಮಿಲಿಪಿಯಲ್ಲಿ ಬರೆದಿರುವುದು. ಇನ್ನೊಂದು ಮುಖದಲ್ಲಿ ಮರದ ಚಿತ್ರವಿದೆ.[೩೧] ಈ ನೆಲೆಯಲ್ಲಿ ಹೆಚ್ಚು ಚುಟು ಮತ್ತು ನಂದಮಹಾರಥಿಗಳ ನಾಣ್ಯಗಳೇ ದೊರಕಿರುವುದರಿಂದ ಶಾತವಾಹನರ ಮಾಂಡಲೀಕರ ಆಡಳಿತ ಕೇಂದ್ರವಾಗಿತ್ತೆಂದು ಹೇಳಬಹುದು.

ಸಂಗೇನಹಳ್ಳಿ ಕೆರೆ

ತುರುವನೂರು ಹೋಬಳಿಯ ಗಡಿಭಾಗವಾಗಿದ್ದು, ಚಿಕ್ಕಗೊಂಡನಹಳ್ಳಿಯಿಂದ ಉತ್ತರಕ್ಕೆ ೨ ಕಿ.ಮೀ. ಅಂತರದಲ್ಲಿ ರಾಷ್ಟ್ರೀಯ ಹೆದ್ದಾರಿ-೧೩ರ ಪಕ್ಕದಲ್ಲಿದೆ. ಸಂಗೇನಹಳ್ಳಿ ಗ್ರಾಮದ ಪಕ್ಕವೇ ವಿಶಾಲವಾದ ಕೆರೆ ಇದ್ದು, ಕೆರೆಯ ನಡುಗಡ್ಡೆಯಲ್ಲಿ ಬೂದಿದಿನ್ನೆ ಇದೆ. ಈ ದಿನ್ನೆಯಲ್ಲಿ ಕೆಂಪುವರ್ಣ ಮತ್ತು ಬಿಳಿವರ್ಣಗಳ ರೇಖಾಚಿತ್ರಗಳನ್ನು ಹೊಂದಿರುವ ಹೊಳಪುಳ್ಳ ಮಡಕೆಯ ಚೂರುಗಳು, ನವಶಿಲಾಯುಗದ ಆಯುಧ, ದೊರತಿವೆ.[೩೨] ಈ ಹಿಂದೆ ಚಿಪ್ಪಿನಕೆರೆ ಯಲ್ಲಿ ಶಾತವಾಹನರ ನೆಲೆ ಶೋಧನೆಗೊಂಡಿದ್ದು, ಆ ನೆಲೆಯು ಇದೇ ಸಾಲಿಗೆ ಸೇರುತ್ತದೆ. ಪ್ರಸ್ತುತ ಸ್ಥಳಿಯರು ಓಬಳಾಪುರ ಗಡ್ಡೆಯನ್ನು ನಡುಗಡ್ಡೆಯೆಂದು ಕರೆಯುತ್ತಾರೆ. ಅಲ್ಲದೆ ಈ ನೆಲೆಯಲ್ಲಿ ವಾಸವಾಗಿದ್ದ ಜನರು ಕಾಲಾನಂತರದಲ್ಲಿ ಯಳವರ್ತಿ, ಬೊಗಳೇರಹಟ್ಟಿ ಗ್ರಾಮಗಳಿಗೆ ಸ್ಥಳಾಂತರಗೊಂಡಿರಬೇಕೆಂದು ಅಭಿಪ್ರಾಯಪಡಬಹುದು.

ತುರುವನೂರು

ಪ್ರಸ್ತುತ ಹೋಬಳಿ ಕೇಂದ್ರವಾಗಿರುವ ತುರುವನೂರು ಪ್ರಾಚೀನ ಕಾಲದಿಂದ ಸ್ವಾತಂತ್ರ್ಯ ಚಳುವಳಿವರೆಗೂ ರಾಜಕೀಯ ಇತಿಹಾಸವನ್ನು ಹೊಂದಿದ ಪ್ರದೇಶವಾಗಿದೆ. ತುರುವನೂರಿನಿಂದ ದೊಡಗಟ್ಟಕ್ಕೆ ಹೋಗುವ ಮಾರ್ಗದಲ್ಲಿ ಮೂಕಬಸಪ್ಪ ದೇವಸ್ಥಾನದ ಎದುರಿಗೆ ಇರುವ ಹಾಳೂರಲ್ಲಿ ಬೃಹತ್ ಶಿಲಾಗೋರಿಗಳು ಶೋಧಿತಗೊಂಡಿದ್ದವು. ಇದೇ ಸಂದರ್ಭದಲ್ಲಿ ಕೆಂಪು ಹೊಳಪುಳ್ಳ ಮಡಕೆ ಕಂಡುಬಂದಿತ್ತೆಂದು ವರದಿಯಾಗಿದೆ.[೩೩] ನಂತರ ಎಸ್.ವೈ. ಸೋಮಶೇಖರ್‌ರವರಿಗೆ ಸೀಸದನಾಣ್ಯ ದೊರಕಿತು. ಈ ನಾಣ್ಯವು ೧೨ ಗ್ರಾಂ. ತೂಕವನ್ನು ಹೊಂದಿದೆ.[೩೪] ನಾಣ್ಯದ ಒಂದು ಭಾಗದಲ್ಲಿ ರಾನೋ ಮುದಾನಂದಸ ಎಂದು ಬ್ರಾಹ್ಮಿಲಿಪಿಯಲ್ಲಿ ಮುದ್ರಿತವಾಗಿದೆ. ಈ ನಾಣ್ಯದ ಆಧಾರದ ಮೇಲೆ ತುರುವನೂರು ಚುಟುಗಳ ಆಡಳಿತದ ಪ್ರಭಾವಕ್ಕೆ ಒಳಗಾಗಿತ್ತೆಂದು ಹೇಳಬಹುದು. ತುರುವನೂರಿನಲ್ಲಿ ಯಾವುದೇ ವಸತಿ ನೆಲೆಗಳಿಲ್ಲದ ಕಾರಣ ಮಹಾರಥಿಗಳ ನೆಲೆಯಾಗಿತ್ತೆಂದು ಗುರುತಿಸುವುದು ಕಷ್ಟಸಾಧ್ಯವಾಗಿದೆ. ಚಿಪ್ಪಿನಕೆರೆ ಮತ್ತು ಸಂಗೇನಹಳ್ಳಿಕೆರೆ ನೆಲೆಗಳು ಸಮೀಪವಿರುವುದರಿಂದ ಯಾವುದೋ ಸಂದರ್ಭದಲ್ಲಿ ಪ್ರಸ್ತುತ ನೆಲೆಯಲ್ಲಿ ನಾಣ್ಯವನ್ನು ಬಿಟ್ಟುಹೋಗಿರುವ ಸಾಧ್ಯತೆಗಳಿವೆ.

ಟಿಪ್ಪಣಿಗಳು

೧. ರಾಮಲಿಂಗಪ್ಪ ಹೆಚ್., **ಭಾರತದ ಇತಿಹಾಸ,** ೧೯೯೭, ಪು-೧೧೯, ೧೧೦.

೨. ಪುಟ್ಟಪ್ಪ ಕೆ.ವಿ. (ಪ್ರಸಂ), **ಅಶೋಕ,** ೧೯೫೨, ಪು-೧೫೬.

೩. ಸದಾಶಿವ ಕೆ., **ಪ್ರಾಚೀನ ಭಾರತದ ಇತಿಹಾಸ,** ೨೦೦೭, ಪು-೪೦

೪. ರಂಗಸ್ವಾಮಯ್ಯ ಜಿ.ಆರ್., ಮತ್ತು ಶಿವಣ್ಣ, **ಉತ್ತರ ಭಾರತದ ಇತಿಹಾಸ,** ೨೦೦೩, ಪು-೧೦೧, ೧೦೨.

೫. ದಿವಕರ್ ಆರ್.ಆರ್. **ಕರ್ನಾಟಕದ ಪರಂಪರೆ, ಸಂ-೧,** ಆದಿಕಾಲದಿಂದ ವಿಜಯನಗರ ದವರೆಗೆ, ಪು-೧೧೯.

೬. ಅದೇ, ಪು-೧೧೭.

೭. ಮಂಜುಪ್ಪ ಶೆಟ್ಟಿ ಮಸಗಲಿ ಎಂ.ಪಿ, **ಕರ್ನಾಟಕದಲ್ಲಿ ಅಶೋಕ ಶಾಸನಗಳು,** ೧೯೯೧, ಪು-೧೦.

೮. ಅದೇ, ಪು-೧೦.

೯. ಲಕ್ಷ್ಮಣ್ ತೆಲಗಾವಿ, **ಮೌರ್ಯ ಮತ್ತು ಶಾತವಾಹನಯುಗ,** ೨೦೦೪, ಪು-೧೪.

೧೦. ಮಂಜುಪ್ಪ ಶೆಟ್ಟಿ ಮಸಗಲಿ ಎಂ.ಪಿ, **ಪೂರ್ವೋಕ್ತ,** ೧೯೯೧, ಪು-೧೧, ೧೫.

೧೧. ಅ. ಸುಂದರ, **ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ,** ೧೯೭೩, ಪು-೭.

೧೨. ಅದೇ, ಪು-೯, ೧೦.

೧೩. ಲಕ್ಷ್ಮಣ್ ತೆಲಗಾವಿ (ಸಂ), **ಚಂದ್ರವಳ್ಳಿ**, ೧೯೭೬, ಪು-೩.

೧೪. ಶ್ರೀನಿವಾಸ ಪಾಡಿಗಾರ್, **ಶಾಸನ ಆಕಾರಗಳು**, ೨೦೦೪, ಪು-೨೮.

೧೫. ಬಸವರಾಜ, **ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ**, ೨೦೦೪, ಪು-೫೭.

೧೬. ಲಕ್ಷ್ಮಣ್ ತೆಲಗಾವಿ (ಸಂ), **ಪೂರ್ವೋಕ್ತ**, ೧೯೭೬, ಪು-೬.

೧೭. ರಾಮಲಿಂಗಪ್ಪ ಹೆಚ್., **ಪೂರ್ವೋಕ್ತ**, ೧೯೯೭, ಪು-೨೨೦.

೧೮. ಬಸವರಾಜ, **ಪೂರ್ವೋಕ್ತ**, ೨೦೦೪, ಪು-೬೦.

೧೯. ಅ. ಸುಂದರ, **ಪೂರ್ವೋಕ್ತ**, ೧೯೭೩, ಪು-೫೩.

೨೦. ಶ್ರೀಶೈಲ ಆರಾಧ್ಯ, **ಸಂಶೋಧನೆಯ ಹಾದಿಯಲ್ಲಿ**, ೧೯೮೩, ಪು-೨೦.

೨೧. ಸೂರ್ಯನಾಥ ಯು. ಕಾಮತ್, **ಕರ್ನಾಟಕ ಗ್ಯಾಸೆಟಿಯರ್**, ಭಾಗ-೩, ೧೯೮೬, ಪು-೪೯.

೨೨. ಲಕ್ಷ್ಮಣ್ ತೆಲಗಾವಿ, ವೆಂಕಣ್ಣಚಾರ್ ಮತ್ತು ಹು.ಶ್ರೀ. ಜೋಯಿಸರು(ಸಂ), **ಚಿತ್ರದುರ್ಗ ದರ್ಶಿನಿ**, ೧೯೮೦, ಪು-೬೨.

೨೩. ಲಕ್ಷ್ಮಣ್ ತೆಲಗಾವಿ ಮತ್ತು ವೆಂಕಣ್ಣಚಾರ್ (ಸಂ), **ಐತಿಹಾಸಿಕ ಚಿತ್ರದುರ್ಗ**, ೧೯೭೯, ಪುಟ-೩೪.

೨೪. ಲಕ್ಷ್ಮಣ್ ತೆಲಗಾವಿ (ಸಂ), **ಪೂರ್ವೋಕ್ತ**, ೧೯೭೬, ಪು-೭, ೮.

೨೫. ಲಕ್ಷ್ಮಣ್ ತೆಲಗಾವಿ (ಸಂ), **ಚಂದ್ರವಳ್ಳಿ**, ೧೯೭೬, ಪು-೫೨.

೨೬. ಅದೇ, ಪು-೮.

೨೭. ಲಕ್ಷ್ಮಣ್ ತೆಲಗಾವಿ ಮತ್ತು ವೆಂಕಣ್ಣಚಾರ್ (ಸಂ), **ಪೂರ್ವೋಕ್ತ**, ೧೯೭೯, ಪು-೩೩, ೩೯.

೨೮. ರಾಜಶೇಖರಪ್ಪ ಬಿ., **ಇತಿಹಾಸ ಕಥನ**, ೨೦೦೧, ಪು-೪೦-೪೮.

೨೯. ಗಿರಿಜಾ ಟಿ., **ಚಿತ್ರದುರ್ಗ ಜಿಲ್ಲಾ ದರ್ಶಿನಿ**, ಪು-೯೭.

೩೦. ಲಕ್ಷ್ಮಣ್ ತೆಲಗಾವಿ, **ಪೂರ್ವೋಕ್ತ**, ೨೦೦೪, ಪು-೧೬೩.

೩೧. **ಇ.ದ.ಸಂ.**-೧೧, ಪು-೩೨, ೩೩.

೩೨. **ಸಂಯುಕ್ತ ಕರ್ನಾಟಕ**, ೦೫-೦೪-೧೯೯೬, ಪುಟ-೩.

೩೩. ಎಂ.ಎ.ಆರ್., ೧೯೪೭-೫೬, ಪು-೩೬.

೩೪. **ಇ.ದ.ಸಂ.**-೧೧, ಪು-೩೨, ೩೩.

• • •

ಅಧ್ಯಾಯ : ಐದು

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ

ಅಧ್ಯಾಯ : ಐದು

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ

ಭೂಮಿಯನ್ನು ಒಂದು ವಸ್ತುವೆಂದು ಪರಿಗಣಿಸಿ ಅದರ ಮೇಲೆ ಕಟ್ಟಲ್ಪಟ್ಟ ಗೃಹ, ಗುಡಿ, ಮುಂತಾದವುಗಳನ್ನು ವಾಸ್ತುವೆಂದು ಕರೆಯಲಾಗಿದೆ.[೧] ಇಂತಹವುಗಳಿಗೆ ಸಂಬಂಧಿಸಿದ ಶಾಸ್ತ್ರವೇ ವಾಸ್ತುಶಾಸ್ತ್ರ. ಕಾರಂತರು ಶಿಲ್ಪವೆನ್ನುವ ಪದವನ್ನು ತ್ರಿಮಾನಗಳುಳ್ಳ ಘನರೂಪದ ನಿರ್ಮಾಣಕ್ಕೆ ಸಮನಾಗಿ ಗುರುತಿಸಿದ್ದಾರೆ. ಈ ವಿವರಣೆ ಚಿತ್ರ ಹಾಗೂ ಶಿಲ್ಪಗಳ ನಡುವಣ ವ್ಯತ್ಯಾಸವನ್ನು ಗುರುತಿಸುವಲ್ಲಿ ಉಂಟಾಗಿದೆ ಎನಿಸುವುದು.[೨] ನಾಟ್ಯಶಾಸ್ತ್ರದ ಆರಂಭದಲ್ಲಿ ಭರತನು ಸರ್ವಶಿಲ್ಪ ಪ್ರವರ್ತಕನೆಂದು ಕರೆದಿರುವುದು ಕಂಡುಬರುವುದು. ಇದನ್ನು ಗಮನಿಸಿದರೆ ಕೇವಲ ಒಂದಕ್ಕೆ ಮಾತ್ರ ಸೀಮಿತವಾಗಿರದೆ ಹಲವು ಕಲೆಗಳ ಸಮ್ಮಿಶ್ರವೆಂದು ತಿಳಿದುಬರುತ್ತದೆ. ಆದರೆ ಅಂತಹ ವಿಶಾಲ ಅರ್ಥದ ವ್ಯಾಪ್ತಿ ಪರಿಮಿತಿಕೊಂಡು ವಾಸ್ತು ಎಂದರೆ ಕಟ್ಟಡ ನಿರ್ಮಾಣ, ಶಿಲ್ಪವೆಂದರೆ ಮೂರ್ತಿಗಳ ನಿರ್ಮಾಣ ಎಂಬ ಅರ್ಥದೊಂದಿಗೆ ಗುರುತಿಸಿ ಕೊಳ್ಳುತ್ತಿದೆ.[೩] ಆದುದರಿಂದ ಭೂಮಿಯ ಮೇಲೆ ಯಾವುದೇ ಕಟ್ಟಡ ಮತ್ತು ಮೂರ್ತಿಗಳು ರಚನೆಗೊಂಡರೆ ಅವುಗಳನ್ನು ವಾಸ್ತು ಶಿಲ್ಪಗಳೆಂದು ಪರಿಗಣಿಸಬೇಕು. ಈ ರೀತಿಯ ವಾಸ್ತುಶಿಲ್ಪವನ್ನು ಬೆಂಬಲಿಸಿ ಎಸ್. ಶ್ರೀಕಂಠಶಾಸ್ತ್ರಿಯವರು ಹೊಯ್ಸಳ ವಾಸ್ತುಶಿಲ್ಪ ಎಂಬ ಗ್ರಂಥವನ್ನು ರಚನೆಮಾಡಿದ್ದಾರೆ.[೪]

ವಾಸ್ತುಕಲೆ ಸ್ಥಪತಿ, ಸೂತ್ರಗ್ರಾಹಿ, ವರ್ದಕಿ, ತಕ್ಷಕರಿಂದ ಬೆಳೆದು ಬಂದಿರುವುದಾಗಿ ಮಾನಸಾರ ಹೇಳುವುದು.[೫] ಉಳಿದಂತಹ ಮಾತ್ಸ್ಯ, ಅಗ್ನಿ, ಗರುಡ, ಸ್ಕಂದ, ವಿಷ್ಣು, ಧರ್ಮೋತ್ತರ ಪುರಾಣಗಳು ಹಾಗೂ ಆಗಮಗಳು, ಮಯಮತ, ಕಾಶ್ಯಪಶಿಲ್ಪ, ಸಮರಾಂಗಣ, ಸೂತ್ರಧಾರ, ಅಪರಾಜಿತ ಪ್ರುಚ್ಛಾ, ಮಾನಸೋಲ್ಲಾಸ ಗ್ರಂಥಗಳು ಶಿಲ್ಪಶಾಸ್ತ್ರದ ಅಧ್ಯಯನಕ್ಕೆ ಆಧಾರಗಳಾಗಿವೆ.[೬]

ಪ್ರಸ್ತುತ ವಾಸ್ತುಶಿಲ್ಪ ಅಧ್ಯಯನದಲ್ಲಿ ದೇವಾಲಯ, ರಕ್ಷಣಾ ವಾಸ್ತುಶಿಲ್ಪ, ವೀರಗಲ್ಲು, ಮೂರ್ತಿಶಿಲ್ಪಗಳು, ಶಾಸನಗಳನ್ನು ಗಮನಿಸಬಹುದು. ಇವುಗಳನ್ನು ಕ್ಷೇತ್ರಕಾರ್ಯ ಮಾಡುವ ಮುಖಾಂತರ ಮತ್ತು ಗ್ರಂಥಗಳನ್ನು ಪರಿಶೀಲಿಸುವುದರ ಮೂಲಕ ಅಧ್ಯಯನ ಮಾಡಲಾಗಿದೆ.

[illegible]

[illegible]

[illegible]

[illegible]

[illegible]

[illegible]

೫.೧. ದೇವಾಲಯ ವಾಸ್ತುಶಿಲ್ಪ

ದೇವಾಲಯವೆಂದರೆ ದೇವರಿಗಾಗಿ ನಿರ್ಮಿಸಿದ ಕ್ರಮಬದ್ದ ಅಥವಾ ನಿಯಮಬದ್ಧ ಆಲಯವಾಗಿದೆ. ದೇವಾಲಯದ ಕಟ್ಟಡ ರಚನೆ ಮತ್ತು ಮೂರ್ತಿಗಳ ರಚನೆಯನ್ನು ದೇವಾಲಯ ವಾಸ್ತುಶಿಲ್ಪವೆಂದು ಕರೆಯಬಹುದು. ಸಾಮಾನ್ಯವಾಗಿ ಗರ್ಭಗೃಹ ಮತ್ತು ಮೂರ್ತಿ, ಅಂತರಾಳ, ನವರಂಗ, ಮುಖಮಂಟಪ, ಇದರ ಮುಂಭಾಗ ಯವುದಾದರೊಂದು ಸ್ತಂಭವಿದ್ದರೆ ದೇವಾಲಯ ಎನ್ನಲಾಗುವುದು. ದೇವಾಲಯಕ್ಕೆ ಪ್ರಾಚೀನತೆಯಿದ್ದು, ಅಂದಿನಿಂದ ಇಂದಿನವರೆಗೆ ಬದಲಾವಣೆಗೊಳ್ಳುತ್ತ ಮತ್ತು ವಿಸ್ತಾರಗೊಳ್ಳುತ್ತ ಬಂದಿದೆ. ದೇವಾಲಯಗಳನ್ನು ಉತ್ತರ ಭಾರತ ಮತ್ತು ದಕ್ಷಿಣ ಭಾರತದ ದೇವಾಲಯಗಳೆಂದು ವಿಂಗಡಿಸಲಾಗಿದ್ದು, ದಕ್ಷಿಣ ಭಾರತ ದೇವಾಲಯದಲ್ಲಿ ಅದಿಷ್ಟಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ, ಸೂಪ್ತಿ ಎಂಬ ಷಡ್ವರ್ಗಗಳನ್ನು ಕಾಣುತ್ತೇವೆ.[೭] ಉತ್ತರ ಭಾರತದ ದೇವಾಲಯಗಳನ್ನು ನಾಗರವೆಂದು, ದಕ್ಷಿಣ ಭಾರತದ ದೇವಾಲಯಗಳನ್ನು ದ್ರಾವಿಡವೆಂದು ಬಾದಾಮಿ ಚಾಲುಕ್ಯರು ಈ ಎರಡು ಶೈಲಿಗಳ ಮಿಶ್ರಣವನ್ನು ಬಳಸಿದ್ದರಿಂದ ವೇಸರವೆಂದು ಕರೆಯಲಾಗಿದೆ.[೮]

ದೇವಾಲಯಗಳ ನಿರ್ಮಾಣ

ವಾಸ್ತುಶಿಲ್ಪವು ಧಾರ್ಮಿಕ ತಳಹದಿಯ ಮೇಲೆ ಬೆಳೆದು ಬಂದಿದೆ. ಜೊತೆಗೆ ಸಾಮಾಜಿಕ ರಾಜಕೀಯ ಪರಿವರ್ತನೆಗೆ ಒಳಗಾಗಿ ಮಾನವನ ಅಭಿರುಚಿಗೆ ತಕ್ಕಂತೆ ಕಾಲಕಾಲಕ್ಕೆ ಸ್ವರೂಪದಲ್ಲಿ ಬದಲಾಗುತ್ತಾ ಬಂದಿದೆ. ವೇದಗಳ ಕಾಲದಲ್ಲಿ (ಕ್ರಿ.ಪೂ. ೧೫೦೦) ಜನರು ಪೂರ್ಣಕುಟಿರಗಳಲ್ಲಿ, ಬಿದಿರಿನಿಂದ ಕಟ್ಟಿದ ಕಟ್ಟಡಗಳಲ್ಲಿ, ರಾಜ ಸೌಧದಲ್ಲಿ ವಾಸಿಸುತ್ತಿದ್ದರು.[೯] ರಾಮಾಯಣ ಕಾಲದಲ್ಲಿ (ಕ್ರಿ.ಪೂ. ೧೦೦೦) ದೇವತೆಗಳ ಗೃಹಗಳು, ಜಗಲಿಗಳು, ಮಹಾದ್ವಾರಗಳು, ಉಪ್ಪರಿಗೆ ಮನೆಗಳು ಇದ್ದ ಬಗ್ಗೆ ಉಲ್ಲೇಖಗಳಿವೆ. ಇದಕ್ಕೆ ಆಧಾರವೆನಿಸಿ ಕಲ್ಲುಗೋಡೆಗಳುಳ್ಳ ರಚನೆ ಪಾಟ್ನ ಮತ್ತು ರಾಜಗೃಹದಲ್ಲಿ ದೊರಕಿದೆ.[೧೦] ಸಿಂಧೂ ಬಯಲಿನ ಕಣಿವೆಗಳಲ್ಲಿ ನಡೆದಂತಹ ಶೋಧನೆ ಮತ್ತು ಉತ್ಖನನಗಳಿಂದ ಲೌಕಿಕ ಕಟ್ಟಡಗಳು, ಸ್ತ್ರೀ ಗೊಂಬೆಗಳು, ಕಂಚಿನಗೊಂಬೆ, ವೃಷಭ ಶಿಲ್ಪ, ಪಶುಪತಿ, ಎತ್ತಿನ ಅಲಂಕಾರಿಕಗಳು, ಉಬ್ಬುಕೆತ್ತನೆಗಳು, ಮಾತೃದೇವತೆ ಶಿಲ್ಪಗಳು ಬೆಳಕಿಗೆ ಬಂದಿವೆ.[೧೧] ಇವುಗಳು ಭಾರತೀಯ ದೇವಾಲಯದ ವಾಸ್ತುಶಿಲ್ಪದ ಬೆಳವಣಿಗೆ ಮೂಲ ಪ್ರೇರಣೆಯೆನಿಸಿವೆ.

ಬೌದ್ಧಧರ್ಮ ಚಟುವಟಿಕೆಯಲ್ಲಿ ತೊಡಗಿರುವ ಅಮೂರ್ತವಾದ ಧರ್ಮಚಕ್ರ, ಛತ್ರ, ಸ್ವಸ್ತಿಕ್, ತ್ರಿಶೂಲ, ನಂದಿಪಾದ, ವೃಷಭ, ಚಿಹ್ನೆಗಳನ್ನು ಪೂಜಿಸುತ್ತಿದ್ದರು. ಈ ರೀತಿಯ ಆಚರಣೆಗೆ ಒಳಪಟ್ಟವರೇ ಹೀನಯಾನ ಪಂಥದವರು. ಕಾಲಾಂತರದಲ್ಲಿ ಮಹಾಯಾನ ಪಂಥವು ಬೆಳವಣಿಗೆಗೊಂಡು ಬುದ್ಧನನ್ನು ಮೂರ್ತಿ ರೂಪದಲ್ಲಿ ಪೂಜಿಸಲು ಪ್ರಾರಂಭಿಸಿದಾಗ ಮನುಷ್ಯನಾಕಾರದ ವಿಗ್ರಹಗಳು ರಚನೆಗೊಂಡವು.[೧೨] ಇಂತಹ ವಿಗ್ರಹಗಳು ಭಾವನಾತ್ಮಕವಾಗಿ ಮಹತ್ವದ್ದೆನಿಸಿವೆ.

[illegible]

[illegible]

[illegible]

ಮೌರ್ಯರು ಆಳ್ವಿಕೆಯಲ್ಲಿ ವಾಸ್ತುಶಿಲ್ಪವು ಮಹತ್ತರವಾದ ಬೆಳವಣಿಗೆಗೊಂಡಿದೆ. ಅಶೋಕನ ಕಾಲದಲ್ಲಿ ಬೌದ್ಧಧರ್ಮ ಹೆಚ್ಚು ಪ್ರಚಾರಕ್ಕೆ ಬರುವುದರೊಂದಿಗೆ ಸ್ತೂಪಗಳು, ಸ್ತಂಭಗಳು, ಗುಹಾಲಯಗಳು ನಿರ್ಮಾಣಗೊಂಡವು. ಸಾರನಾಥದ ಸ್ತಂಭದಲ್ಲಿರುವ ನಾಲ್ಕು ಮುಖದ ಸಿಂಹ ಮತ್ತು ಧರ್ಮಚಕ್ರ, ಇಂದು ಭಾರತದ ರಾಷ್ಟ್ರ ಲಾಂಛನವಾಗಿ ಬಳಕೆಗೊಂಡಿದೆ. ಈ ಮೂಲಕ ಆಧುನಿಕ ವಾಸ್ತುವಿನ ಮೇಲೆ ಪ್ರಭಾವ ಬೀರಿದೆ. ಮೌರ್ಯರಿಗೆ ಸಂಬಂಧಿಸಿದ ೮೦ ಕಂಬಗಳಿರುವ ಅರಮನೆ ಪಾಟ್ನಾದ ಕಮ್ರಹಾರದಲ್ಲಿ ಪತ್ತೆಗೊಂಡಿದೆ.[೧೩] ಈ ಕುರಿತು ಅರಿಯನ್‌ರವರು ಪರ್ಶಿಯನ್ ಅರಮನೆಗಳಿಗಿಂತ ಸುಂದರವಾಗಿದ್ದವೆಂದು ಹೇಳಿದ್ದಾರೆ.[೧೪] ಶಾತವಾಹನರ ಕಾಲದಲ್ಲಿ ಗುಹಾಲಯಗಳು, ಸ್ತೂಪಗಳು, ಚೈತ್ಯಾಲಯಗಳು, ವಿಹಾರಗಳು ನಿರ್ಮಾಣಗೊಂಡವು. ಕರ್ನಾಟಕದಲ್ಲಿ ಐಹೊಳೆಯ ಅಂಬಿಗೇರ ಗುಡಿಯ ಅಧಿಷ್ಠಾನದ ಕೆಳಗೆ ಇಟ್ಟಿಗೆ ಕಟ್ಟಡಗಳು ಇರುವುದು ಕಂಡುಬಂದಿದೆ.[೧೫] ಪ್ರಸ್ತುತ ಬ್ರಹ್ಮಗಿರಿಯಲ್ಲಿ ನಡೆದಂತಹ ಉತ್ಖನನದಲ್ಲಿ ಬೌದ್ಧ ಚೈತ್ಯದ ಕಟ್ಟಡದ ರಚನೆ ಸಿಕ್ಕಿರುವುದು, ಮನಗಾಣಬೇಕು.[೧೬] ಬನವಾಸಿ ಕದಂಬರ ಕಾಲದಲ್ಲಿ ಕಾಮಜಿನಾಲಯವು ಗುಡ್ನಾಪುರದಲ್ಲಿ ನಿರ್ಮಾಣಗೊಂಡಿತ್ತೆಂದು ರವಿವರ್ಮನ ಶಾಸನದಿಂದ ತಿಳಿದುಬರುತ್ತದೆ.[೧೭]

ಹೀಗೆ ಬೌದ್ಧರ ಗುಹಾಲಯಗಳಲ್ಲದೆ ಜೈನ ಮತ್ತು ಹಿಂದೂ ಗುಹಾಲಯಗಳನ್ನು ಕೊರೆದು ಗುಹಾವಾಸ್ತುವನ್ನು ಆರಂಭಿಸಿದರು. ಈ ರೀತಿಯಾದ ಬೆಳವಣಿಗೆ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರ, ಪಲ್ಲವರ ಮೇಲೆ ಪ್ರಭಾವ ಬೀರಿದವು. ಬಾದಾಮಿ ಚಾಲುಕ್ಯರು ಐಹೊಳೆ, ಬಾದಾಮಿಯಲ್ಲಿ ಗುಹಾಲಯಗಳನ್ನು ನಿರ್ಮಿಸಿ ಹಿಂದೂ, ಜೈನರ ವಾಸ್ತುಕಲೆಗೆ ಪ್ರಾಶಸ್ತ್ಯ ನೀಡಿದರು. ತರುವಾಯ ಕಾಲಾವಧಿಯಲ್ಲಿ ಪ್ರತ್ಯೇಕವಾಗಿ ರಚನಾತ್ಮಕ ದೇವಾಲಯಗಳು ನಿರ್ಮಾಣಗೊಂಡವು. ಬಾದಾಮಿಯಲ್ಲಿ ನಿರ್ಮಿತಗೊಂಡ ಮೇಲಣ ಶಿವಾಲಯ, ಕೆಳಗಣ ಶಿವಾಲಯ ಹಾಗೂ ಮಾಲಗಿತ್ತಿ ಜಿನಾಲಯಗಳು ಪ್ರಾಚೀನವಾದವುಗಳು.[೧೮] ಐಹೊಳೆಯಲ್ಲಿ ನಿರ್ಮಾಣಗೊಂಡ ಲಾಡ್‌ಖಾನ್ ದೇವಾಲಯವು (ಕಿ.ಶ. ೪೫೦). ಕರ್ನಾಟಕದ ಮೊಟ್ಟಮೊದಲ ವಾಸ್ತು ರಚನೆಯೆಂದು ಉಲ್ಲೇಖವಿದೆ.[೧೯] ರಾಷ್ಟ್ರಕೂಟರು ಕಲ್ಲುಕಡೆದು ಕೈಲಾಸನಾಥ ದೇವಾಲಯವನ್ನು ನಿರ್ಮಿಸುವುದರ ಮುಖಾಂತರ ವಾಸ್ತುಕಲೆಯನ್ನು ಉಚ್ಛ್ರಾಯ ಸ್ಥಿತಿಗೆ ಕೊಂಡೊಯ್ಯದರು.[೨೦] ಇವರ ಸಾಮಂತರಾಗಿ ಆಳ್ವಿಕೆ ಮಾಡುತ್ತಿದ್ದ ನೊಳಂಬ ಪಲ್ಲವರು ಆಲಯಗಳ ನಿರ್ಮಾಣಕ್ಕಿಂತ ಚಿತ್ರದುರ್ಗ ಪ್ರದೇಶದಲ್ಲಿ ಮೂರ್ತಿಗಳನ್ನು ರಚಿಸುವಲ್ಲಿ ವಿಶೇಷ ಆಸಕ್ತಿವಹಿಸಿದರು.[೨೧] ಕಲ್ಯಾಣದ ಚಾಲುಕ್ಯರು, ಹೊಯ್ಸಳರ ಕಾಲದಲ್ಲಿ ಸೂಕ್ಷ್ಮ ಕೆತ್ತನೆ, ಎತ್ತರವಾದ ಜಗತಿಯ ಮೇಲೆ ಆಲಯಗಳ ನಿರ್ಮಾಣ, ನಕ್ಷತ್ರಾಕಾರದ ತಳವಿನ್ಯಾಸ, ಮರಳುಗಲ್ಲಿನ ಬದಲಾಗಿ ಕರಿಮೃದುಕಲ್ಲನ್ನು ಬಳಸಿಕೊಂಡಿದ್ದು, ವಿಸ್ತೀರ್ಣ ರಚಿಸಲು ಕಂಬಗಳನ್ನು ಅಳವಡಿಸಿಕೊಂಡು, ದೇವಾಲಯಗಳ ನಿರ್ಮಾಣದಲ್ಲಿ ತಮ್ಮದೇ ಆದ ಶೈಲಿಗಳನ್ನು ಬೆಳೆಸಿಕೊಂಡರು. ನಂತರದ ವಿಜಯನಗರ ಕಾಲದಲ್ಲಿ ಗ್ರಾನೈಟ್ ಶಿಲೆಗಳನ್ನು ಬಳಸಿಕೊಂಡು ಎತ್ತರವಾದ ದೇವಾಲಯಗಳನ್ನು ನಿರ್ಮಾಣ ಮಾಡಿದ್ದಾರೆ. ಹಿಂದಿನ ಕಾಲಾವಧಿಯಲ್ಲಿ

ಕಲ್ಲಿನಿಂದ, ಇಟ್ಟಿಗೆಯಿಂದ ದೇವಾಲಯಗಳ ಗೋಪುರಗಳು ನಿರ್ಮಾಣಗೊಳ್ಳುತ್ತಿದ್ದವು. ಆದರೆ ವಿಜಯನಗರದ ಅರಸರು ಇಟ್ಟಿಗೆ ಮತ್ತು ಗಾರೆಯನ್ನು ಬಳಸಿಕೊಂಡು ನಿರ್ಮಾಣ ಮಾಡುವುದನ್ನು ಆರಂಭಿಸಿದರು. ದೇವಾಲಯದ ಸಂಕೀರ್ಣದೊಳಗೆ ಅಮ್ಮನವರ ಗುಡಿ, ಕಲ್ಯಾಣ ಮಂಟಪ ಕೈಸಾಲೆಗಳು, ಚಿಕ್ಕಗುಡಿಗಳು, ಹಜಾರ ಇತ್ಯಾದಿ ವಾಸ್ತುರಚನೆಗಳು ಸೇರಿಕೊಂಡವು. ಆದ್ದರಿಂದ ವಿಜಯವಿಠ್ಠಲ ವಿರೂಪಾಕ್ಷ ದೇವಾಲಯಗಳು ವಿಶಾಲತೆಯನ್ನು ಪಡೆಯಲು ಸಾಧ್ಯವಾಗಿದೆ. ತರುವಾಯ ಪಾಳೆಯಗಾರರ ಕಾಲದಲ್ಲಿ ದೇವಾಲಯಗಳು ಸರಳವಾಗಿ ನಿರ್ಮಾಣಗೊಂಡವು. ಗರ್ಭಗೃಹ, ಅಂತರಾಳ, ಮುಖಮಂಟಪ ತಳವಿನ್ಯಾಸವನ್ನು ಹೊಂದಿದ್ದರೆ, ಕಡಿಮೆ ಎತ್ತರವಾದ ಸ್ತಂಭಗಳಿಂದ ದೇವಾಲಯಗಳು ಚಿಕ್ಕದಾಗಿವೆ. ಭಿತ್ತಿಯ ಭಾಗವು ಸರಳವಾಗಿ, ಸಾಮಾನ್ಯವಾಗಿ ನಾಗರ ಉಬ್ಬುಕೆತ್ತನೆ, ಮೀನಿನ ಉಬ್ಬುಶಿಲ್ಪಗಳಿಂದ ಅಲಂಕೃತಗೊಂಡಿವೆ. ಈ ಸರಳತೆಗೆ ಆರ್ಥಿಕತೆ ಮತ್ತು ಪ್ರತಿಭಾವಂತ ಶಿಲ್ಪಿಗಳ ಕೊರತೆ ಕಾರಣವಾಗಿರಬಹುದೆಂದು ಹೇಳಬಹುದು.

ಸದ್ಯದ ಪ್ರದೇಶಗಳಲ್ಲಿ ಶೈವ, ವೈಷ್ಣವ ದೇವಾಲಗಳು ನಿರ್ಮಾಣಗೊಂಡಿದ್ದು, ಪಾಳೆಯಗಾರರ ಕಾಲದ್ದಾಗಿವೆ. ಅಲ್ಲದೆ ಪಾಳೆಯಗಾರರ ಶೈಲಿಯಿಂದ ಪ್ರಭಾವಿತಗೊಂಡ ಅಧುನಿಕ ಕಾಲದಲ್ಲಿ ನಿರ್ಮಾಣಗೊಂಡಂತಹ ದೇವಾಲಗಳನ್ನು ಸಹ ಕಾಣಬಹುದು. ಇಲ್ಲಿನ ಎಲ್ಲಾ ದೇವಾಲಯಗಳು ನಿರಂದಾರ ದೇವಾಲಯಗಳಿವೆ. ಕೇವಲ ಹಿಂದೂ ಶೈಲಿಯಲ್ಲಿ ಮಾತ್ರವಲ್ಲದೆ ಇಸ್ಲಾಮಿಕ್ ಶೈಲಿಯಲ್ಲಿ ಶಿಖರಗಳು ನಿರ್ಮಾಣಗೊಂಡಿರುವುದು ಸದ್ಯದ ಪ್ರದೇಶದ ರಚನಾತ್ಮಕ ವಾಸ್ತು ಕಲೆಯಲ್ಲಿ ಮಹತ್ವದ್ದು. ಆಧುನಿಕ ದೇವಾಲಯಗಳಾಗಿದ್ದರೂ, ಲಿಂಗಗಳು ಕ್ರಿ.ಶ. ೧೦-೧೨ನೇ ಶತಮಾನಕ್ಕೆ ಸೇರಿದವುಗಳನ್ನು ಕಾಣಬಹುದು.

ಸಂಖ್ಯೆ – ೧

ಗ್ರಾಮ – ಹಿರೇಕಬ್ಬಿಗೆರೆ

ಸ್ಮಾರಕ – ಕಲ್ಲೇಶ್ವರದೇವಾಲಯ

ಸ್ಥಳ – ಊರಿಗೆ ಪ್ರವೇಶ ಮುನ್ನ ಬಲಭಾಗದ ಹೊಲದಲ್ಲಿ

ಅಭಿಮುಖ – ಪೂರ್ವ

ಕಾಲ – ಕ್ರಿ.ಶ. ೧೧ನೇ ಶತಮಾನ

ಶೈಲಿ – ಸ್ಥಳೀಯ

ದೇವಾಲಯವು ಚಿಕ್ಕದಾಗಿದ್ದು, ದಿನ್ನೆಯ ಮೇಲೆ ನಿರ್ಮಿತಗೊಂಡಿದೆ. ದೇವಾಲಯದ ತಳವಿನ್ಯಾಸವು ಉಲ್ಟ ಆಂಗ್ಲ ಅಕ್ಷರ (⊥) ಆಕಾರದಲ್ಲಿದ್ದು. ಪಶ್ಚಿಮದಲ್ಲಿ ಶಿವಲಿಂಗವಿದೆ. ಗರ್ಭಗೃಹ ಅಂತರಾಳ ನವರಂಗ, ಮುಖಮಂಟಪ ಮತ್ತು ಶಿಖರವನ್ನು ಹೊಂದಿಲ್ಲ. ಆರಂಭಿಕ ಗುಡಿಗಳ ಲಕ್ಷಣಗಳನ್ನು ಹೊಂದಿದೆ. ಕಲ್ಲು ಬಂಡೆಗಳನ್ನು ನಿಲ್ಲಿಸಿ ಆದರ ಮೇಲೆ

[illegible]

[illegible]

[illegible]

[illegible]

ಬಂಡೆಯನ್ನು ಹಾಸಿದ್ದಾರೆ. ಈ ಆಲಯದಲ್ಲಿ ಶಿವಲಿಂಗವಿನ ಎದುರಿಗೆ ಸಾಮಾನ್ಯವಾಗಿ ನಂದಿ ಶಿಲ್ಪವಿರುತ್ತಿತ್ತು. ಆದರೆ ಅರ್ಧ ಊಣಿರುವ ಆನೆ ಶಿಲ್ಪವಿರುವುದು ಗಮನಾರ್ಹ.

ಸಂಖ್ಯೆ – ೨

ಗ್ರಾಮ – ಚಿಕ್ಕಪ್ಪನಹಳ್ಳಿ

ಸ್ಮಾರಕ – ಈಶ್ವರ ದೇವಾಲಯ

ಸ್ಥಳ – ಊರಿನ ಮಧ್ಯೆ

ಅಭಿಮುಖ – ಪೂರ್ವ

ಕಾಲ – ಕ್ರಿ.ಶ. ೧೬–೧೭ನೇ ಶತಮಾನ

ಶೈಲಿ – ಪಾಳೆಯಗಾರ

ದೇವಾಲಯದಲ್ಲಿ ಗರ್ಭಗೃಹ, ನವರಂಗಮಂಟಪವಿದ್ದು, ನಿರಂದಾರ ದೇವಾಲಯವಾಗಿದೆ. ಗರ್ಭಗೃಹವು ಚೌಕಕಾರವಾಗಿದ್ದು, ಬ್ರಹ್ಮಸ್ಥಾನದಲ್ಲಿ ಶಿವಲಿಂಗವಿದೆ. ಮತ್ತು ನಂದಿಶಿಲ್ಪವನ್ನು ಕಾಣಬಹುದು. ಗರ್ಭಗೃಹವು ದೇವಾಲಯದ ಮುಖ್ಯ ಕೇಂದ್ರ ಹಾಗೂ ಪೂಜಿಸುವ ಸ್ಥಳ. ಗರ್ಭಗೃಹವನ್ನು ಪ್ರವೇಶಿಸುವ ದ್ವಾರವು ಶಾಖೆಗಳಿಲ್ಲದೆ ಸರಳವಾಗಿದೆ. ಲಲಾಟದಲ್ಲಿ ಗಣೇಶನ ಉಬ್ಬುಕೆತ್ತನೆ ಕಾಣಬಹುದು. ದ್ವಾರದ ಅಕ್ಕ-ಪಕ್ಕದಲ್ಲಿ ಶೈವ ದ್ವಾರಪಾಲಕರ ಉಬ್ಬುಕೆತ್ತನೆಗಳು ರೂಪುಗೊಂಡಿವೆ. ಗರ್ಭಗೃಹದ ಮುಂಭಾಗದಲ್ಲಿರುವುದೇ ನವರಂಗಮಂಟಪ ಈ ಮಂಟಪದಲ್ಲಿ ೬ ಪೂರ್ಣಕಂಬಗಳು ಮತ್ತು ೮ ಅರೆಕಂಬಗಳಿಂದ ಕೂಡಿದ ೯ ಅಂಕಣಗಳಿವೆ. ಕಂಬಗಳು ಏಳು ಅಡಿ ಎತ್ತರವನ್ನು ಹೊಂದಿದೆ. ಕಂಬದಲ್ಲಿ ಪೀಠ, ಪಾದ, ಬಹುಮುಖ ಪಟ್ಟಿಕೆ, ಚದುರ, ಬಹುಮುಖ ಪಟ್ಟಿಕೆ, ಚದುರ ಮತ್ತು ಸುರಳಿಯಾಕಾರ ಬೂದಿಗೆಯ ಲಕ್ಷಣಗಳನ್ನು ಹೊಂದಿವೆ. ಇಲ್ಲಿನ ಕಂಬಗಳ ಮೇಲೆ ಹಂಸ, ಪದ್ಮ, ಮಿಥನಶಿಲ್ಪ, ಒಂದೇ ದೇಹ ಮೂರು ಮುಖವುಳ್ಳ ಹಸುವಿನ ಕೆತ್ತನೆ, ಆನೆಯು ಕಬ್ಬನ್ನು ಸೊಂಡಿಲಲ್ಲಿ ಹಿಡಿದಿರುವ ಕೆತ್ತನೆ, ಯಾಳಿ, ಬೇಡರಕಣ್ಣಪ್ಪನ ಶಿಲ್ಪ, ಕುದುರೆ ಓಡಿಸುತ್ತಿರುವ ಉಬ್ಬು ಕೆತ್ತನೆಗಳನ್ನು ಕಂಡರಿಸಲ್ಪಟ್ಟಿದ್ದಾರೆ. ಇವುಗಳು ದೇವಾಲಯದ ಕಲಾ ಸೌಂದರ್ಯವನ್ನು ಹೆಚ್ಚಿಸುತ್ತವೆ.

ದೇವಾಲಯದ ಊರ್ಧ್ವ ವಿನ್ಯಾಸದಲ್ಲಿ ಅದಿಷ್ಠಾನ, ಭಿತ್ತಿ, ಕಪೋತ ಭಾಗವಿದ್ದು, ಶಿಖರ ರಚನೆಗೊಂಡಿರುವುದಿಲ್ಲ. ದೇವಾಲಯಕ್ಕೆ ಆದರವಾಗಿ ನಿರ್ಮಿಸಲ್ಪಟ್ಟಿರುವ ಭಿತ್ತಿಯ ಕೆಳಭಾಗದಲ್ಲಿರುವ ಭಾಗವೇ ಅದಿಷ್ಠಾನ. ಉಪಾನ, ಗಳ, ಜಗತಿ ಭಾಗವನ್ನು ಅದಿಷ್ಠಾನದಲ್ಲಿ ಕಾಣಬಹುದು. ಇದರ ಮೇಲೆ ರಚಿತಗೊಂಡಿರುವ ಭಾಗವೇ ಭಿತ್ತಿ. ದೇವಾಲಯದ ಭಿತ್ತಿಯು ಕಟ್ಟಲ್ಪಟ್ಟಿಲ್ಲ ಜೋಡಿಸಲ್ಪಟ್ಟಿದೆ. ಅಂದರೆ ಕಲ್ಲು ಬಂಡೆಗಳನ್ನು ಒಂದರ ಮೇಲೊಂದು ಜೋಡಿಸಿ ಈ ಮಧ್ಯೆ ಕಂಬಗಳನ್ನು ಬಳಸಿಕೊಂಡು ಭಿತ್ತಿಯನ್ನು ರಚನೆ ಮಾಡಿದ್ದಾರೆ. ಭಿತ್ತಿಯು ಸರಳವಾಗಿದ್ದು, ಅರೆಕಂಬಗಳನ್ನು ಕಾಣಬಹುದು. ಎರಡು ಕಲ್ಲು ಬಂಡೆಗಳ

[illegible]

[illegible]

[illegible]

ನಡುವೆ ಕಲ್ಲುಪಟ್ಟಿಕೆ ಬರುವುದು. ಇದನ್ನು ಗಮನಿಸಿದರೆ ಅವರ ತಾಂತ್ರಿಕತೆಯ ಬಗ್ಗೆ ಅರಿವಾಗುವುದು. ಕಪೋತ ಭಾಗ ಮುಂಚಾಚಿಕೊಂಡಿದ್ದು, ಭಿತ್ತಿಗೆ ಮಳೆ ನೀರು ಬೀಳದಂತೆ ರಕ್ಷಣೆ ಒದಗಿಸುತ್ತದೆ. ಇದಕ್ಕೆ ಹೊಂದಿಕೊಂಡಿರುವುದೇ ಛಾವಣಿ. ಛಾವಣಿಯಲ್ಲಿ ಕಲ್ಲು ಬಂಡೆಗಳನ್ನು ಹಾಸಿದ್ದು, ಸಮತಟ್ಟಾಗಿದೆ. ಇದರ ಮೇಲೆ ಮಣ್ಣಿನಿಂದ ಮುಚ್ಚಿದ್ದಾರೆ.

ಸಂಖ್ಯೆ – ೩

ಗ್ರಾಮ – ಚಿಕ್ಕಪ್ಪನಹಳ್ಳಿ

ಸ್ಮಾರಕ – ಆಂಜನೇಯ ದೇವಾಲಯ

ಸ್ಥಳ – ಈಶ್ವರ ದೇವಾಲಯದ ಪಕ್ಕ

ಅಭಿಮುಖ – ದಕ್ಷಿಣ

ಕಾಲ – ಕ್ರಿ.ಶ. ೧೬-೧೭ನೇ ಶತಮಾನ

ಶೈಲಿ – ಪಾಳೆಯಗಾರ

ದೇವಾಲಯದಲ್ಲಿ ಗರ್ಭಗೃಹ, ನವರಂಗ ಮಂಟಪವಿದ್ದು, ನಿರಂದಾರ ದೇವಾಲಯವಾಗಿದೆ. ಗರ್ಭಗೃಹವು ದೇವಾಲಯದ ಮುಖ್ಯ ಕೇಂದ್ರ, ಚೌಕಾಕಾರವಾಗಿರುವ ಗರ್ಭಗೃಹದಲ್ಲಿ ಆಂಜನೇಯ ಮೂರ್ತಿಯಿದೆ. ಗರ್ಭಗೃಹದ ಪ್ರವೇಶ ಬಾಗಿಲು ಸರಳವಾಗಿದ್ದು, ಶಾಖೆಗಳಿರುವುದಿಲ್ಲ. ಲಲಾಟದಲ್ಲಿ ಮಂಗಳ ಸೂಚಕವಾದ ಗಜಲಕ್ಷ್ಮಿ ಉಬ್ಬುಕೆತ್ತನೆ ರಚಿತವಾಗಿದೆ. ದ್ವಾರದ ಅಕ್ಕಪಕ್ಕದಲ್ಲಿ ವೈಷ್ಣವ ದ್ವಾರಪಾಲಕರ ಕೆತ್ತನೆಯಿದ್ದು ಕೈಗಳಲ್ಲಿ ಶಂಖ, ಚಕ್ರ, ಗದೆಗಳಿವೆ. ಗರ್ಭಗೃಹ ಮುಂಭಾಗದಲ್ಲಿರುವುದೇ ನವರಂಗ ಮಂಟಪ. ಈ ಮಂಟಪವು ೯ ಅಂಕಣಗಳಿಂದ ಕೂಡಿದ್ದು, ೬ ಪೂರ್ಣಕಂಬಗಳು ೮ ಅರೆಕಂಬಗಳಿವೆ. ಕಂಬಗಳು ಏಳು ಅಡಿ ಎತ್ತರವಾಗಿ ಛಾವಣಿಯನ್ನು ಒತ್ತು ನಿಂತಿವೆ. ಈ ದೇವಾಲಯದ ಕಂಬಗಳ ಲಕ್ಷಣಗಳಿಗೂ ಪಕ್ಕದಲ್ಲಿರುವ ಈಶ್ವರ ದೇವಾಲಯದ ಕಂಬಗಳ ಲಕ್ಷಣಗಳಿಗೂ ಯಾವುದೇ ವ್ಯತ್ಯಾಸವಿರುವುದಿಲ್ಲ. ಕಂಬಗಳ ಮೇಲೆ ಹಂಸ, ನರಸಿಂಹಶಿಲ್ಪ, ನಾಗಬಂಧ ಕೆತ್ತನೆಗಳನ್ನು ಕಾಣಬಹುದು.

ದೇವಾಲಯದ ಊರ್ಧ್ವ ವಿನ್ಯಾಸದಲ್ಲಿ ಅದಿಷ್ಟಾನ, ಭಿತ್ತಿ, ಕಪೋತ, ಭಾಗವನ್ನು ಹೊಂದಿವೆ. ಅದಿಷ್ಟಾನ ಭಾಗದ ಲಕ್ಷಣಗಳನ್ನು ಈಶ್ವರ ದೇವಾಲಯದ ಲಕ್ಷಣಗಳಿಗೆ ಹೋಲಿಕೆ ಕೊಡಬಹುದು. ದೇವಾಲಯದ ಸುತ್ತ ಗಿಡಗಳು ಮತ್ತು ಮನೆಗಳು ಸುತ್ತುವರೆದಿದ್ದರಿಂದ ಅಧಿಷ್ಠಾನ ಭಾಗ ಮುಚ್ಚಿಕೊಂಡಿದೆ. ಅಧಿಷ್ಠಾನದ ಮೇಲೆ ನಿರ್ಮಿತಿಗೊಂಡಿರುವ ಭಿತ್ತಿಯು ಕಲ್ಲು ಬಂಡೆಗಳಿಂದ ಜೋಡಿಸಿರುವುದರ ಮೂಲಕ ರಚಿತಗೊಂಡಿದೆ. ಅರೆಕಂಬ ಮತ್ತು ಪಟ್ಟಿಕೆಗಳಿಂದ ಅಲಂಕೃತಗೊಂಡಿದೆ. ಕಪೋತ ಭಾಗವು

[illegible] [illegible] [illegible] [illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]

[illegible] [illegible] [illegible] [illegible] [illegible] [illegible] [illegible] [illegible] [illegible] [illegible]

[illegible] [illegible] [illegible] [illegible] [illegible] [illegible]

ಮುಂಚಾಚಿಕೊಂಡು ಭಿತ್ತಿಯ ಭಾಗಕ್ಕೆ ಮಳೆ ನೀರಿನಿಂದ ರಕ್ಷಣೆ ಒದಗಿಸಿದೆ. ಇದಕ್ಕೆ ಹೊಂದಿಕೊಂಡಿರುವುದೇ ಛಾವಣಿ. ಇಲ್ಲಿ ಕಲ್ಲು ಬಂಡೆಗಳನ್ನು ಹಾಸಿ ಅದರ ಮೇಲೆ ಮಣ್ಣಿನಿಂದ ಮುಚ್ಚಿದ್ದಾರೆ.

ಸಂಖ್ಯೆ – ೪

ಗ್ರಾಮ – ಮುದ್ದಾಪುರ

ಸ್ಮಾರಕ – ಆಂಜನೇಯ ದೇವಾಲಯ

ಸ್ಥಳ – ಊರ ಮಧ್ಯೆ

ಅಭಿಮುಖ – ದಕ್ಷಿಣ

ಕಾಲ – ಕ್ರಿ.ಶ. ೧೮-೧೯ನೇ ಶತಮಾನ

ಶೈಲಿ – ಸ್ಥಳೀಯ

ದೇವಾಲಯದಲ್ಲಿ ಗರ್ಭಗೃಹವು ಚಿಕ್ಕದಾಗಿದ್ದು, ಚೌಕಾಕಾರವಾಗಿದೆ. ಗರ್ಭಗೃಹದಲ್ಲಿ ಆಂಜನೇಯ ಮೂರ್ತಿಯು ಸ್ಥಾಪಿತಗೊಂಡು ಪೂಜೆಗೆ ಅಣಿಯಾಗುತ್ತಿದೆ. ಗರ್ಭಗೃಹದ ದ್ವಾರಬಾಗಿಲು ಸರಳವಾಗಿದ್ದು ಲಲಾಟದಲ್ಲಿ ಯಾವುದೇ ಮೂರ್ತಿ ಇರುವುದಿಲ್ಲ. ಅದರ ಬದಲಾಗಿ ಪದ್ಮದ ಅಂಲಕರಣೆ ಕಾಣಬಹುದು. ದ್ವಾರದ ಅಕ್ಕ ಪಕ್ಕ ವೈಷ್ಣವ ದ್ವಾರಪಾಲಕ ಶಿಲ್ಪಗಳಿವೆ. ದ್ವಾರದ ಪಕ್ಕದಲ್ಲಿ ಗಣೇಶನ ಶಿಲ್ಪ ಸ್ಥಾಪಿತಗೊಂಡಿದೆ.

ದಕ್ಷಿಣ ಭಾಗದಿಂದ ಸೊಪಾನವನ್ನು ಏರಿ ಬಂದರೆ ಚಿಕ್ಕ ಹಜಾರ ಕಂಡುಬರುವುದು ಈ ಹಜಾರದಲ್ಲಿ ಎಂಟು ಪೂರ್ಣಕಂಬಗಳು ದೇವಸ್ಥಾನದ ಛಾವಣಿಯನ್ನು ಒತ್ತು ನಿಂತಿವೆ. ಕಂಬಗಳಲ್ಲಿ ಪಾದ, ಬಹುಮುಖ ಪಟ್ಟಿ, ಚದುರ, ಚೌಕಾಕಾರದ ಬೋದಿಗೆ ಭಾಗಗಳನ್ನು ಗುರುತಿಸಬಹುದು ಕಂಬದಲ್ಲಿ ಯಾವುದೇ ರೀತಿಯ ಶಿಲ್ಪಗಳಿರುವುದಿಲ್ಲ.

ದೇವಾಲಯದ ಊರ್ಧ್ವ ವಿನ್ಯಾಸದಲ್ಲಿ ಅದಿಷ್ಠಾನ, ಭಿತ್ತಿ, ಮತ್ತು ಛಾವಣಿ ನಿರ್ಮಾಣ ಗೊಂಡಿದೆ. ದೇವಾಲಯದ ಅದಿಷ್ಠಾನಭಾಗವು ಸ್ಥಳೀಯರು ಕಟ್ಟಿದ ಕಟ್ಟೆಯಿಂದ ಮುಚ್ಚಿ ಹೋಗಿದೆ. ಭಿತ್ತಿಯ ಕಲ್ಲಿನ ಕಟ್ಟಡದಿಂದ ನಿರ್ಮಾಣವಾಗಿದ್ದು, ಸಿಮೆಂಟ್‌ನಿಂದ ಲೇಪನಮಾಡಿ ಗಟ್ಟಿಗೊಳಿಸಿದ್ದಾರೆ. ಗರ್ಭಗೃಹದ ಸುತ್ತಲು ವೃತ್ತಾಕಾರವಾಗಿ ಅಂಟಿಕೊಂಡಂತೆ ಗೋಡೆ ನಿರ್ಮಾಣ ಮಾಡಿದ್ದಾರೆ. ಗರ್ಭಗೃಹದ ಮೇಲ್ಭಾಗದಲ್ಲಿ ಯಾವುದೇ ರೀತಿಯ ಶಿಖರವಿಲ್ಲದೆ ಸಮತಟ್ಟಾದ ಛಾವಣಿಯನ್ನು ಹೊಂದಿದೆ.

ಸಂಖ್ಯೆ – ೫

ಗ್ರಾಮ – ಬೆಳಗಟ್ಟ

ಸ್ಥಳ – ಜಾಲಗಾರ ಗುಡಿ

ಸ್ಮಾರಕ – ಈಶ್ವರ ದೇವಾಲಯ

ಕಾಲ – ಕ್ರಿ.ಶ. ೧೬-೧೭ನೇ ಶತಮಾನ

ಶೈಲಿ – ಪಾಳೆಯಗಾರ

ದೇವಾಲಯವು ಗರ್ಭಗೃಹ ಅಂತರಾಳ, ಆರು ಅಂಕಣದ ಮಂಟಪವನ್ನು ತಳವಿನ್ಯಾಸದಲ್ಲಿ ಕಾಣಬಹುದು. ಗರ್ಭಗೃಹವು ದೇವಾಲಯದ ಮುಖ್ಯ ಕೇಂದ್ರ ಭಾಗ. ಚೌಕಾಕಾರವಾಗಿರುವ ಗರ್ಭಗೃಹದ ಬ್ರಹ್ಮಸ್ಥಾನದಲ್ಲಿ ಶಿವಲಿಂಗ ಸ್ಥಾಪನೆಗೊಂಡಿದೆ. ಶಿವಲಿಂಗಕ್ಕೆ ಪೂಜೆ ಮಾಡಿದ ನೀರು ಪದ್ಮನಾಳದ ಮೂಲಕ ಹೊರಬರುತ್ತವೆ. ಈ ಪದ್ಮನಾಳ ಗರ್ಭಗೃಹದ ಉತ್ತರ ಭಾಗದಲ್ಲಿದೆ. ಗರ್ಭಗೃಹದ ದ್ವಾರಬಾಗಿಲು ಪೂರ್ಣ ಕುಂಬ ಶಾಖೆಯಿಂದ ಅಲಂಕೃತ ವಾಗಿದೆ. ಗರ್ಭಗೃಹದ ನಂತರ ಬರುವ ಭಾಗವೇ ಅಂತರಾಳ. ಈ ಭಾಗವು ಚೌಕಾಕಾರ ವಾಗಿದ್ದು, ದೇವಸ್ಥಾನದ ವಸ್ತುಗಳನ್ನು ಇಡಲಿಕ್ಕೆ ಸ್ಥಳಾವಕಾಶವನ್ನು ಒದಗಿಸಿಕೊಟ್ಟಿದೆ. ಅಲ್ಲದೆ ಅಂತರಾಳದಲ್ಲಿ ನಂದಿ ವಿಗ್ರಹವಿದೆ. ಅಂತರಾಳವು ಮುಚ್ಚಲ್ಪಟ್ಟಿದ್ದು ದ್ವಾರಬಾಗಿಲು ಸರಳವಾಗಿದೆ. ಲಲಾಟದಲ್ಲಿ ಯಾವುದೇ ಶಿಲ್ಪಗಳಿಲ್ಲ. ಆದರೆ ಬಾಗಿಲಿನ ಅಕ್ಕಪಕ್ಕ ಶೈವ ದ್ವಾರಪಾಲಕರಿದ್ದಾರೆ. ಈ ಶೈವ ದ್ವಾರಪಾಲಕರನ್ನು ಗಂಗಾ ಯಮುನಾ ಎಂಬ ಕಲ್ಪನೆಯಿಂದ ಪೂಜಿಸುತ್ತಿದ್ದಾರೆ. ಅಂತರಾಳದ ನಂತರ ಬರುವಂತಹ ಭಾಗವೇ ಆರು ಅಂಕಣಗಳಿಂದ ಕೂಡಿದ ಮಂಟಪ. ಪೂರ್ವಭಾಗದಿಂದ ಸೋಪಾನವನ್ನು ಏರಿ ಬಂದರೆ ಮಂಟಪಕ್ಕೆ ಮೊದಲು ಪ್ರವೇಶಿಸಬಹುದು. ಮಂಟಪದಲ್ಲಿ ನಾಲ್ಕು ಪೂರ್ಣ ಕಂಬಗಳಿವೆ. ಉಳಿದಂತಹ ಎಂಟು ಅರೆಕಂಬಗಳು ನಿರ್ಮಾಣಗೊಂಡಿವೆ. ಕಂಬಗಳಲ್ಲಿ ಪೀಠ, ಪಾದ, ಬಹುಮುಖ ಪಟ್ಟಿ, ಚದುರ, ಬಹುಮುಖ ಪಟ್ಟಿ, ಚದುರ, ಸುರಳಿಯಾಕಾರದ ಬೋದಿಗೆಯನ್ನು ಗುರುತಿಸಬಹುದು. ಕಂಬಗಳ ಮೇಲೆ ಬೇಡರಕಣ್ಣಪ್ಪ, ಭೈರವ, ಗರುಡ, ಸೂರ್ಯ, ಇತ್ಯಾದಿ ಉಬ್ಬು ಕೆತ್ತನೆಯನ್ನು ಮತ್ತು ಆಂಜನೇಯ, ಆನೆ ಹಾಗೂ ನಾಸಿಗೂಡುಗಳನ್ನು ಒಳಭಿತ್ತಿಯಲ್ಲಿ ಕಾಣಬಹುದು. ಹೊರ ಬಿತ್ತಿಯಲ್ಲಿ ಮೀನು ಆಮೆಯನ್ನು ಬಾಯಿಯಲ್ಲಿ ಹಿಡಿದಿರುವ ಕೆತ್ತನೆ, ಹಾವು ಮತ್ತು ಹಾವಾಡಿಗನ ಕೆತ್ತನೆ, ಬಾಲಕೃಷ್ಣನ ದೃಶ್ಯ ಮತ್ತು ಮಿಥುನ ಶಿಲ್ಪವನ್ನು ಕಂಡರಿಸಲ್ಪಟ್ಟಿದ್ದಾರೆ. ಇವುಗಳಲ್ಲಿ ಪಾಳೆಯಗಾರರ ಕಲಾ ಕೌಶಲ್ಯವನ್ನು ಪ್ರತಿನಿಧಿಸುತ್ತವೆ.

ದೇವಾಲಯದ ಊರ್ಧ್ವವಿನ್ಯಾಸದಲ್ಲಿ ಅದಿಷ್ಠಾನ, ಭಿತ್ತಿ, ಕಪೋತ ಮತ್ತು ಛಾವಣಿಯನ್ನು ಕಾಣಬಹುದು. ಅಧಿಷ್ಠಾನವು ಮೂರು ಅಡಿ ಎತ್ತರವಾಗಿದ್ದು, ಉಪಾನ, ಗಳ, ಜಗತಿ ಭಾಗವನ್ನು ಹೊಂದಿವೆ. ಇದರ ಮೇಲೆ ದೇವಾಲಯ ನಿರ್ಮಿತಿಗೊಂಡಿದ್ದು, ಭಿತ್ತಿಯ ಭಾಗವನ್ನು ಕಾಣಬಹುದು. ಭಿತ್ತಿಯು ಕಲ್ಲು ಬಂಡೆಗಳಿಂದ ಜೋಡಿಸಿ ನಿರ್ಮಿತವಾಗಿದೆ. ಈ ಹಿಂದೆ ತಿಳಿಸಿರುವಂತೆ ಭಿತ್ತಿಯು ಉಬ್ಬುಕೆತ್ತನೆಗಳಿಂದ ಅಲಂಕೃತಗೊಂಡಿವೆ. ಭಿತ್ತಿಯ ಮೇಲೆ ಮುಂಚಾಚಿಕೊಂಡಿರುವ ಕಪೋತ ಭಾಗವಿದೆ. ಕಂಬದ ಮೇಲೆ ನಿಂತುಕೊಂಡಿರುವ ಛಾವಣಿ ಸಮತಟ್ಟಾಗಿದ್ದು ಬಂಡೆಗಳನ್ನು ಹಾಸಿದ್ದಾರೆ. ಈ ದೇವಾಲಯಕ್ಕೆ ಶಿಖರವಿಲ್ಲದಿದ್ದರೂ,

ಮಂಟಪದಲ್ಲಿರುವ ಕಂಬದ ಮೇಲೆ ಗರ್ಭಗೃಹ ಅದರೊಳಗೆ ಲಿಂಗ ಮತ್ತು ಗರ್ಭಗೃಹದ ಮೇಲೆ ದ್ರಾವಿಡ ಶಿಖರ ಬರುವಂತೆ ಉಬ್ಬು ಕೆತ್ತನೆಯಿದೆ. ಈ ಮೂಲಕ ದೇವಾಲಯಕ್ಕೆ ಶಿಖರವಿದ್ದರಬೇಕೆಂದು ಭಾವಿಸಬಹುದು.

ಸಂಖ್ಯೆ – ೬

ಗ್ರಾಮ – ಬೆಳಗಟ್ಟ

ಸ್ಮಾರಕ – ಆಂಜನೇಯ ದೇವಾಲಯ

ಸ್ಥಳ – ಜಾಲಗಾರ ಗುಡಿ

ಅಭಿಮುಖ – ದಕ್ಷಿಣ

ಕಾಲ – ಕ್ರಿ.ಶ. ೧೬–೧೭ನೇ ಶತಮಾನ

ಶೈಲಿ – ಪಾಳೆಯಗಾರ

ದೇವಾಲಯದಲ್ಲಿ ಗರ್ಭಗೃಹ, ಆರು ಅಂಕಣದ ಮಂಟಪಗಳಿಂದ ಕೂಡಿದ ತಳವಿನ್ಯಾಸ ವಿದೆ. ಚೌಕಾಕಾರದ ಗರ್ಭಗೃಹದಲ್ಲಿ ಆಂಜನೇಯ ಮೂರ್ತಿ ಸ್ಥಾಪಿತಗೊಂಡಿದ್ದು, ಪೂಜೆಗೆ ಒಳಪಟ್ಟಿದೆ. ಗರ್ಭಗೃಹದ ದ್ವಾರವು ಸರಳವಾಗಿದ್ದು, ಚಿಕ್ಕದಾಗಿವೆ. ದ್ವಾರದಲ್ಲಿ ಲಲಾಟವಿಲ್ಲ ಮತ್ತು ದ್ವಾರಪಾಲಕರು ಹಾಗೂ ಶಾಖೆಗಳಿರುವುದಿಲ್ಲ. ಮಂಟಪದಲ್ಲಿ ನಾಲ್ಕು ಪೂರ್ಣ ಕಂಬಗಳಿದ್ದು, ಕಂಬಗಳು ಪೀಠವಿಲ್ಲದೆ ಪಾದದ ಮೇಲೆ ನಿಂತುಕೊಂಡಿವೆ. ಉಳಿದಂತಹ ಲಕ್ಷಣಗಳು ಪಟ್ಟದ ಈಶ್ವರ ದೇವಾಲಯದ ಕಂಬಗಳನ್ನು ಹೋಲುತ್ತವೆ. ಕಂಬಗಳ ಮೇಲೆ ಯಾವುದೇ ಶಿಲ್ಪಗಳ ಕೆತ್ತನೆ ಕಾಣಲಾಗುವುದಿಲ್ಲ.

ದೇವಾಲಯದ ಊರ್ಧ್ವವಿನ್ಯಾಸದಲ್ಲಿ ಅದಿಷ್ಠಾನವಿದ್ದು, ಮೂರು ಅಡಿ ಎತ್ತರದಿಂದ ಕೂಡಿದೆ. ಉಪಾನ, ಗಳ, ಜಗತಿ ಭಾಗವಿದ್ದು, ಇದರ ಮೇಲೆ ಭಿತ್ತಿಯು ರಚನೆಗೊಂಡಿರುವುದು ಕಾಣಬಹುದು. ಭಿತ್ತಿಯು ಕಲ್ಲು ಬಂಡೆಗಳಿಂದ ನಿರ್ಮಿತಗೊಂಡಿದ್ದು, ಅಲಂಕರಗೊಂಡಿರುವುದಿಲ್ಲ ಹಾಗೂ ಯಾವುದೇ ರೀತಿಯ ಶಿಖರವಿರುವುದಿಲ್ಲ.

ಸಂಖ್ಯೆ – ೭

ಗ್ರಾಮ – ಹಾಯ್ಕಲ್

ಸ್ಮಾರಕ – ರಾಮೇಶ್ವರ ದೇವಾಲಯ

ಸ್ಥಳ – ಚಳ್ಳಕೆರೆಗೆ ಹೋಗುವ ದಾರಿಯ ಬಲಭಾಗಕ್ಕೆ

ಅಭಿಮುಖ – ಉತ್ತರ

ಕಾಲ – ಕ್ರಿ.ಶ. ೧೯–೨೦ನೇ ಶತಮಾನ

ಶೈಲಿ – ಸ್ಥಳೀಯ

ರಾಮೇಶ್ವರ ದೇವಾಲಯ ಶೈವ ದೇವಾಲಯವಾಗಿದ್ದು, ಹಾಯ್ಕಲಿನಿಂದ ಚಳ್ಳಕೆರೆಗೆ ಹೋಗುವ ದಾರಿ ಬಲಭಾಗದಲ್ಲಿ ರಚನೆಗೊಂಡಿದೆ. ಮೂಲ ದೇವಾಯಲವು ಹಾಳಾಗಿದ್ದರಿಂದ ಪ್ರಸ್ತುತ ಊರಿನವರು ಕ್ರಿ.ಶ. ೧೦ನೇ ಶತಮಾನಕ್ಕೆ ಸೇರಿದ ಲಿಂಗಕ್ಕೆ ಗರ್ಭಗೃಹವನ್ನು ನಿರ್ಮಿಸಿದ್ದಾರೆ. ಗರ್ಭಗೃಹವು ಚೌಕಾಕಾರವಾಗಿದ್ದು, ಎತ್ತರವಾಗಿದೆ. ಗರ್ಭಗೃಹದ ದ್ವಾರವು ಎತ್ತರವಾಗಿದ್ದು ಅಲಂಕಾರಗಳನ್ನು ಕಾಣಬಹುದು. ಗರ್ಭಗೃಹದ ಮೇಲೆ ದ್ರಾವಿಡ ಶಿಖರವನ್ನು ಕಾಣಬಹುದು. ದೇವಾಲಯದ ಮುಂಭಾಗದಲ್ಲಿ ಶಾಸನೋಕ್ತ ವೀರಗಲ್ಲಿದೆ.

ಸಂಖ್ಯೆ – ೮

ಗ್ರಾಮ – ತುರುವನೂರು

ಸ್ಮಾರಕ – ರಾಮಲಿಂಗ ದೇವಾಲಯ

ಸ್ಥಳ – ಕಲ್ಯಾಣ ಮಂಟಪದ ಹತ್ತಿರ

ಅಭಿಮುಖ – ಪೂರ್ವ

ಕಾಲ – ಕ್ರಿ.ಶ. ೧೯-೨೦ನೇ ಶತಮಾನ

ಶೈಲಿ – ಸ್ಥಳೀಯ

ಈ ದೇವಾಲಯ ವಾಸ್ತುಶಿಲ್ಪದಲ್ಲಿ ಸರಳವಾದ ಲಕ್ಷಣಗಳನ್ನು ಒಳಗೊಂಡಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ಮುಖಮಂಟಪವನ್ನು ಕಾಣಬಹುದು. ಗರ್ಭಗೃಹದಲ್ಲಿ ಎಂಟನೇ ಶತಮಾನಕ್ಕೆ ಸೇರಿದ ಲಿಂಗವಿದ್ದು, ಗರ್ಭಗೃಹದ ಕಟ್ಟಡ ಹೊಸದಾಗಿ ನಿರ್ಮಾಣವಾಗಿದೆ. ಈ ಲಿಂಗವಿನ ಕಾಲಕ್ಕೆ ದೇವಾಲಯದ ಮುಂಭಾಗದಲ್ಲಿರುವ ಶಾಸನ ಆಧಾರ.[೨೨] ಗರ್ಭಗೃಹದ ದ್ವಾರವು ಸರಳವಾಗಿದ್ದು, ಎತ್ತರವಾಗಿದೆ.

ಗರ್ಭಗೃಹದ ಮುಂಭಾಗದಲ್ಲಿ ಅಂತರಾಳವು ನಿರ್ಮಿತಗೊಂಡಿದ್ದು, ಅಂತರಾಳದಲ್ಲಿ ಆಧುನಿಕ ಕಾಲದ ನಂದಿ ವಿಗ್ರಹವಿರುವುದು ಕಂಡುಬರುವುದು. ಅಂತರಾಳಕ್ಕೆ ಪ್ರವೇಶ ಮಾಡಲು ಒಂದು ಮೆಟ್ಟಿಲನ್ನು ಕೆಳಗೆ ಇಳಿದು ಬರಬೇಕು. ಏಕೆಂದರೆ ಈ ಅಂತರಾಳವು ನೆಲದ ಮಟ್ಟದಿಂದ ಕೆಳಮಟ್ಟದಲ್ಲಿದೆ. ಅಂತರಾಳದ ಮುಂಭಾಗದಲ್ಲಿನ ಮುಖಮಂಟಪದಲ್ಲಿ, ಆಧುನಿಕ ಕಂಬಗಳಿವೆ.

ಸಂಖ್ಯೆ – ೯

ಗ್ರಾಮ – ತುರುವನೂರು

ಸ್ಮಾರಕ – ಕಲ್ಲೇಶ್ವರ ದೇವಾಲಯ

ಸ್ಥಳ – ಗಾಂಧಿ ಪತ್ರಿಮೆ ಪಕ್ಕದಲ್ಲಿದೆ

ಅಭಿಮುಖ – ಪೂರ್ವ

ಕಾಲ – ಕ್ರಿ.ಶ. ೧೮-೧೯ನೇ ಶತಮಾನ

ಶೈಲಿ – ಪಾಳೆಯಗಾರ

ಈ ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮಂಟಪ ಕಾಣಬಹುದು. ಗರ್ಭಗೃಹ ಚೌಕಾಕಾರವಾಗಿ ನಿರ್ಮಿತಿಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಲಿಂಗವಿನ ಮೇಲ್ಭಾಗದಲ್ಲಿ ಚಿಕ್ಕ ಭುವನೇಶ್ವರಿಯನ್ನು ಕಡೆದಿರುವರು. ಗರ್ಭಗೃಹದ ದ್ವಾರವನ್ನು ಹಿತ್ತಾಳೆ ಲೋಹದ ಕವಚದಿಂದ ಅಲಂಕೃತಗೊಳಿಸಿದ್ದಾರೆ. ಆದ್ದರಿಂದ ಮೂಲ ಸ್ವರೂಪವನ್ನು ಅರಿಯಲು ಸಾಧ್ಯವಾಗಿಲ್ಲ. ಗರ್ಭಗೃಹದ ನಂತರ ಬರುವ ಭಾಗವೇ ಅಂತರಾಳ. ಅಂತರಾಳವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಲಿಂಗದ ಅಭಿಮುಖವಾಗಿ ನಂದಿಶಿಲ್ಪವಿದೆ. ಇದರ ಪ್ರವೇಶದ ದ್ವಾರವು ಇತ್ತೀಚೆಗೆ ಹಿತ್ತಾಳೆ ತಗಡಿನಿಂದ ಅಲಂಕೃತಗೊಂಡಿದೆ. ಇದರಲ್ಲಿ ಶೈವ ದ್ವಾರಪಾಲಕರು, ಸರ್ಪ, ಕೀತಿಮುಖ, ಗಣೇಶ, ಸರಸ್ವತಿ, ಲಲಾಟದಲ್ಲಿ ಶಿವಪಾರ್ವತಿ ಮತ್ತು ಗಣೇಶ ಶಿಲ್ಪವನ್ನು ಕಂಡರಿಸಿದ್ದಾರೆ. ಅಂತರಾಳದ ನಂತರ ಬರುವ ಭಾಗವೇ ಮಂಟಪ. ಮಂಟಪದಲ್ಲಿ ಆರು ಪೂರ್ಣ ಕಂಬಗಳಿದ್ದು ಉಳಿದಂತಹ ಎಂಟು ಅರೆಕಂಬಗಳು ಇವೆ. ಕಂಬಗಳಲ್ಲಿ ಪೀಠ, ಪಾದ, ಬಹುಮುಖ ಪಟ್ಟಿ, ಚದುರ, ಇದರ ಮೇಲೆ ಅರಳಿದ ಪುಷ್ಪಬೋದಿಗೆ ಭಾಗಗಳಿವೆ. ಈ ರೀತಿಯ ಕಂಬಗಳಲ್ಲದೆ ಇನ್ನೊಂದು ರೀತಿಯ ಕಂಬಗಳಿದ್ದು, ಪಾದ, ಬಹುಮುಖದಿಂಡು, ಚದುರ, ಪುಷ್ಪಬೋಧಿಗೆಯ ಭಾಗಗಳಿವೆ. ಕಂಬಗಳಲ್ಲಿ ಪದ್ಮ, ಲಿಂಗ, ನಂದಿಯಂತಹ ಶೈವಶಿಲ್ಪಗಳು ರಚನೆಗೊಂಡಿವೆ. ಈ ಮಂಟಪವನ್ನು ಪ್ರವೇಶಿಸಲು ಸೋಪಾನ ಗಳನ್ನು ಏರಿ ಬರಬೇಕು.

ದೇವಾಲಯದ ಏರು ವಿನ್ಯಾಸದ ಅಧಿಷ್ಠಾನ, ಭಿತ್ತಿ, ಕಪೋತ, ದ್ರಾವಿಡ ಶಿಖರವಿದೆ. ಅಧಿಷ್ಠಾನ ಭಾಗವು ಸರಳವಾಗಿದ್ದು, ಉಪಾನ, ಗಳ, ಜಗತಿಯ ಭಾಗಗಳನ್ನು ಹೊಂದಿದೆ. ಇದರ ಮೇಲೆ ದೇವಾಲಯ ನಿರ್ಮಾಣಗೊಂಡಿದ್ದು, ಭಿತ್ತಿಯ ಭಾಗವನ್ನು ಗುರುತಿಸಬಹುದು. ಭಿತ್ತಿಯನ್ನು ಕಲ್ಲು ಬಂಡೆಗಳಿಂದ ಜೋಡಿಸಿ ನಿರ್ಮಿಸಿದ್ದಾರೆ. ಭಿತ್ತಿಯಲ್ಲಿ ಅರೆಕಂಬಗಳು, ಮಧ್ಯೆಯಿರುವ ಪಟ್ಟಿಯನ್ನು ಹೊರತುಪಡಿಸಿ ಬೇರೆ ಅಲಂಕರಣೆಗಳಿಲ್ಲ. ಭಿತ್ತಿಯ ಮೇಲ್ಭಾಗದಲ್ಲಿ ಕಪೋತ ಭಾಗವನ್ನು ಗುರುತಿಸಬಹುದು. ಗರ್ಭಗೃಹ ಮೇಲ್ಭಾಗದಲ್ಲಿ ಫಾಂಸಾನ ಮಾದರಿಯ ಶಿಖರವಿದೆ. ಪಿರಮಿಡ್ಡಿನ ಆಕಾರದಲ್ಲಿರುವ ಈ ಶಿಖರದಲ್ಲಿ ಗ್ರೀವ ಮತ್ತು ಕಳಶಗಳಿವೆ.

ಸಂಖ್ಯೆ – ೧೦

ಗ್ರಾಮ – ತುರುವನೂರು

ಸ್ಮಾರಕ – ಆಂಜನೇಯ ದೇವಾಲಯ

ಸ್ಥಳ – ನಾಯಕನಹಟ್ಟಿಗೆ ಹೋಗುವ ರಸ್ತೆಯಲ್ಲಿ

ಅಭಿಮುಖ – ದಕ್ಷಿಣ

ಕಾಲ – ಕ್ರಿ.ಶ. ೧೮–೧೯ನೇ ಶತಮಾನ

ಶೈಲಿ – ಪಾಳೆಯಗಾರ

ಈ ದೇವಾಲಯ ತಳವಿನ್ಯಾಸದಲ್ಲಿ ಗರ್ಭಗೃಹ ಅಂತರಾಳ ನವರಂಗ ಮಂಟಪವನ್ನು ಕಾಣಬಹುದು. ಗರ್ಭಗೃಹವು ಚೌಕಾಕಾರವಾಗಿದ್ದು, ಆಂಜನೇಯ ಮೂರ್ತಿ ಸ್ಥಾಪನೆ ಮಾಡಿದ್ದಾರೆ. ಗರ್ಭಗೃಹದ ದ್ವಾರಕ್ಕೆ ಇತ್ತೀಚೆಗೆ ಸ್ಥಳಿಯರು ಲೋಹದ ತಗಡನ್ನು ಜೋಡಿಸಿದ್ದಾರೆ. ಆದ್ದರಿಂದ ಮೂಲ ಸ್ವರೂಪಕ್ಕೆ ಧಕ್ಕೆ ಬಂದಿರುವುದಾಗಿ ಹೇಳಬಹುದು. ಗರ್ಭಗೃಹದ ನಂತರ ಬರುವ ಹಂತವೇ ಅಂತರಾಳ ಭಾಗ. ಈ ಹಂತದಲ್ಲಿ ಸ್ಥಳವಕಾಶವಿದ್ದು, ಯಾವುದೇ ಶಿಲ್ಪಗಳು ಇರುವುದಿಲ್ಲ. ಆದರೆ ಅಂತರಾಳದ ದ್ವಾರವನ್ನು ಹಿತ್ತಾಳೆ ತಗಡಿನಿಂದ ಅಲಂಕಾರಗೊಳಿಸಿದ್ದರಿಂದ ಮೂಲ ಸ್ವರೂಪವನ್ನು ತಿಳಿಯಲು ಸಾಧ್ಯವಿಲ್ಲ. ಅಂತರಾಳದ ನಂತರ ಬರುವಂಥ ತೆರೆದ ಮಂಟಪವು ವಿಸ್ತಾರವಾಗಿದ್ದು, ೬ ಪೂರ್ಣ ಕಂಬಗಳು ಮತ್ತು ೮ ಅರೆಗಂಬಗಳಿಂದ ಕೂಡಿದ ಮಂಟಪಗಳಾಗಿದೆ. ೪ ಕಂಬಗಳು ಕಟ್ಟೆಯ ಮೇಲಿದ್ದರೆ ಉಳಿದೆರಡು ಕಂಭಗಳು ೧೨ ಅಡಿ ಎತ್ತರದಿಂದ ಕೂಡಿವೆ. ಎತ್ತರವಾಗಿರುವ ಕಂಬಗಳಲ್ಲಿ ಪೀಠ ಪಾದ ಬಹುಮುಖ ದಿಂಡು, ಚದುರ ಇದರ ಮೇಲೆ ಪುಷ್ಪ ಬೋಧಿಗೆಯನ್ನು ಗುರುತಿಸಬಹುದು. ನವರಂಗ ಮಂಟಪದಲ್ಲಿ ಕಕ್ಷಾಸನಕ್ಕೆ ಅವಕಾಶವಿದ್ದು, ಇದರ ಮೇಲೆ ಕಂಬಗಳು ನಿಂತಿವೆ. ಗರಡು ಸ್ತಂಭವು ಈ ದೇವಾಲಯದ ಮುಂಭಾಗದಲ್ಲಿದ್ದು, ದೇವಾಲಯದ ಸಾಂಸ್ಕೃತಿಕ ಆಚರಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಊರ್ಧ್ವ ವಿನ್ಯಾಸದಲ್ಲಿ ಅಧಿಷ್ಠಾನ ಸರಳವಾಗಿದ್ದು, ಇದರ ಮೇಲೆ ಭಿತ್ತಿ ನಿರ್ಮಾಣ ಗೊಂಡಿದೆ. ಭಿತ್ತಿಯನ್ನು ಕಲ್ಲುಬಂಡೆಗಳನ್ನು ಜೋಡಿಸುವುದರ ಮೂಲಕ ನಿರ್ಮಾಣವಾಗಿದೆ. ಗರ್ಭಗೃಹದ ಮೇಲೆ ಇಂಡೋ ಇಸ್ಲಾಮಿಕ್ ಶೈಲಿಯ ಶಿಖರವಿದೆ. ದೇವಾಲಯದ ಮುಂಭಾಗದಿಂದ ಮೇಲ್ಭಾಗಕ್ಕೆ ತಲೆ ಎತ್ತಿ ನೋಡಿದರೆ ಮಂಪಟದ ಮೇಲೆ ಮೂರು ಕೂಡುಗಳಿವೆ. ಇವು ಇಸ್ಲಾಮಿಕ್ ಶೈಲಿಯಲ್ಲಿ ನಿರ್ಮಾಣಗೊಂಡಿದ್ದು, ಕೂಡುಗಳಲ್ಲಿ ರಾಮ, ಸೀತೆ, ಹನುಮಂತನ ಚಿಕ್ಕ ಮೂರ್ತಿಗಳನ್ನು ಕಾಣಬಹುದು.

ಸಂಖ್ಯೆ – ೧೧

ಗ್ರಾಮ – ಯಳಗೋಡು

ಸ್ಮಾರಕ – ಮಾಚಕಮ್ಮ ದೇವಾಲಯ

ಸ್ಥಳ – ಕೆರೆಯ ನಡುಗಡ್ಡೆಯಲ್ಲಿ

ಅಭಿಮುಖ – ಪೂರ್ವ

ಕಾಲ – ಕ್ರಿ.ಶ. ೧೬–೧೭ನೇ ಶತಮಾನ

ಶೈಲಿ – ಪಾಳೆಯಗಾರ

ಈ ದೇವಾಲಯ ತಳವಿನ್ಯಾದಲ್ಲಿ ಗರ್ಭಗೃಹ, ಅಂತರಾಳ ಮಂಟಪಗಳಿವೆ. ಗರ್ಭಗೃಹವು ಚೌಕಕಾರವಾಗಿದ್ದು, ಮಾಳಮ್ಮ ಮತ್ತು ಚಿಕ್ಕಮ್ಮನ ದೇವಿಯ ವಿಗ್ರಹಗಳಿವೆ. ಗರ್ಭಗೃಹ ದ್ವಾರದಲ್ಲಿ ಒಬ್ಬ ಮನುಷ್ಯ ಸರಾಗವಾಗಿ ಹೋಗಬಹುದಾದ ಸ್ಥಳವಕಾಶವಿದೆ. ದ್ವಾರ ಬಂದದ ಲಲಾಟದಲ್ಲಿ ಪದ್ಮಕೆತ್ತನೆ ಇದೆ. ಶಾಖೆಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಆದರೂ ಪೂರ್ಣ ಕುಂಭ ಶಾಖೆ ಇರುವುದನ್ನು ಗಮನಿಸಬಹುದು. ಗರ್ಭಗೃಹದ ನಂತರ ಬರುವುದೇ ಅಂತರಾಳ. ಅಂತರಾಳದಲ್ಲಿ ಉತ್ತರ ಗೋಡೆಗೆ ಅಂಟಿಕೊಂಡಿರುವ ಮಹೇಶ್ವರನ ವಿಗ್ರಹವನ್ನು ಕಾಣಬಹುದು. ಈ ದ್ವಾರ ಬಂದದಲ್ಲಿ ೪ ಶಾಖೆಗಳಿದ್ದು, ಕ್ರಮವಾಗಿ ವಜ್ರ, ವಲ್ಲಿ, ವ್ಯಾಳ, ಕೊನೆಯದು ಅಸ್ಪಷ್ಟವಾಗಿದೆ. ದ್ವಾರದ ಎರಡೂ ಕಡೆ ಜಯವಿಜಯ ಶಿಲ್ಪಗಳಿವೆ. ನಂತರ ಬರುವುದೇ ಮಂಟಪ ಭಾಗ. ಇದು ವಿಶಾಲವಾಗಿದ್ದು, ೧೨ ಅಂಕಣಗಳಿಂದ ಕೂಡಿದೆ. ಈ ಅಂಕಣದಲ್ಲಿ ಯಾವುದೇ ಕೆತ್ತನೆಗಳು ಇರುವುದಿಲ್ಲ. ೧೬ ಕಂಭಗಳಲ್ಲಿ ೬ ಪೂರ್ಣ ಕಂಬಗಳಿದ್ದರೆ, ೧೦ ಅರೆ ಕಂಬಗಳಿವೆ. ಕಂಬಗಳಲ್ಲಿ ವಿವಿಧ ಪಾದ ಬಹುಮುಖ ದಿಂಡು ಚದುರ ಬಹುಮುಖದಿಂಡು ಚದುರ ಇದರ ಮೇಲೆ ಛಾವಣಿಯನ್ನು ಒತ್ತುಕೊಂಡಿರುವ ಬೋಧಿಗೆಗಳಿವೆ. ಮಂಟಪದ ಪ್ರವೇಶದ್ವಾರ ದಕ್ಷಿಣಾಭಿಮುಖವಾಗಿದ್ದು ಸರಳವಾಗಿದೆ. ಈ ಮಂಟಪವು ಮುಚ್ಚಿದ್ದು, ಇತ್ತೀಚೆಗೆ ಗಾಳಿ ಬೆಳಕಿಗಾಗಿ ಪೂರ್ವಭಾಗದಲ್ಲಿ ಜಾಲಂದರವನ್ನು ಅಳವಡಿಸಿದ್ದಾರೆ.

ದೇವಾಲಯದ ತಳವಿನ್ಯಾಸದಲ್ಲಿ ಮಣ್ಣಿನಿಂದ ಮುಚ್ಚಿಕೊಂಡಿರುವ ಅಧಿಷ್ಠಾನವಿದೆ. ಅಧಿಷ್ಠಾನದ ಮೇಲೆ ಕಲ್ಲುಬಂಡೆಗಳನ್ನು ಜೋಡಿಸಿ ನಿರ್ಮಿಸಿದ ಭಿತ್ತಿಯನ್ನು ಕಾಣಬಹುದು. ಗರ್ಭಗೃಹದ ಹೊರಭಿತ್ತಿಯಲ್ಲಿ ದಕ್ಷಿಣಕ್ಕೆ ಕುದುರೆಯನ್ನೇರಿ ಈಟಿಯಿಂದ ಹುಲಿಯನ್ನು ತಿವಿಯುತ್ತಿರುವ ಹೋರಾಟದ ದೃಶ್ಯ, ಪಶ್ಚಿಮಕ್ಕೆ ಉದ್ದವಾಗಿ ಎಡೆಬಿಚ್ಚಿಕೊಂಡು ಮಲಗಿರುವ ಹಾವಿನ ದೃಶ್ಯ, ಉತ್ತರಕ್ಕೆ ಎರಡು ಆನೆಗಳು ಜಗಳವಾಡುತ್ತಿರುವ ದೃಶ್ಯಗಳನ್ನು ಕಂಡರಿಸಿದ್ದಾರೆ. ಅಂತರಾಳದ ಹೊರಭಿತ್ತಿಯಲ್ಲಿ ದಕ್ಷಿಣಕ್ಕೆ ಸಿಂಹಗಳ ಕೆತ್ತನೆ ಉತ್ತರದಿಕ್ಕಿನಲ್ಲಿ ಮಿಥುನ ಶಿಲ್ಪ ಮತ್ತು ಮೀನಿನ ಉಬ್ಬುಕೆತ್ತನೆಗಳನ್ನು ಗಮನಿಸಬಹುದು. ಭಿತ್ತಿಯ ಮೇಲ್ಭಾಗದಲ್ಲಿ ಕಪೋತವಿದ್ದು, ಇದರ ಮೇಲ್ಭಾಗದಲ್ಲಿ ಶಿಖರವಿರುವುದಿಲ್ಲ.

ಸಂಖ್ಯೆ	–	೧೨
ಗ್ರಾಮ	–	ಕಡಬನಕಟ್ಟೆ
ಸ್ಮಾರಕ	–	ಆಂಜನೇಯ ದೇವಾಲಯ
ಸ್ಥಳ	–	ಬಸ್ಸುನಿಲ್ದಾಣದ ಪಕ್ಕ
ಅಭಿಮುಖ	–	ದಕ್ಷಿಣ
ಕಾಲ	–	ಕ್ರಿ.ಶ. ೧೮–೧೯ನೇ ಶತಮಾನ
ಶೈಲಿ	–	ಪಾಳೆಯಗಾರ

ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ ಅಂತರಾಳ ನವರಂಗ ಮಂಟಪವನ್ನು ಕಾಣಬಹುದು. ಗರ್ಭಗೃಹವು ಚೌಕಾಕಾರವಿದ್ದು, ಆಂಜನೇಯ ಮೂರ್ತಿ ಇದೆ. ಗರ್ಭಗೃಹದ ದ್ವಾರವು ಸರಳವಾಗಿದ್ದು, ಇತ್ತೀಚೆಗೆ ಬಣ್ಣವನ್ನು ಲೇಪಿಸಿ ಅಲಂಕೃತಗೊಳಿಸಿದ್ದಾರೆ. ಅಂತರಾಳವು ಚೌಕಕಾರವಾಗಿದ್ದು, ಇದರಲ್ಲಿ ಯಾವುದೇ ಶಿಲ್ಪಗಳಿರುವುದಿಲ್ಲ. ಅಂತರಾಳದ ದ್ವಾರ ಇತ್ತೀಚಿಗೆ ಹಿತ್ತಾಳೆ ತಗಡಿನಿಂದ ಅಲಂಕೃತಗೊಂಡಿದ್ದು, ಲಲಾಟದಲ್ಲಿ ಗಣೇಶ ಉಬ್ಬು ಕೆತ್ತನೆ ಇದೆ. ನವರಂಗ ಮಂಟಪದಲ್ಲಿ ೬ ಪೂರ್ಣ ಕಂಬಗಳು ೮ ಅರೆ ಕಂಬಗಳನ್ನು ಹೊಂದಿದೆ. ಇದರಲ್ಲಿ ೪ ಕಂಬಗಳು ಕಟಾಂಜನ ಮೇಲಿದ್ದರೆ ಉಳಿದೆರಡು ಎತ್ತರವಾದ ಕಂಬಗಳು ಕೆಳಗಡೆ ಇವೆ. ಕಂಬಗಳಲ್ಲಿ ಪೀಠ, ಪಾದ, ಬಹುಮುಖಿಪಟ್ಟಿ, ಚದುರ, ಬಹುಮುಖಿಪಟ್ಟಿ, ಚದುರ, ಇದರ ಮೇಲೆ ಪುಷ್ಪ ಬೋಧಿಗೆಯನ್ನು ಕಾಣಬಹುದು. ಈ ಕಂಭಗಳಲ್ಲಿ ಯಾವುದೇ ಉಬ್ಬುಕೆತ್ತನೆ ಇಲ್ಲದೆ ಸರಳಕೃತವಾಗಿವೆ.

ಊರ್ಧ್ವ ವಿನ್ಯಾಸದಲ್ಲಿ ಅಧಿಷ್ಟಾನ, ಭಿತ್ತಿ ದ್ರಾವಿಡ ಶಿಖರವನ್ನುಕಾಣಬಹುದು. ಅಧಿಷ್ಟಾನದಲ್ಲಿ ಉಪಾನ, ಗಳ, ಜಗತಿಗಳಿದ್ದು ಇದರ ಮೇಲೆ ಭಿತ್ತಿಯು ನಿರ್ಮಿತಗೊಂಡಿದೆ. ಭಿತ್ತಿಯು ಕಲ್ಲುಬಂಡೆಗಳ ಜೋಡಣೆಯಿಂದ ನಿರ್ಮಿತಗೊಂಡಿದ್ದು ಸರಳವಾಗಿವೆ. ಗರ್ಭ ಗೃಹದ ಮೇಲೆ ದ್ರಾವಿಡ ಶಿಖರವಿದ್ದು, ಇತ್ತೀಚಿನ ಶಿಲ್ಪಿಗಳಿಂದ ಅಲಂಕೃತವಾಗಿದೆ.

ಸಂಖ್ಯೆ – ೧೩

ಗ್ರಾಮ – ಯಳಗೋಡು

ಸ್ಮಾರಕ – ಬೋಗೇಶ್ವರ ದೇವಾಲಯ

ಸ್ಥಳ – ಕೆರೆಯ ದಂಡೆಯ ಮೇಲೆ

ಅಭಿಮುಖ – ಪೂರ್ವ

ಕಾಲ – ಕ್ರಿ.ಶ. ೧೧-೧೨ನೇ ಶತಮಾನ

ಶೈಲಿ – ಕಲ್ಯಾಣ ಚಾಲುಕ್ಯ

ಈ ದೇವಾಲಯದ ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ತೆರದ ಅಂತರಾಳ ಮುಖಮಂಟಪ ವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವನ್ನು ಹೊಂದಿದೆ. ಶಿವಲಿಂಗ ಗರ್ಭಗೃಹದಲ್ಲಿ ಸ್ಥಾಪಿಸಲ್ಪಟ್ಟಿದ್ದು, ಇದರ ಮಗ್ಗುಲಲ್ಲಿ ಮತ್ತೆರಡು ಶಿವಲಿಂಗಗಳನ್ನು ನೆಲಮಟ್ಟದಲ್ಲಿ ಸ್ಥಾಪಿಸಿ ರುವುದನ್ನು ಕಾಣಬಹುದು. ಗರ್ಭಗೃಹದ ದ್ವಾರಬಂಧದಲ್ಲಿ ೪ ಶಾಖೆಗಳಿವೆ. ಶಾಖೆಗಳಿಗೆ ಬಣ್ಣ ಲೇಪನ ಮಾಡಿರುವುದರಿಂದ ಸ್ಪಷ್ಟವಾಗಿ ಕಾಣುವುದಿಲ್ಲ. ಲಲಾಟದಲ್ಲಿ ಪದ್ಮವಿದ್ದು ಇದಕ್ಕೆ ಹೊಂದಿಕೊಂಡಂತೆ ಮುಗುಚಿದ ಎರಡು ಪುಷ್ಪಗಳನ್ನು ಗಮನಿಸಬಹುದು. ಇತ್ತೀಚೆಗೆ ಮುಖಮಂಪಟವು ಪೂರ್ವದಿಂದ ಬರಲು ಪ್ರವೇಶ ದ್ವಾರ ತೆರೆದು ಭಿತ್ತಿಯನ್ನು ನಿರ್ಮಿಸಿದ್ದಾರೆ. ದೇವಾಲಯದ ಹೊರಭಾಗದಲ್ಲಿ ಶಾಸನೋಕ್ತ ಸತಿಗಲ್ಲನ್ನು ಮತ್ತು ಬಳಪದ ಕಲ್ಲಿನಿಂದ

ರಚನೆಗೊಂಡ ಗಣೇಶ ಶಿಲ್ಪಗಳಿರುವುದು ಕಂಡುಬರುತ್ತದೆ. ದೇವಾಲಯದ ಅಧಿಷ್ಠಾನವು ವಾಸ್ತುಶೈಲಿಯಲ್ಲಿ ಮುಖ್ಯವಾಗಿದ್ದು, ಇದರಲ್ಲಿ ಪದ್ಮೋಪಾನ, ಕಂಪ, ಗಳ, ಕಂಪ, ದ್ವಿಪಟ್ಟ ಕುಮುದ, ಕಂಪ, ಗಳ, ಕಂಪ, ದಂತಪಂಕ್ತಿಗಳನ್ನು ಗುರುತಿಸಬಹುದು. ಇದರ ಮೇಲೆ ಭಿತ್ತಿ ನಿರ್ಮಾಣಗೊಂಡಿದ್ದು, ಇತ್ತೀಚೆಗೆ ಸ್ಥಳಿಯರಿಂದ ಸಿಮೆಂಟಿನಿಂದ ಲೇಪನಗೊಂಡಿದೆ. ಭಿತ್ತಿಯ ಮೇಲ್ಭಾಗ ಕಪೋತವಿದ್ದು, ಶಿಖರವಿಲ್ಲದೆ ಸಮತಟ್ಟಾದ ಛಾವಣಿಯನ್ನು ಹೊಂದಿದೆ. ಈ ದೇವಾಲಯದ ಹಿಂಭಾಗದಲ್ಲಿ ಕಲ್ಲೇಶ್ವರ ದೇವಾಲಯವಿದ್ದು, ಗರ್ಭಗೃಹ ಮಾತ್ರವಿದೆ. ಇದರಲ್ಲಿ ಪ್ರಾಚೀನವಾದ ಶಿವಲಿಂಗ ಸ್ಥಾಪನೆಗೊಂಡಿದೆ.

೫.೨. ಶಾಸನಗಳು

ಇತಿಹಾಸ ಕಾಲವು ಪ್ರಾರಂಭಗೊಳ್ಳುವುದು ಮೌರ್ಯರಿಂದ. ಇವರಲ್ಲಿ ಪ್ರಮುಖ ಸಾಮ್ರಾಟರೆಂದರೆ, ಅಶೋಕ. ಈತನು ಕಳಿಂಗ ಯುದ್ಧದ ನಂತರ ಬೌದ್ಧ ಧರ್ಮವನ್ನು ಸ್ವೀಕರಿಸಿ ಅಹಿಂಸಾ ತತ್ವವನ್ನು ಸ್ವೀಕರಿಸಿದನು. ತತ್ಪರಿಣಾಮವಾಗಿ ಧರ್ಮಪ್ರಚಾರ ಮಾಡುವ ಉದ್ದೇಶದಿಂದ ಶಾಸನಗಳನ್ನು ಹಾಕಿಸಿದ್ದಾನೆ. ಮುಖ್ಯವಾಗಿ ಕರ್ನಾಟಕದಲ್ಲಿ ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗರಾಮೇಶ್ವರ, ಮಸ್ಕಿ, ಕೊಪ್ಪಳ, ಮೊದಲಾದ ಪ್ರದೇಶಗಳಲ್ಲಿ ಬಂಡೆಗಳ ಮೇಲೆ ಶಾಸನಗಳನ್ನು ಕಾಣಬಹುದು. ಈ ಶಾಸನಗಳು ಬ್ರಾಹ್ಮಿ ಲಿಪಿಯಲ್ಲಿದ್ದು ಪ್ರಾಕೃತ ಭಾಷೆಯಲ್ಲಿ ರಚಿತಗೊಂಡಿವೆ. ಉತ್ತರ ಭಾರತದಲ್ಲಿ ಕಂಡುಬರುವ ಬ್ರಾಹ್ಮಿಲಿಪಿ ಶಾಸನವನ್ನು ಜೇಮ್ಸ್‌ಪ್ರಿನ್ಸೆಪ್ ಮೊದಲು ಓದುವುದರ ಮೂಲಕ ಅದರಲ್ಲಿರುವ ರಹಸ್ಯವನ್ನು ಹೊರಹಾಕಿದರು.[೨೩] ಇದೇ ಸಂದರ್ಭದಲ್ಲಿ ಬ್ರಾಹ್ಮಿ ಶಾಸನವನ್ನು ಅಧ್ಯಯನ ಮಾಡಿ ಪ್ರಕಟಿಸಿದವರಲ್ಲಿ ಚಾರ್ಲ್ಸ್ ವಿಲ್ಕಿನ್ಸ್ ಮೊದಲಿಗರು.[೨೪] ಇಂತಹ ಶೋಧನೆಗಳು ತರುವಾಯ ಕಾಲಾವಧಿಯಲ್ಲಿ ಅಧ್ಯಯನ ಗಳಿಗೆ ಉತ್ತೇಜಕಗಳಾಗಿವೆ. ಮೌರ್ಯರ ಶಾಸನಗಳ ತರುವಾಯ ಬನವಾಸಿ, ಚಂದ್ರವಳ್ಳಿ, ಮಳವಳ್ಳಿ ಮೊದಲಾದ ಕಡೆ ಶಾತವಾಹನರ ಮತ್ತು ಕದಂಬರ ಶಾಸನಗಳು ಶೋಧನೆ ಗೊಂಡವು.[೨೫] ಈ ಶಾಸನಗಳು ಪ್ರಾಕೃತ ಭಾಷೆ, ಬ್ರಾಹ್ಮಿಲಿಪಿಯಲ್ಲಿ ರಚಿತಗೊಂಡಿವೆ. ಆದರೆ ಚಂದ್ರವಳ್ಳಿ ಶಾಸನವನ್ನು ಬಿ. ರಾಜಶೇಖರಪ್ಪ ಮರುಪರಿಶೀಲನೆ ಮಾಡಿ ಅದರ ಭಾಷೆ ಪ್ರಾಕೃತವಲ್ಲ, ಸಂಸ್ಕೃತ ಭಾಷೆಯಲ್ಲಿದೆ ಎಂಬ ವಿಚಾರವನ್ನು ತಿಳಿಸಿದ್ದಾರೆ.[೨೬] ಆದ್ದರಿಂದ ಚಿತ್ರದುರ್ಗ ಪರಿಸರದಲ್ಲಿ ಶೋಧನೆಗೊಂಡ ಪ್ರಾಚೀನ ಸಂಸ್ಕೃತ ಶಾಸನದಲ್ಲಿ ಚಂದ್ರವಳ್ಳಿ ಶಾಸನ ಪ್ರಮುಖ. ನಂತರದ ಆಳ್ವಿಕೆಯ ಕಾಲಾವಧಿಯಲ್ಲಿ ಕನ್ನಡ ಭಾಷೆ ಪ್ರಮುಖ ಸ್ಥಾನ ವನ್ನು ಪಡೆದುಕೊಂಡಿತು. ಅತ್ಯಂತ ಪ್ರಾಚೀನ ಕನ್ನಡ ಶಾಸನ ಬೇಲೂರಿನ ಹಲ್ಮಿಡಿ ಗ್ರಾಮ ದಲ್ಲಿ ಶೋಧನೆಗೊಂಡಿದ್ದು, ಹಲ್ಮಿಡಿ ಶಾಸನವೆಂದು ಪ್ರಸಿದ್ಧಿ ಪಡೆದಿದೆ.[೨೭] ಕರ್ನಾಟಕದಲ್ಲಿ ಹೀಗೆ ಕನ್ನಡ ಶಾಸನಗಳು ಸಾಂಸ್ಕೃತಿಕವಾಗಿ ತಮ್ಮದೇ ಆದ ಪ್ರಾಶಸ್ತ್ಯವನ್ನು ಪಡೆದು ಕೊಂಡಿದ್ದವೆಂದು ಹೇಳಬಹುದು.

'ಶಾಸನ' ಎಂಬ ಪದವು ಸಂಸ್ಕೃತ 'ಶಾಸ್' ಎಂಬ ದಾತುವಿನಿಂದ ಬಂದಿದ್ದು, 'ಶಾಸ್' ಎಂದರೆ ಆಜ್ಞಾಪಿಸು, ನಿಯಂತ್ರಿಸು, ಶಿಕ್ಷಿಸು, ಎಂಬ ಅರ್ಥಗಳಿವೆ.[೨೮] ಡಿ.ಸಿ.ಸರ್ಕಾರ್

ಪ್ರಕಾರ ಶಾಸನವೆಂದರೆ "ಯಾವುದಾದರೊಂದು ಗಟ್ಟಿಯಾದ ಪದಾರ್ಥದ ಮೇಲೆ ಕೊರೆದ ಯಾವುದೇ ಬರಹವೇ ಶಾಸನ" ಎಂಬ ಅರ್ಥ ನೀಡುತ್ತಾರೆ. ಈ ಹೇಳಿಕೆಯನ್ನು ಗಮನಿಸಿದರೆ ಶಾಸನಗಳು ಕೊರೆಯಲ್ಪಟಿವೆಯೇ ಹೊರತು ಬರೆಯಲ್ಪಟ್ಟಿರುವುದಿಲ್ಲ ಎಂದು ತಿಳಿಯಬಹುದು. ಆದರೆ ಭಾರತದ ಪ್ರಿಪ್ರಹ್ವ ಕರಂಡಕ ಶಾಸನ ಹಾಗೂ ಕರ್ನಾಟಕದ ಕೋಲಾರ ಜಿಲ್ಲೆಯ ಸಂತೇಕಲ್ಲನಹಳ್ಳಿಯಲ್ಲಿ ದೊರೆತ ಶಾಸನಗಳು ಮಡಕೆಯ ಮೇಲೆ ಬರೆಯಲ್ಪಟ್ಟಿದ್ದರೂ ಶಾಸನಗಳೆನಿಸಿವೆ.[೨೯] ಆದ್ದರಿಂದ ಶಾಸನವೆಂದರೆ ಯಾವುದಾದರೊಂದು ಗಟ್ಟಿಯಾದ ವಸ್ತುವಿನ ಮೇಲೆ ಬರೆಯಲ್ಪಟ್ಟ ಅಥವಾ ಕೊರೆಯಲ್ಪಟ್ಟು ಶಾಶ್ವತವಾಗಿ ಉಳಿಯುವಂತೆ ರಚಿತಗೊಂಡಿರುವ ಬರಹಗಳೆಂಬ ಅರ್ಥ ನೀಡಬಹುದು.

ಶಾಸನಗಳನ್ನು ರಾಜಶಾಸನ, ತಾಮ್ರಪಟ ಶಾಸನ, ದಾನ ಶಾಸನ, ಜಯಪತ್ರ, ಯೂಪಸ್ಥಂಭ ಶಾಸನ, ಪ್ರತಿಮಾಶಾಸನ, ವಿಜಯಶಾಸನ, ವೀರಗಲ್ಲು, ಮಾಸ್ತಿಗಲ್ಲು, ನಿಷಧಿಗಲ್ಲು, ತುರುಗೋಳ್ ವೀರಗಲ್ಲುಗಳೆಂಬುದಾಗಿ ವಿಭಾಗಿಸಲಾಗಿದ್ದು,[೩೦] ಪ್ರಾಕೃತ, ಸಂಸ್ಕೃತ, ಕನ್ನಡ, ಅರೇಬಿಕ್, ಪಾಳಿ ಮೊದಲಾದ ಭಾಷೆಗಳಲ್ಲಿ ರಚಿತಗೊಂಡಿವೆ. ಶಾಸನದ ರಚನೆಯಲ್ಲಿ ಲಿಪಿಯ ಪಾತ್ರ ಬಹುಮುಖ್ಯವಾದುದ್ದು. ಅಶೋಕನು ಬ್ರಾಹ್ಮಿಲಿಪಿಯಲ್ಲಿ ಮತ್ತು ಖರೋಷ್ಠಿ ಲಿಪಿಯಲ್ಲಿ ಶಾಸನಗಳನ್ನು ಹಾಕಿಸಿ ಸಫಲನಾಗಿದ್ದಾನೆ. ತರುವಾಯ ಕಾಲಾವಧಿಯಲ್ಲಿ ಅರಸರು ತಮ್ಮ ಸಂಸ್ಥಾನಕ್ಕೆ ಅನುಕೂಲವಾಗುವಂತೆ ಅವರದೇ ಆದ ಲಿಪಿಗಳಲ್ಲಿ ಮತ್ತು ಭಾಷೆಗಳಲ್ಲಿ ಶಾಸನಗಳನ್ನು ಹಾಕಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ೪೫೩ ಕನ್ನಡ ಶಾಸನಗಳು ಶೋಧನೆ ಗೊಂಡಿವೆ.[೩೧] ಇವುಗಳಲ್ಲಿ ಪ್ರಸ್ತುತ ೭ ಶಾಸನಗಳು ಸೇರಿಕೊಂಡಿದ್ದು, ಪ್ರಕಟಿತಗೊಂಡಿದೆ. ಆದರೆ ದೊಡ್ಡಘಟ್ಟ ಕೆರೆಯ ದಂಡೆಯ ಮೇಲಿರುವಂತಹ ಶಾಸನ ಅಪ್ರಕಟಿತಗೊಂಡಿವೆ. ಈ ಶಾಸನಗಳಲ್ಲಿ ತುರುವನೂರು ಶಾಸನವು ಪ್ರಾಚೀನವಾದದ್ದು. ಇದು ಕ್ರಿ.ಶ. ೮ನೇ ಶತಮಾನಕ್ಕೆ ಸಂಬಂಧಿಸಿದ್ದು. ಉಳಿದಂತಹ ಶಾಸನವು ಬಾಗೇನಾಳ್ ಶಾಸನ ಕ್ರಿ.ಶ. ೯೧೮ರಲ್ಲಿ ರಚಿತಗೊಂಡರೆ ಹಾಯ್ಕಲ್ಲಿನ ರಾಮಲಿಂಗೇಶ್ವರ ದೇವಾಲಯದಲ್ಲಿರುವಂಥ ಶಾಸನೋಕ್ತ ವೀರಗಲ್ಲು ಕ್ರಿ.ಶ. ೧೦ನೇ ಶತಮಾನಕ್ಕೆ ಸೇರಿದ್ದಾಗಿದೆ. ಯಳಗೋಡಿನ ಎರಡು ಶಾಸನಗಳು ಕ್ರಿ.ಶ. ೧೧೬೮ ಮತ್ತು ಕ್ರಿ.ಶ. ೧೪೦೫ರಲ್ಲಿ ಹಾಗೂ ಹಾಯ್ಕಲ್ಲಿನ ಇನ್ನೊಂದು ಶಾಸನ ಕ್ರಿ.ಶ. ೧೭ನೇ ಶತಮಾನದಲ್ಲಿ ರಚಿತಗೊಂಡಿವೆ.

ತುರುವನೂರಿನ ರಾಮಲಿಂಗ ದೇವರ ಗುಡಿಯ ಮುಂಭಾಗದಲ್ಲಿ ಕ್ರಿ.ಶ. ೮ನೇ ಶತಮಾನಕ್ಕೆ ಸೇರಿದ ದಾನ ಶಾಸನವಿದೆ.[೩೨] ಇದು ಗ್ರಾನೈಟ್ ಶಿಲೆಯ ಮೇಲೆ ರಚಿತಗೊಂಡಿದ್ದು, ಅಕ್ಷರಗಳು ತೃಟಿತಗೊಂಡಿವೆ. ಶಾಸನದಲ್ಲಿ ಹಲವಾರು ಗಾವುಂಡರು ಸೇರಿಕೊಂಡು ರಾಮಲಿಂಗ ದೇವಾಲಯಕ್ಕೆ ಸ್ವಲ್ಪ ಜಾಗವನ್ನು ದಾನ ನೀಡಿದರೆಂದು ಉಲ್ಲೇಖವಿದೆ.

ಈ ಶಾಸನಕ್ಕೆ ಸಮಕಾಲಿನದ್ದೆನ್ನಬಹುದಾದ ಶಾಸನವು ಚಳ್ಳಕೆರೆಯ ತಾಲ್ಲೂಕಿನ ದೊಡ್ಡಉಳ್ಳಾರ್ತಿ ಗ್ರಾಮ ಪರಿಸರದಲ್ಲಿ ದೊರಕಿದ್ದು, ಕ್ರಿ.ಶ. ೭೫೫ರಲ್ಲಿ ರಚಿತಗೊಂಡಿವೆ.[೩೩] ಇದರಲ್ಲಿ ದೇಚಗಾವುಂಡ ಮತ್ತು ಈತನ ಮಗ ನೊಳಂಬ ಗಾವುಂಡನೆಂದು ಉಲ್ಲೇಖವಿದೆ.

[illegible]

[illegible]

[illegible]

ಪ್ರಸ್ತುತ ಶಾಸನದಲ್ಲಿರುವ 'ಗಾವುಂಡ' ಎಂಬ ಪದದ ಆಧಾರದ ಮೇಲೆ ನೊಳಂಬ ಕಾಲಾವಧಿಯಲ್ಲಿ ರಚನೆಯಾಗಿರಬಹುದೆಂದು ಹೇಳಬಹುದು. 'ಗಾವುಂಡ' ಎಂದರೆ ಗೌಡ, 'ಒಡೆಯ' ಎಂಬ ಅರ್ಥವಿದೆ. ಗಾವುಂಡಗಳು ಮತ್ತು ಪ್ರಭುಗಾವುಂಡಗಳೆಂದು ಕರೆದುಕೊಂಡಿರುವುದನ್ನು ಈ ಶಾಸನಗಳಲ್ಲಿ ಕಾಣಬಹುದು.[೩೪]

ಬಾಗೇನಾಳ್ ಶಾಸನ

ಬಾಗೇನಾಳ್ ಗ್ರಾಮವು ತುರುವನೂರಿನಿಂದ ದಕ್ಷಿಣಕ್ಕೆ ೮ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಹೊಲಹೊಂದರಲ್ಲಿ ಶಾಸನವಿದ್ದು, ಕ್ರಿ.ಶ. ೯೧೮ರಲ್ಲಿ ರಚಿತವಾಗಿದೆ.[೩೫] ಇದರಲ್ಲಿ ೬ ಸಾಲುಗಳಿದ್ದು, ಪೂರ್ವ ಹಳೇಗನ್ನಡ ಅಕ್ಷರಗಳಲ್ಲಿ ರಚಿತವಾಗಿದ್ದು, ದೇವನೂರು ಪದದ ನಂತರ ಬರುವ ಅಕ್ಷರಗಳು ತೃಟಿತಗೊಂಡಿರುವುದರಿಂದ ಮಾಹಿತಿ ಅಸ್ಪಷ್ಟವಾಗಿದೆ. ಇದರಲ್ಲಿ ಪಲ್ಲವ ನನ್ನಿಗಾಶ್ರಯ ಅಯ್ಯಪ್ಪದೇವನು ದೇವನೂರು ರಾಜ್ಯವನ್ನು ಆಳುತಿದ್ದನೆಂದು ಉಲ್ಲೇಖವಿರುವುದು ಕಂಡುಬರುತ್ತದೆ. ಅವರ ರಾಜ್ಯಗಳಿಗೆ ದೇವರ ರಾಜ್ಯಗಳೆಂದು ಕರೆಯುತ್ತಿದ್ದರಿಂದ ದೇವನೂರು ಎಂಬ ಪದ ಬಳಕೆಯಾಗಿದ್ದಿರಬಹುದೆಂದು ಹೇಳಬಹುದು. ಅಯ್ಯಪ್ಪ ದೇವ ಪ್ರಸ್ತುತ ಪ್ರದೇಶಗಳಲ್ಲಿ ಆಳ್ವಿಕೆ ನಡೆಸುತ್ತಿದ್ದನೆಂದು ಶಾಸನದಿಂದ ತಿಳಿದು ಬಂದಿರುತ್ತದೆ.

ನೊಳಂಬಾಧಿರಾಜ ಅಯ್ಯಪ್ಪದೇವ ನೊಳಂಬವಾಡಿ ೩೨ ಸಾವಿರ ನಾಡನ್ನು ಆಳುತ್ತಿದ್ದನೆಂದು ಪಕ್ಕದ ಜಗಳೂರು ತಾಲ್ಲೂಕಿನ ಮುಸ್ಟೂರು ಗ್ರಾಮದಲ್ಲಿರುವ ಶಾಸನದಲ್ಲಿ ಉಲ್ಲೇಖವಿದೆ.[೩೬] ಅಲ್ಲದೆ ಅಯ್ಯಪ್ಪದೇವನಿಗೆ ಇನ್ನೊಂದು ಹೆಸರು ನನ್ನಿಗಾಶ್ರಯ ಎಂಬ ಹೆಸರಿತ್ತೆಂದು ಬಿ.ಎಲ್. ರೈಸ್‌ರವರು ತಿಳಿಸಿದ್ದಾರೆ.[೩೭] ಈ ಮಾಹಿತಿಯಿಂದಾಗಿ ನನ್ನಿಗಾಶ್ರಯ ಮತ್ತು ಅಯ್ಯಪ್ಪದೇವ ಬೇರೆಯಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಯಳಗೋಡು ಶಾಸನ

ತುರುವನೂರು ಹೋಬಳಿ ಚಿಕ್ಕಗೊಂಡನಹಳ್ಳಿಯಿಂದ ಪಶ್ಚಿಮಕ್ಕೆ ಸುಮಾರು ೮ ಕಿ.ಮೀ. ದೂರದಲ್ಲಿರುವುದೇ ಯಳಗೋಡು ಗ್ರಾಮ. ಈ ಗ್ರಾಮದ ಹೊರವಲಯದ ಜಮೀನಿನಲ್ಲಿ ಕ್ರಿ.ಶ. ೧೧೬೮ರ ಶಾಸನವಿದೆ.[೩೮] ಶಾಸನದಲ್ಲಿ ವಿಜಯಪಾಂಡ್ಯ ಮತ್ತು ಸೋವಿದೇವನ ಉಲ್ಲೇಖವಿರುವುದು ಕಂಡುಬರುತ್ತದೆ. ಅಲ್ಲಲ್ಲಿ ಅಕ್ಷರಗಳು ತೃಟಿತಗೊಂಡಿರುವುದುದರಿಂದ ಮಾಹಿತಿ ಅಸ್ಪಷ್ಟ. ಆದರೆ ಕೊನೆಯ ಸಾಲುಗಳಲ್ಲಿ ದಾನಕೊಟ್ಟ ಬಗ್ಗೆ ಮತ್ತು ಶಾಪಾಶಯದ ಬಗ್ಗೆ ಸ್ಪಷ್ಟವಾದ ಮಾಹಿತಿ ಇದೆ. ರಾಯಣ ಸಂಕ್ರಮಣ ಸಲುವಾಗಿ ಮಲ್ಲಿಕಾರ್ಜುನ ಪಂಡಿತರು ಭರಿಸಬಹುದಾದ ದೇವರ ಸ್ನಾನ, ನೈವೇದ್ಯ, ನಂದಾದೀವಿಗೆ ಮತ್ತು ಆಹಾರದ ವೆಚ್ಚಕ್ಕಾಗಿ ಗದ್ದೆಯನ್ನು ಬಿಟ್ಟುಕೊಟ್ಟಿದ್ದರ ಬಗ್ಗೆ ವಿವರಣೆ ಇದೆ. ಶಾಪಾಶಯದಲ್ಲಿ ಈ ಧರ್ಮವನ್ನು ಯಾರು ಪಾಲಿಸುತ್ತಾರೋ ಅವರಿಗೆ ವಾರಣಾಸಿ, ಕುರುಕ್ಷೇತ್ರದ ಬ್ರಾಹ್ಮಣರಿಗೆ ಸಾವಿರಾರು ಹಸುಗಳನ್ನು ನೀಡಿದ ಪುಣ್ಯ ಸಿಗುತ್ತದೆ ಹಾಗೂ ಯಾರು ಈ

[illegible]

ಧರ್ಮವನ್ನು ಪಾಲಿಸುವುದಿಲ್ಲವೋ ಅವರು ವಾರಣಾಸಿಯಲ್ಲಿ ಬ್ರಾಹ್ಮಣರ ಹಸುಗಳನ್ನು ಕೊಂದ ಪಾಪಕ್ಕೆ ಹೋಗುವವರೆಂಬ ಶಾಪಾಶಯದ ವಾಕ್ಯದಿಂದ ಈ ಶಾಸನ ಅಂತ್ಯವಾಗುತ್ತದೆ.

ಕ್ರಿ.ಶ. ೧೧೬೭ರಲ್ಲಿ ಸೋವಿದೇವ ಎಂಬುವವನು ಕಲ್ಯಾಣದ ಕಲಚೂರಿಗಳ ಬಿಜ್ಜಳನ ನಂತರ ಬಂದ ಅರಸನಾಗಿದ್ದಾನೆ. ಸೋವಿದೇವನನ್ನು ಸೋಮೇಶ್ವರ ಎಂದು ಕರೆಯಲಾಗುತ್ತಿತ್ತೆಂದು ಉಕ್ತವಾಗಿದೆ.[೮೯] ಕ್ರಿ.ಶ. ೧೧೬೩ರಲ್ಲಿ ಆ ಕಾಲಕ್ಕೆ ಸೋವಿದೇವನಿಗಿಂತ ಮುಂಚೆ ವಿಜಯಪಾಂಡ್ಯ, ಸಿಂಧ ವಂಶದ ಬಿಜ್ಜಳದೇವ, ವಿಕ್ರಮದೇವ ಮೊದಲಾದವರು ಕಲ್ಯಾಣ ಚಾಲುಕ್ಯರ ಮನೆತನಕ್ಕೆ ನಿಷ್ಠರಾಗಿ ಆಳ್ವಿಕೆ ನಡೆಸುತ್ತಿದ್ದರು. ಅಲ್ಲದೆ ಚಾಲುಕ್ಯರು ತಮ್ಮ ಸಾರ್ವಭೌಮತ್ವ ಪುನಃ ಪುನರುತ್ಥಾನಗೊಳ್ಳಬಹುದೆಂಬ ಆಕಾಂಕ್ಷೆಗಳನ್ನು ಹೊಂದಿದವರಾಗಿದ್ದರು.[೯೦]

ಒಟ್ಟಾಗಿ ಪ್ರಸ್ತುತ ಶಾಸನವು ಕಲ್ಯಾಣದ ಕಲಚೂರಿಗಳ ಕಾಲದಲ್ಲಿ ರಚಿತಗೊಂಡಿದ್ದು, ಸೋಮೇಶ್ವರನ ಆಳ್ವಿಕೆಗೆ ಒಳಪಟ್ಟಿತ್ತೆಂಬುದು ಸ್ಪಷ್ಟ. ಪುಣ್ಯಕ್ಷೇತ್ರಗಳಾದ ವಾರಣಾಸಿ, ಕುರುಕ್ಷೇತ್ರಗಳ ಬಗ್ಗೆ ಪರಿಚಯವಿತ್ತೆಂದು ತಿಳಿಯುವುದು ಮತ್ತು ಪಂಡಿತರಿಗೆ ಸಮಾಜದಲ್ಲಿ ಉತ್ತಮ ಸ್ಥಾನವಿತ್ತು ಹಾಗೂ ಅರಸರುಗಳು ಶೈವ ಧರ್ಮದ ಪಾಲಕರಾಗಿದ್ದರೆಂದು ಶಾಸನದ ಮೂಲಕ ತಿಳಿದುಬರುತ್ತದೆ.

ಇದೇ ಗ್ರಾಮದ ಬೋಗೇಶ್ವರ ದೇವಾಲಯ ಮುಂಭಾಗದಲ್ಲಿ ಶಾಸನೋಕ್ತ ವೀರಸತಿಗಲ್ಲಿದೆ. ಈ ಶಾಸನವು ಕ್ರಿ.ಶ. ೧೪೦೫ಕ್ಕೆ ಸಂಬಂಧಿಸಿದ್ದು.[೯೧] ವಿಜಯನಗರ ಸಾಮ್ರಾಜ್ಯದ ಸಮಕಾಲೀನದ್ದು. ಶಾಸನದಲ್ಲಿ ಎಳಗೋಡು ಗ್ರಾಮಸ್ಥನಾದ ದಮಣ್ಣಲಿ ನಾಯಕನ ಮಗ ಬೊಮ್ಮಿನಾಯಕಬೀರ ಎಂಬುದಾಗಿ ವಿವರಣೆ ಸಿಗುವುದು.

ಬೊಮ್ಮಿನಾಯಕಬೀರನು ವೀರ ಮರಣ ಹೊಂದಿದ ನಂತರ ಅವನ ಮೂವರೂ ಪತ್ನಿಯರು ಮರಣ ಹೊಂದಿರಬಹುದು. ಅಂದು ಯಳಗೋಡು ಎಂದು ಗುರುತಿಸಿಕೊಂಡಿದ್ದು ಇಂದು ಯಳಗೋಡು ಎಂಬುದಾಗಿ ಬದಲಾವಣೆಗೊಂಡಿದೆ. ಕ್ರಿ.ಶ. ೧೪೦೬ರಲ್ಲಿ ವಿಜಯನಗರ ಸಾಮ್ರಾಜ್ಯದ ಒಂದನೇ ದೇವರಾಯ ಪಟ್ಟಕ್ಕೆ ಬಂದ ಎಂಬುದಾಗಿ ಮೈಸೂರಿನ ಹಾಸನ ಶಾಸನದಲ್ಲಿ ಉಲ್ಲೇಖವಾಗಿದೆ.[೯೨] ಆದ್ದರಿಂದ ಪ್ರಸ್ತುತ ಶಾಸನವು ಇದೇ ಕಾಲದಲ್ಲಿ ರಚಿತಗೊಂಡಿರಬಹುದೆಂದು ಹೇಳಬಹುದು.

ಹಾಯ್ಕಲ್ಲಿನ ಶಾಸನ

ತುರುವನೂರು ಹೋಬಳಿಯ ಬೆಳಗಟ್ಟದಿಂದ ಪೂರ್ವಕ್ಕೆ ೫ ಕಿ.ಮೀ. ದೂರದಲ್ಲಿರುವುದೇ ಹಾಯ್ಕಲ್ ಗ್ರಾಮ. ಈ ಗ್ರಾಮದ ರಾಮಲಿಂಗೇಶ್ವರ ದೇವಾಲಯದ ಮುಂಭಾಗ ಕ್ರಿ.ಶ. ೧೧ನೇ ಶತಮಾನದಲ್ಲಿ ರಚನೆಗೊಂಡಿರಬಹುದಾದ ಶಾಸನೋಕ್ತವೀರಗಲ್ಲಿದೆ. ಇದರಲ್ಲಿ ೨ ಸಾಲುಗಳಿದ್ದು, ಪೂರ್ಣ ಹಳೆಗನ್ನಡ ಅಕ್ಷರಗಳಲ್ಲಿ ರಚಿತಗೊಂಡಿದೆ. ಹಂಪೆ ಮಲ್ಲಮಲಯ

ಗಾವುಂಡ ಚಂಗುಯ್ಯ, ಅಣ್ಣಗಾವುಂಡ ಎಂಬ ಹೆಸರುಗಳು ಶಾಸನದಲ್ಲಿರುವುದನ್ನು ಕಾಣಬಹುದಾಗಿದೆ.[೪೩] ಅಕ್ಷರಗಳು ತುಟಿತಗೊಂಡಿರುವುದರಿಂದ ಇವರು ದೇವಾಲಯಕ್ಕೆ ಏನು ಕೊಟ್ಟರೆಂಬುದು ಅಸ್ಪಷ್ಟವಾಗಿದೆ.

ವೀರಗಲ್ಲಿನಲ್ಲಿ ಮೂರು ಹಂತಗಳಿದ್ದು, ಮೊದಲನೇ ಹಂತದಲ್ಲಿ ಇಬ್ಬರು ವೀರರು ಹೋರಾಟದಲ್ಲಿ ತೊಡಗಿರುವುದು ಮತ್ತು ಎರಡನೇ ಹಂತದಲ್ಲಿ ಚಾಮರಧಾರಿಣಿಯರು ಅದೇ ಈರ್ವರನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ದೃಶ್ಯ ಹಾಗೂ ಮೇಲಿನ ಹಂತದಲ್ಲಿ ಈರ್ವರು ಲಿಂಗವಿನ ಮುಂದೆ ಕುಳಿತುಕೊಂಡು ಧ್ಯಾನ ಮಾಡುತ್ತಿರುವ ದೃಶ್ಯಗಳು ಬಿಂಬಿತಗೊಂಡಿವೆ. ಈ ಆಧಾರದ ಮೇಲೆ ಗಾವುಂಡ ಚಂಗುಯ್ಯ ಮತ್ತು ಅಣ್ಣಗಾವುಂಡ ಇವರೇ ಇರಬೇಕೆಂದು ಊಹಿಸಬಹುದಾಗಿದೆ.

ಇದೇ ಗ್ರಾಮದ ಇನ್ನೊಂದು ಶಾಸನ ಧರ್ಮದ ಕಟ್ಟೆಯ ಬಳಿ ಇದೆ. ಶಾಸನದಲ್ಲಿ ೬ ಸಾಲುಗಳಿದ್ದು ಕ್ರಿ.ಶ. ೧೬-೧೭ನೇ ಶತಮಾನದಲ್ಲಿ ರಚಿತಗೊಂಡಿದೆ. ಶಾಸನದಲ್ಲಿ ವೀರಮದಕರಿಪುರ ಹೊಲ ಮೇರೆಯಿಂದ ಹಾಯ್ಕಲ್ಲಿನ ಗಂಗಯ್ಯನ ಕಟ್ಟೆಯವರೆಗೆ ೫೨೮೦ ಗಜ ದಾರಿ ಇದೆ ಎಂದು ಉಲ್ಲೇಖವಿದೆ.[೪೪] ಶಾಸನದಲ್ಲಿ ಉಲ್ಲೇಖವಾಗಿರುವ ವೀರಮದಕರಿಪುರ ಪ್ರಸ್ತುತ ಬೇಚರಕ್ ಗ್ರಾಮವಾಗಿದೆ.

೫.೩. ವೀರಗಲ್ಲುಗಳು

ಮಾನವನು ಪ್ರಾಚೀನ ಕಾಲದಲ್ಲಿ ತನ್ನ ಚಟುವಟಿಕೆಗಳಲ್ಲಿ ಸ್ಮಾರಕಗಳನ್ನು ನಿರ್ಮಿಸಿ ಕೊಂಡು ಬಂದಿರುತ್ತಾನೆ. ಅಂತವುಗಳಲ್ಲಿ ಶಿಲಾಯುಗದ ಸಮಾಧಿಗಳು ಒಳಗೊಂಡಿವೆ. ಇತಿಹಾಸ ಕಾಲಾವಧಿಯಲ್ಲಿ ಮೌರ್ಯರು ಸ್ತೂಪ, ಸ್ತಂಭ, ಶಾಸನಗಳನ್ನು ಹಾಕಿಸುವುದರ ಮೂಲಕ ಸ್ಮಾರಕಗಳಿಗೆ ಅಡಿಪಾಯ ಹಾಕಿದರು. ವೀರಗಲ್ಲಿನಲ್ಲಿ ಜೊತೆ ಮಾಸ್ತಿಗಲ್ಲನ್ನು ಸೇರಿಸಲಾಗಿದೆ.[೪೫] 'ವೀರ' ಎಂಬ ಪದವು 'ಬೀರ' ಎಂಬುದಾಗಿ ತದ್ಭವ ರೂಪದಲ್ಲಿ ಕರೆಯಲ್ಪಟ್ಟಿದೆ.[೪೬] ಆಂಗ್ಲ ಭಾಷೆಯಲ್ಲಿ 'ಹಿರೋಸ್ಟೋನ್' ಎಂಬ ಪದದ ಬಳಕೆಯಲ್ಲಿದ್ದು, ಹೀಗೆಂದರೆ ಸಾಹಸಿ, ದಕ್ಷತೆ, ಶೌರ್ಯಗುಣವುಳ್ಳವನು ಹಾಗೂ ಯೋಧನೆಂದು ಅರ್ಥೈಸಬಹುದು.[೪೭]

ವೀರನು ಯುದ್ಧದಲ್ಲಿ ಹೋರಾಡಿ ಮರಣ ಹೊಂದಿದ ನೆನಪಿಗಾಗಿ ವೀರಗಲ್ಲನ್ನು ಹಾಕಿಸುತ್ತಿದ್ದರು. ಹಾಗೆಯೇ ವೀರನು ಮರಣ ಹೊಂದಿದನೆಂದು ತನ್ನ ಸತಿಯರು ಚಿತೆಗೆ ಹಾರಿ ಪ್ರಾಣ ಬಿಡುತ್ತಿದ್ದರು. ಈ ನೆನಪಿಗಾಗಿ ನಿರ್ಮಿಸಿದ ಸ್ವರೂಪದ ಕಲ್ಲನ್ನು 'ಮಾಸ್ತಿಗಲ್ಲು' ಎಂದು ಕರೆಯುತ್ತಾರೆ. ವೀರಗಲ್ಲಿನಲ್ಲಿ ಮೂರು, ನಾಲ್ಕು ಕೆಲವೊಮ್ಮೆ ಆರು ಹಂತಗಳನ್ನು ನೋಡಬಹುದು ಹಾಗೂ ಒಬ್ಬ ವೀರನಿರುವ ವೀರಗಲ್ಲುಗಳಿವೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ೧೧ ವೀರಗಲ್ಲುಗಳು ೨ ಮಾಸ್ತಿಗಲ್ಲುಗಳನ್ನು ಕಾಣಬಹುದು. ಇವುಗಳಲ್ಲಿ ೩

[illegible]

ಮತ್ತು ೪ ಹಂತಗಳನ್ನು ಗುರುತಿಸಬಹುದಾಗಿದೆ. ಈ ಎಲ್ಲಾ ವೀರಗಲ್ಲುಗಳು ಪೂಜೆಗೆ ಒಳಗಾಗಿದ್ದು, ದೊಡ್ಡಘಟ್ಟದಲ್ಲಿ ವೀರಗಲ್ಲನ್ನು ಮುಗುಚಿ ಮಲಗಿಸಿದರೆ ಹೆರಿಗೆ ಸರಾಗವಾಗಿ ಆಗಬಹುದೆಂಬ ನಂಬಿಕೆ ಸ್ಥಳೀಯರಲ್ಲಿ ಇದೆ. ಈ ರೀತಿಯಾದ ವೀರಗಲ್ಲುಗಳನ್ನು ಸ್ವವಿವರವಾಗಿ ಪ್ರಸ್ತುತಪಡಿಸಲಾಗಿದೆ.

ಕೂನಬೇವಿನ ವೀರಗಲ್ಲುಗಳು

ಕೂನಬೇವಿನ ಊರ ಬಾವಿ ಹತ್ತಿರ ೩ ವೀರಗಲ್ಲುಗಳನ್ನು ಕಾಣಬಹುದು. ಇವುಗಳು ಕ್ರಿ.ಶ. ೧೧ನೇ ಶತಮಾನದಲ್ಲಿ ಕೆತ್ತಲ್ಪಟ್ಟವೆ[೪೮] ಎಂದು ತಿಳಿದುಬರುತ್ತದೆ. ನಮ್ಮ ಎಡಭಾಗದಿಂದ ೩ನೇಯ ವೀರಗಲ್ಲು ೭ ಅಡಿ ಎತ್ತರವಾಗಿದ್ದು, ಸಂಪೂರ್ಣವಾಗಿ ಅಸ್ಪಷ್ಟವಾಗಿವೆ. ಇನ್ನುಳಿದ ವೀರಗಲ್ಲು ೫ ಅಡಿ ಎತ್ತರ, ೩ ಅಡಿ ಅಗಲದ ಅಳತೆಯಲ್ಲಿ ಕೆತ್ತಲ್ಪಟ್ಟಿವೆ. ಪ್ರತಿಯೊಂದರಲ್ಲಿ ಮೂರು ಹಂತಗಳಿದ್ದು ವೀರನನ್ನು ಶತ್ರುಗಳಿಗಿಂತ ಹೆಚ್ಚು ದಪ್ಪ ಮತ್ತು ಎತ್ತರದಲ್ಲಿ ಕೆತ್ತಿದ್ದಾರೆ. ಆದ್ದರಿಂದ ವೀರನನ್ನು ಗುರುತಿಸುವುದು ಕಷ್ಟವಾಗುವುದಿಲ್ಲ.

ಎಡಭಾಗದಿಂದ ಮೊದಲನೇ ವೀರಗಲ್ಲಿನಲ್ಲಿ ಎರಡು ಹಂತಗಳಿದ್ದು, ಮೇಲಿನ ಹಂತ ಮುರಿದುಹೋಗಿದೆ. ಮೊದಲನೇ ಹಂತದಲ್ಲಿ ವೀರನೊಬ್ಬ ರಣರಂಗದಲ್ಲಿ ನಿಂತಿದ್ದಾನೆ. ಈತನ ಬಲಗೈಯಲ್ಲಿ ಖಡ್ಗವಿದ್ದು, ಶತ್ರುಗಳ ಮೇಲೆ ಕೈಮೇಲೆತ್ತಿದ್ದಾನೆ. ಎಡಗೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡು ಶತ್ರು ಸೈನ್ಯದವರ ರಕ್ಷಣೆ ಪಡೆಯುತ್ತಿರುವಾಗೆ ಕೆತ್ತಿದ್ದಾರೆ. ಈ ವೀರನ ಎದುರಾಳಿಗಳು ಕುದುರೆಯ ಮೇಲೆ ಕುಳಿತುಕೊಂಡು ಭರ್ಚಿಗಳನ್ನು ಎಸೆಯುತ್ತಿರುವ ದೃಶ್ಯ ಕಂಡುಬರುತ್ತದೆ. ಶತ್ರುಗಳು ಎಸೆಯುತ್ತಿರುವ ಭರ್ಚಿಗಳು ವೀರನಿಗೆ ತಾಗಿರುವಾಗೆ ಕಂಡರಿಸಿದ್ದಾರೆ. ಎರಡನೇ ಹಂತದಲ್ಲಿ ವೀರಮರಣ ಹೊಂದಿದ ವೀರನನ್ನು ಅಪ್ಸರೆಯರು ಕರೆದುಕೊಂಡು ಹಾರುತ್ತಿರುವ ದೃಶ್ಯವಿದೆ. ಮೂರನೇ ಹಂತದಲ್ಲಿ ಸ್ವರ್ಗಸ್ತನಾಗಿರುವ ದೃಶ್ಯ ಮುರಿದುಹೋಗಿದೆ.

ಈ ವೀರಗಲ್ಲಿನ ಪಕ್ಕದಲ್ಲಿರುವ ವೀರಗಲ್ಲು ೫ ಅಡಿ ಎತ್ತರ ೩ ಅಡಿ ಅಗಲದಲ್ಲಿ ರಚಿತಗೊಂಡಿದೆ. ಮೊದಲನೇ ಹಂತದಲ್ಲಿ ಎದುರುಬದರು ನಿಂತುಕೊಂಡು ಯುದ್ಧ ಮಾಡುವ ದೃಶ್ಯವಿದೆ. ಇದೇ ಹಂತದಲ್ಲಿ ಎಡಗಡೆ ಇರುವ ವೀರನು ಎಡಗೈಯಲ್ಲಿ ಬಾಕು ಮತ್ತು ಬಲಗೈಯಲ್ಲಿ ಬಿಲ್ಲನ್ನು ಹಿಡಿದು ನಿಂತಿರುವನು. ಎದುರಾಳಿಯು ಎಡಗೈಯಲ್ಲಿ ಬಿಲ್ಲನ್ನು ಹಿಡಿದುಕೊಂಡು ಬಲಗೈಯಿಂದ ಬಾಣವನ್ನು ಬಿಡುತ್ತಿರುವ ದೃಶ್ಯವಿದೆ. ಶತ್ರುಗಳು ಬಿಟ್ಟಂತಹ ಬಾಣಗಳು ವೀರನ ಸೊಂಟವನ್ನು ಮತ್ತು ಕಾಲನ್ನು ಸೀಳಿಕೊಂಡು ಹೊರಬಂದಿರುವಾಗೆ ಕೆತ್ತಿದ್ದಾರೆ. ಈ ಲಕ್ಷಣಗಳನ್ನು ಗಮನಿಸಿದರೆ ವೀರನು ಮರಣಹೊಂದಿದನೆಂದು ಬಾವಿಸಬಹುದು. ೨ನೇಹಂತದಲ್ಲಿ ಮರಣವನ್ನಪ್ಪಿದ ವೀರನನ್ನು ನಾಲ್ವರು ಅಪ್ಸರೆಯರು ಕರೆದುಕೊಂಡು ಹೋಗುತ್ತಿರುವ ದೃಶ್ಯ ಬಿಂಬಿತವಾಗಿದೆ. ಮೇಲಿನ ಹಂತದಲ್ಲಿ ಮಂಟಪವಿದ್ದು, ಅದರಲ್ಲಿ

ಶಿವ-ಪಾರ್ವತಿಯರು ಆಸೀನರಾಗಿದ್ದಾರೆ. ಇವರಿಗೆ ಚಾಮರದಾರಿಣೀಯರು ಚಾಮರವನ್ನು ಬೀಸುತ್ತಿದ್ದಾರೆ. ಪಕ್ಕದಲ್ಲಿ ಪೂಜಾರಿ ಮತ್ತು ಧ್ಯಾನಸಕ್ತನಾದ ವೀರನನ್ನು ಕೆತ್ತಿದ್ದಾರೆ.

ಇದೇ ಗ್ರಾಮದಿಂದ ಕುಕ್ಕವಾಡೇಶ್ವರ ದೇವಾಲಯಕ್ಕೆ ಹೋಗುವ ದಾರಿಯ ಎಡಭಾಗಕ್ಕೆ ಹಾಳೂರು ನೆಲೆಯಿದೆ. ಇಲ್ಲಿ ಒಂದು ವೀರಗಲ್ಲಿದ್ದು, ಮೂರ ಹಂತಗಳಿಂದ ಕೂಡಿದೆ. ಮೊದಲನೇ ಹಂತದಲ್ಲಿ ಕುದುರೆ ಮೇಲೆ ಕುಳಿತುಕೊಂಡು ಭರ್ಚಿ ಹಿಡಿದು ಯುದ್ಧ ಮಾಡುತ್ತಿರುವ ಮತ್ತು ಬಿಲ್ಲು ಬಾಣಗಳನ್ನು ಹಿಡಿದುಕೊಂಡು ಯುದ್ದ ಮಾಡುತ್ತಿರುವ ಕಾಲ್ದಳವನ್ನು ಗಮನಿಸಬಹುದು. ಎರಡನೇ ಹಂತದಲ್ಲಿ ಅಪ್ಸರೆಯರು ಪುಷ್ಪಕ ವಿಮಾನದಲ್ಲಿ ವೀರರನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ದೃಶ್ಯವಿದೆ. ಅಪ್ಸರೆಯರ ಪಕ್ಕ ಚಾಮರದಾರಿಣೀಯರು ಇದ್ದಾರೆ. ೩ನೇ ಹಂತದಲ್ಲಿ ಧ್ಯಾನ ಮಾಡುತ್ತಿರುವ ವೀರ, ಶಿವಲಿಂಗ, ನಂದಿ, ಪೂಜಾರಿಯನ್ನು ಕಂಡರಿಸಿರುವುದು ಕಾಣಬಹುದು. ಈ ವೀರಗಲ್ಲು ಮತ್ತು ಮೇಲಿನ ವೀರಗಲ್ಲುಗಳು ಒಂದೇ ಸ್ವರೂಪದಲ್ಲಿರುವುದರಿಂದ ಕ್ರಿ.ಶ. ೧೦ನೇ ಶತಮಾನಕ್ಕೆ ಸೇರಿಸಬಹುದು.

ಬಾಗೇನಾಳ್‌ನ ವೀರಗಲ್ಲು

ಬಾಗೇನಾಳ್ ಗ್ರಾಮದಲ್ಲಿ ಕ್ರಿ.ಶ. ೯೧೮ರಲ್ಲಿ ರಚಿತಗೊಂಡ ಶಾಸನದ ಪಕ್ಕ ವೀರಗಲ್ಲು ಇದೆ.[೪೯] ಇದು ೫ ಅಡಿ ಉದ್ದ ೨ ಅಡಿ ಅಗಲವುಳ್ಳದ್ದಾಗಿದ್ದು, ಮೂರು ಹಂತಗಳಿಂದ ಕೂಡಿದೆ. ಮೊದಲನೇ ಹಂತದಲ್ಲಿ ಕುದುರೆ ಮೇಲೆ ಕುಳಿತುಕೊಂಡು ಕೈಯಲ್ಲಿ ಭರ್ಚಿ ಹಿಡಿದು ಯುದ್ಧ ಮಾಡುತ್ತಿರುವ ದೃಶ್ಯವಿದೆ. ಜೊತೆಗೆ ಮೊತ್ತೊಬ್ಬ ವೀರನು ಸೊಂಟವನ್ನು ಬಾಗಿಸಿ ಬಿಲ್ಲನ್ನು ಹಿಡಿದು ಬಾಣ ಬಿಡುತ್ತಿದ್ದಾನೆ. ೨ನೇಹಂತದಲ್ಲಿ ಮರಣವನ್ನೊಪ್ಪಿದ ವೀರನನ್ನು ಅಪ್ಸರೆಯರು ಸ್ವರ್ಗಲೋಕಕ್ಕೆ ಕರೆದುಕೊಂಡು ಹೋಗುತ್ತಿರುವುದನ್ನು ಕಾಣಬಹುದು. ೩ನೇ ಹಂತದಲ್ಲಿ ಶಿವಲಿಂಗ, ಪೂಜಾರಿ, ಧ್ಯಾನಸಕ್ತನಾದ ವೀರನನ್ನು ಕಾಣಬಹುದು.

ಹಾಯ್ಕಲ್‌ನ ವೀರಗಲ್ಲು

೧೦ನೇ ಶತಮಾನದಲ್ಲಿ ರಚಿತಗೊಂಡಿರುವ ಶಾಸನೋಕ್ತ ವೀರಗಲ್ಲು ಹಾಯ್ಕಲ್ ಗ್ರಾಮದ ರಾಮಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿವೆ.[೫೦] ಈ ವೀರಗಲ್ಲು ೩ ಅಡಿ ಉದ್ದ ೨ ಅಡಿ ಅಗಲವಿದ್ದು ಮೂರು ಹಂತಗಳಿಂದ ಕೂಡಿದೆ. ಮೊದಲನೇ ಹಂತದಲ್ಲಿ ಮೂವರು ವೀರರು ಬಿಲ್ಲು ಬಾಣ ಹಿಡಿದುಕೊಂಡು ಯುದ್ಧಕ್ಕೆ ಹೋಗುತ್ತಿರುವ ದೃಶ್ಯವಿದೆ. ಎರಡನೇ ಹಂತದಲ್ಲಿ ಈರ್ವರು ಮಾತ್ರ ಮರಣವನ್ನಪ್ಪಿದ್ದು, ಅವರನ್ನು ಅಪ್ಸರೆಯರು ಕರೆದುಕೊಂಡು ಹಾರುತ್ತಿರುವ ದೃಶ್ಯಗಳಿವೆ. ಮೂರನೇ ಹಂತದಲ್ಲಿ ಶಿವಲಿಂಗ, ನಂದಿ, ಕೆತ್ತನೆಗಳಿಲ್ಲದಿರುವುದು ವಿಶೇಷ. ಅದರ ಬದಲಾಗಿ ಮರಣವನ್ನಪ್ಪಿದ ಈರ್ವರು ಪದ್ಮಾಸನದಲ್ಲಿ ಕುಳಿತುಕೊಂಡು ಕೈಗಳಲ್ಲಿ ಪದ್ಮವನ್ನಿಡಿದುಕೊಂಡಿದ್ದಾರೆ. ಪಕ್ಕದಲ್ಲಿ ಚಾಮರದರಣೀಯರು ಗಾಳಿ ಬೀಸುತ್ತಿರುವ ಚಿತ್ರಣವನ್ನು ಕಾಣಬಹುದು. ಈ ಹಂತ ಕೆಳಗಿನ ಪಟ್ಟಿಯಲ್ಲಿ ಎರಡೂ

[illegible]

[illegible]

[illegible]

ಸಾಲುಗಳಲ್ಲಿ ಶಾಸನವಿದ್ದು, ಗಾವುಂಡ ಚಂಗುಯ್ಯ ಮತ್ತು ಅಣ್ಣಗಾವುಂಡನ ಉಲ್ಲೇಖವಿದೆ. ವೀರಗಲ್ಲಿನಲ್ಲಿರುವ ಈರ್ವರು ಇವರೇ ಆಗಿರಬೇಕೆಂದು ತಿಳಿದುಬರುತ್ತದೆ.

ಯಳಗೋಡಿನ ಮಾಸ್ತಿಗಲ್ಲು

ಯಳಗೋಡು ಗ್ರಾಮದ ಕೆರೆ ದಂಡೆಯ ಮೇಲೆ ಭೋಗೇಶ್ವರ ದೇವಾಲಯವಿದ್ದು, ಇದರ ಮುಂಭಾಗದಲ್ಲಿ ಮಾಸ್ತಿಗಲ್ಲು ಇದೆ. ಇದರಲ್ಲಿ ನಾಲ್ಕು ಹಂತವನ್ನು ಗಮನಿಸಬಹುದು. ಮೊದಲನೇ ಹಂತದಲ್ಲಿ ಸತಿಯರು ಬಿಲ್ಲು ಬಾಣವನ್ನು ಹಿಡಿದುಕೊಂಡು ಯುದ್ಧಕ್ಕೆ ಹೋಗುತ್ತಿರುವ ದೃಶ್ಯವಿದೆ. ಎರಡನೇ ಹಂತದಲ್ಲಿ ಈ ಮೂವರು ಕೈಯನ್ನು ಮೇಲಕ್ಕೆ ಎತ್ತಿ ನಿಂತಿದ್ದಾರೆ. ಈ ಸ್ವರೂಪ ಸತಿಪದ್ಧತಿಗೆ ಒಳಗಾಗಿದ್ದಾರೆಂದು ಸೂಚಿಸುತ್ತದೆ. ಆದರೆ ಮೂರನೇ ಹಂತದಲ್ಲಿ ನಾಲ್ಕು ಸತಿಯರು ಕೈಯನ್ನು ಮೇಲಕ್ಕೆ ಎತ್ತಿ ಒಬ್ಬರನ್ನೊಬ್ಬರು ಹಿಡಿದು ಕೊಂಡಿರುವುದು ವಿಶೇಷವಾಗಿದೆ. ನಾಲ್ಕನೇ ಹಂತದಲ್ಲಿ ಪೂಜಾರಿ, ಶಿವಲಿಂಗ, ನಂದಿ ಹಾಗೂ ಒಬ್ಬ ಸತಿಯು ಮಾತ್ರ ಧ್ಯಾನಸಕ್ತಳಾಗಿರುವುದನ್ನು ಕಾಣಬಹುದು. ಇದರ ಮಗ್ಗುಲಿನಲ್ಲಿ ಹಸುವು ಕರುವಿಗೆ ಹಾಲು ಕುಡಿಸುತ್ತಿರುವ ದೃಶ್ಯವನ್ನು ನೋಡಬಹುದು.

ನಾಲ್ಕು ಸತಿಯರ ಪರವಾಗಿ ಒಬ್ಬ ಸತಿಯು ಸ್ವರ್ಗದಲ್ಲಿ ಲೀನವಾಗಿರುವಂತೆ ಕಂಡರಿಸಿರುವುದನ್ನು ಗಮನಿಸಿದಾಗ, ಅಷ್ಟು ಸತಿಯರನ್ನು ಕುಳ್ಳಿರಿಸಲು ಜಾಗದ ಕೊರತೆಯಿಂದ ಇವರೆಲ್ಲರ ಪರವಾಗಿ ಒಬ್ಬ ಸತಿಯನ್ನು ಕಳುಹಿಸಿರುವ ರೀತಿಯಲ್ಲಿ ಕಂಡರಿಸಿದ್ದಾರೆ. ಈ ಸತಿಯರು ಸೊಂಟದಿಂದ ಕೆಳಗಡೆ ವಸ್ತ್ರವನ್ನು ಧರಿಸಿದ್ದು, ಮೇಲ್ಭಾಗಕ್ಕೆ ಯಾವುದೇ ವಸ್ತ್ರ ಧರಿಸಿಲ್ಲ. ಕಾಲ್ಗಡಗ, ಕೈಬಳೆ, ಮೊದಲಾದ ಆಭರಣಗಳನ್ನು ಧರಿಸಿದ್ದಾರೆ. ಈ ಸತಿಗಲ್ಲಿನಲ್ಲಿ ಬೊಮ್ಮಿನಾಯಕ 'ಬೀರ' ಎಂಬ ಉಲ್ಲೇಖವಿದ್ದು, ಬಹುಶಃ ಆ ಸತಿಯು ಈತನ ಪತ್ನಿ ಇರಬೇಕೆಂದು ಊಹಿಸಬಹುದಾಗಿದೆ. ಶಾಸನದ ಆಧಾರದ ಮೇಲೆ ಕ್ರಿ.ಶ. ೧೪೦೫ರಲ್ಲಿ ಕೆತ್ತಲ್ಪಟ್ಟಿದೆ ಎಂದು ಸ್ಪಷ್ಟಪಡಿಸಬಹುದು.[೫೧]

ಕಡಬನಕಟ್ಟೆಯ ತುರುಗೋಳ್ ವೀರಗಲ್ಲು

ಕಡಬನಕಟ್ಟೆಯ ಆಂಜನೇಯ ಸ್ವಾಮಿ ದೇವಾಲಯದ ಹಿಂಭಾಗದಲ್ಲಿ ತುರುಗೋಳ್ ವೀರಗಲ್ಲು ಸಂರಕ್ಷಿಸಲ್ಪಟ್ಟಿದೆ. ಈ ಶಾಸನೋಕ್ತ ವೀರಗಲ್ಲು ೩ ಅಡಿ ಉದ್ದ, ೨ ಅಡಿ ಅಗಲವಿದ್ದು, ಇದರಲ್ಲಿ ಮೂರು ಹಂತಗಳನ್ನು ಕಾಣಬಹುದು. ಮೊದಲನೆ ಹಂತದಲ್ಲಿ ಹಸುಗಳ ಗುಂಪು ಮತ್ತು ಇವುಗಳ ರಕ್ಷಣೆಗಾಗಿ ಹೋರಾಡುತ್ತಿರುವ ವೀರನನ್ನು ತೋರಿಸಿದ್ದಾರೆ. ಈ ವೀರನು ಎಡಗೈಯಲ್ಲಿ ಬಿಲ್ಲನ್ನು ಮತ್ತು ಬಲಗೈಯಲ್ಲಿ ಬಾಣವನ್ನು ಹಿಡಿದುಕೊಂಡು ಗೋಕಳ್ಳರ ವಿರುದ್ಧ ರಣರಂಗದಲ್ಲಿ ನಿಂತಿದ್ದಾನೆ. ಈತನ ಸೊಂಟಕ್ಕೆ ಬಾಕು ಇಡಲು ಕವಚವನ್ನು ಧರಿಸಿದ್ದಾನೆ. ಅಲ್ಲದೆ ಕೊರಳಿನಹಾರ, ಕಿವಿಯೋಲೆ, ಕೈಕಡಗ, ಮೊದಲಾದ ಆಭರಣಗಳನ್ನು ಧರಿಸಿರುವನು. ಈತನ ಎದುರಿಗೆ ಗೋಕಳ್ಳರು ಭರ್ಚಿಯನ್ನು ಹಿಡಿದುಕೊಂಡು

[illegible]

[illegible]

[illegible]

[illegible]

ಸೆಣಸಾಡುತ್ತಿದ್ದಾರೆ. ಎರಡನೇ ಹಂತದಲ್ಲಿ ವೀರನನ್ನು ಅಪ್ಸರೆಯರು ಕರೆದುಕೊಂಡು ಹೋಗುತ್ತಿರುವ ದೃಶ್ಯವಿದೆ. ವೀರನು ಕೈಯಲ್ಲಿ ಸುರಳಿಸುತ್ತಿದ್ದ ವಸ್ತ್ರವನ್ನು ಹಿಡಿದುಕೊಂಡು ಹಾರುತ್ತಿದ್ದಾನೆ. ಮೂರನೇ ಹಂತದಲ್ಲಿ ವೀರನು ಪದ್ಮವನ್ನು ಹಿಡಿದುಕೊಂಡು ಕುಳಿತುಕೊಂಡಿದ್ದಾನೆ. ಈತನ ಅಕ್ಕಪಕ್ಕದಲ್ಲಿ ಚಾಮರದಾರಣೀಯರು ನಿಂತಿದ್ದಾರೆ.

ದೊಡಗಟ್ಟದ ವೀರಗಲ್ಲುಗಳು

ದೊಡ್ಡಗಟ್ಟದ ಆಂಜನೇಯ ದೇವಾಲಯದ ಪಕ್ಕದಲ್ಲಿ ವೀರಗಲ್ಲೊಂದಿದೆ. ಇದು ೩ ಅಡಿ ಉದ್ದ, ೨ ಅಡಿ ಅಗಲವಿದ್ದು ಮೂರು ಹಂತಗಳಿಂದ ಕೂಡಿದೆ. ಮೊದಲನೇ ಹಂತದಲ್ಲಿ ಮೂರು ಕುದುರೆಗಳ ಮೇಲೆ ಭರ್ಜಿಗಳನ್ನು ಹಿಡಿದುಕೊಂಡು ಯುದ್ಧಕ್ಕೆ ಹೋಗುತ್ತಿರುವ ಚಿತ್ರಣವಿದೆ. ಎರಡನೇ ಹಂತದಲ್ಲಿ ಒಬ್ಬ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಮಂಟಪದಲ್ಲಿ ಕರೆದುಕೊಂಡು ಹೋಗುತ್ತಿರುವ ಚಿತ್ರಣವನ್ನು ನೋಡಬಹುದು. ಮೂವರು ವೀರರಲ್ಲಿ ಒಬ್ಬ ವೀರನು ಮಾತ್ರ ಮರಣ ಹೊಂದಿದನೆಂದು ತಿಳಿದುಬರುವುದು. ಮೂರನೇ ಹಂತದಲ್ಲಿ ಪೂಜಾರಿ, ಧ್ಯಾನಾಸಕ್ತನಾದ ವೀರ ಮತ್ತು ಶಿವಲಿಂಗ ಶಿಲ್ಪಗಳನ್ನು ಕಾಣಬಹುದು.

ಇದೇ ದೇವಾಲಯದ ಪಕ್ಕದಲ್ಲಿ ಮತ್ತೊಂದು ವೀರಗಲ್ಲಿದೆ. ಇದು ೩ ಅಡಿ ಉದ್ದ ೧ವರೆ ಅಡಿ ಅಗಲವಿದ್ದು ಮೂರು ಹಂತಗಳಿಂದ ಕೂಡಿದೆ. ಮೊದಲನೇ ಹಂತದಲ್ಲಿ ಮೂರು ವೀರರು ಕುದುರೆಗಳ ಮೇಲೆ ಕುಳಿತುಕೊಂಡು ಖಡ್ಗವನ್ನು ಮೇಲಕ್ಕೆ ಎತ್ತಿದ್ದಾರೆ ಮತ್ತು ಎದುರಿಗೆ ಬಾಣ ಬಿಡುತ್ತಿರುವ ಶತ್ರುಗಳನ್ನು ಕಾಣಬಹುದು. ಎರಡನೇ ಹಂತದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುವ ದೃಶ್ಯವಿದೆ. ಮೂರನೇ ಹಂತದಲ್ಲಿ ಪೂಜಾರಿ, ಶಿವಲಿಂಗ, ಧ್ಯಾನಾಸಕ್ತನಾದ ವೀರನನ್ನು ಕಾಣಬಹುದು.

ಇದೇ ದೇವಾಲಯದ ಪಕ್ಕದಲ್ಲಿ ಇನ್ನೊಂದು ವೀರಗಲ್ಲಿದ್ದು, ೩ ಅಡಿ ಉದ್ದ, ೩ ಅಡಿ ಅಗಲದಿಂದ ಕೂಡಿದೆ. ಇದರಲ್ಲಿ ಮೂರು ಹಂತಗಳನ್ನು ತೋರಿಸಿದ್ದು, ಮೊದಲನೇ ಹಂತದಲ್ಲಿ ವೀರನು ಖಡ್ಗವನ್ನು ಮೇಲಕ್ಕೆ ಎತ್ತಿ ನಿಂತಿದ್ದಾನೆ. ಈತನ ಎದುರಾಳಿ ಕುದುರೆಯ ಮೇಲೆ ಕುಳಿತುಕೊಂಡು ಭರ್ಜಿ ಹಿಡಿದುಕೊಂಡು ಬರುತ್ತಿರುವುದನ್ನು ಕಾಣಬಹುದು. ಹಾಗೂ ಈರ್ವರ ಮಧ್ಯೆ ಮರಣವನ್ನು ಅಪ್ಪಿ ಕೆಳಗೆ ಬಿದ್ದಿರುವ ವೀರನ ಚಿತ್ರಣ ಕಾಣಬಹುದು. ಎರಡನೇ ಹಂತದಲ್ಲಿ ಅಪ್ಸರೆಯರು ವೀರನನ್ನು ಕರೆದುಕೊಂಡು ಹಾರುವ ದೃಶ್ಯವಿದೆ. ಮೂರನೇ ಹಂತದಲ್ಲಿ ಶಿವ-ಪಾರ್ವತಿಯರ ಪಕ್ಕದಲ್ಲಿ ವೀರನು ಧ್ಯಾನಾಸಕ್ತನಾಗಿದ್ದಾನೆ ಹಾಗೂ ಪೂಜಾರಿ ಇರುವಿಕೆಯ ಮೊದಲಾದ ದೃಶ್ಯಗಳು ತೃಟಿತಗೊಂಡಿವೆ.

ಈ ಮೂರು ವೀರಗಲ್ಲುಗಳು ಆಂಜನೇಯ ದೇವಾಲಯದ ಪಕ್ಕದಲ್ಲಿದ್ದರೂ ಭಿನ್ನವಾಗಿವೆ. ಕೆಲವು ಕಪ್ಪು ಶಿಲೆಯಲ್ಲಿ ರಚಿತಗೊಂಡಿದ್ದರೆ, ಇನ್ನೂ ಕೆಲವು ಕೆಂಪು ಮಿಶ್ರಿತ ಕಲ್ಲುಗಳಿಂದ ರಚಿತಗೊಂಡಿವೆ. ಇವುಗಳ ಸ್ವರೂಪವನ್ನು ಮತ್ತು ಕೂನಬೇವಿನಲ್ಲಿರುವ ವೀರಗಲ್ಲುಗಳ ಸ್ವರೂಪಕ್ಕೆ ಹೋಲಿಕೆ ಕೊಟ್ಟರೆ, ಒಂದೇ ಕಾಲದಲ್ಲಿ ರಚಿತಗೊಂಡಿರಬಹುದೆಂದು ಹೇಳಬಹುದು.

ಮುದ್ದಾಪುರದ ವೀರಗಲ್ಲು

ಮುದ್ದಾಪುರದ ಆಂಜನೇಯ ದೇವಸ್ಥಾನದ ಹತ್ತಿರ ಎರಡು ವೀರಗಲ್ಲಿವೆ. ಒಂದು ವೀರಗಲ್ಲು ಮಾತ್ರ ಸ್ಪಷ್ಟವಾಗಿದ್ದು, ಇನ್ನೊಂದು ವೀರಗಲ್ಲು ಅಸ್ಪಷ್ಟವಾಗಿದೆ. ಈ ವೀರಗಲ್ಲುಗಳಲ್ಲಿ ಯಾವದೇ ಹಂತಗಳನ್ನು ತೋರಿಸಿರುವುದಿಲ್ಲ. ವೀರಗಲ್ಲು ೩ ಅಡಿ ಉದ್ದ, ೨ ಅಡಿ ಅಗಲವುಳ್ಳದ್ದಾಗಿದ್ದು, ಒಬ್ಬ ವೀರನನ್ನು ಕಾಣಬಹುದು. ಈ ವೀರನು ಬಲಗೈಯಲ್ಲಿ ಖಡ್ಗವನ್ನು ಮತ್ತು ಎಡಗೈಯಲ್ಲಿ ಬಿಲ್ಲನ್ನು ಹಿಡಿದುಕೊಂಡು ನಿಂತಿದ್ದಾನೆ. ವೀರನ ಸೊಂಟ ಭಾಗ ಒಳಸರದಿದ್ದು ಎದೆಯ ಭಾಗವು ಉಬ್ಬಿದೆ. ಕೈಕಡಗ, ಕಾಲ್ಗಡಗ, ತೋಳುಬಂದಿ, ಕಿವಿಯೋಲೆ ಹಾಗೂ ವಸ್ತ್ರಾಭರಣಗಳನ್ನು ಧರಿಸಿದ್ದಾನೆ. ಈ ವೀರಗಲ್ಲು ಕ್ರಿ.ಶ. ೧೬-೧೭ನೇ ಶತಮಾನದಲ್ಲಿ ರಚಿತಗೊಂಡಿರಬಹುದೆಂದು ತಿಳಿದುಬರುತ್ತದೆ.

ತುರುವನೂರಿನ ವೀರಸತಿಗಲ್ಲು

ತುರುವನೂರು ಗ್ರಾಮದ ಪೊಲೀಸ್ ಠಾಣೆಯ ಹತ್ತಿರ ಇರುವ ಹೊಲದಲ್ಲಿ ಇತ್ತೀಚೆಗೆ ಗರ್ಭಗೃಹವನ್ನು ನಿರ್ಮಿಸಿದ್ದು, ಇದರಲ್ಲಿ ವೀರಸತಿಗಲ್ಲನ್ನು ಸಂರಕ್ಷಿಸಿದ್ದಾರೆ. ಈ ವೀರಗಲ್ಲು ೨ ಅಡಿ ಉದ್ದ, ೨ ಅಡಿ ಅಗಲವಾಗಿದ್ದು, ಗ್ರಾನೈಟ್ ಶಿಲೆಯಿಂದ ರೂಪಗೊಂಡಿದೆ. ಇದರಲ್ಲಿ ವೀರ ಮತ್ತು ಸತಿಯು ನಿಂತಿದ್ದಾರೆ. ವೀರನ ಬಲಗೈಯಲ್ಲಿ ಖಡ್ಗವನ್ನು ಕಾಣಬಹುದು ಸತಿಯು ತನ್ನ ಬಲಗೈಯನ್ನು ಮೇಲಕ್ಕೆತ್ತಿದ್ದು ತನ್ನ ಎಡಗೈಯನ್ನು ಸೊಂಟದ ಪಕ್ಕದಲ್ಲಿರಿಸಿ ರುವಳು. ಈರ್ವರು ಕಿವಿಯೋಲೆ, ಕೈಗಡಗ, ಕಾಲ್ಗಡಗ, ತೋಳುಬಂದಿ ಹಾಗು ವಸ್ತ್ರಾಭರಣಗಳನ್ನು ಧರಿಸಿದ್ದಾರೆ. ಸತಿಯು ಮೊಣಕಾಲಿನಿಂದ ಕೆಳಗೆ ನೆರಿಗೆಯುಳ್ಳ ಸೀರೆಯನ್ನು ಧರಿಸಿದ್ದು, ಮೇಲ್ಭಾಗವು ಬೆತ್ತಲಾಗಿದೆ. ಈ ವೀರಗಲ್ಲು ಕ್ರಿ.ಶ. ೧೬-೧೭ನೇ ಶತಮಾನದಲ್ಲಿ ರಚಿತಗೊಂಡಿರಬಹುದಾಗಿ ತಿಳಿಯುತ್ತದೆ.

೫.೪. ಮೂರ್ತಿಶಿಲ್ಪಗಳು

ಮೂರ್ತಿಶಿಲ್ಪವು ವಾಸ್ತುಶಿಲ್ಪದ ಒಂದು ಭಾಗವಾಗಿ ಬೆಳೆದು ಬಂದಿದೆ. ಕ್ರಿ.ಪೂ. ೩೦೦೦ಕ್ಕಿಂತ ಮುಂಚೆ ಲಿಂಗ, ವೃಷಭ, ನರ್ತಕಿಯರ ವಿಗ್ರಹ, ಮುದ್ರೆಯ ಮೇಲೆ ಪಶುಪತಿ ಯಂತಹ ಶಿಲ್ಪಗಳು ಕಂಡುಬಂದಿವೆ.[೫೨] ವೇದ ಕಾಲದಲ್ಲಿ ಮೂರ್ತಿಗಳನ್ನು ಮರ, ಲೋಹ, ಕಲ್ಲು, ಮಣ್ಣುಗಳಿಂದ ಮತ್ತು ರತ್ನಗಳಿಂದ ತಯಾರು ಮಾಡುತ್ತಿದ್ದರೆಂದು ಹಾಗೂ 'ಕೃತ್ಯ' ಎಂಬ ವಿಗ್ರಹವನ್ನು ಮಾಡುತ್ತಿದ್ದರೆಂಬುದಾಗಿ ತಿಳಿದುಬಂದಿದೆ.[೫೩]

ಪುರಾಣ ಕಾಲದಲ್ಲಿ ವಶಿಷ್ಠ ಋಷಿಮುನಿಗಳು ಮನೆಗಳಲ್ಲಿ ವಿಗ್ರಹಳನ್ನಿಟ್ಟು ಪೂಜಿಸುತ್ತಿದ್ದರೆಂದು ಉಕ್ತವಾಗಿದೆ.[೫೪] ಬೌದ್ಧಧರ್ಮದಲ್ಲಿ ಹೀನಯಾನ ಪಂಥದವರು ಬುದ್ಧನ ಅಸ್ತಿಯನ್ನು ಹಾಗೂ ಚಿಹ್ನೆಗಳನ್ನು ಪೂಜಿಸುತ್ತಿದ್ದರು. ಆದರೆ ಮಹಾಯಾನ ಪಂಥದವರು ಬುದ್ಧನನ್ನು ಮೂರ್ತಿ ರೂಪದಲ್ಲಿ ಪೂಜಿಸಲು ಪ್ರಾರಂಭಿಸಿದರು. ಮೌರ್ಯರು ಆಡಳಿತಕ್ಕೆ ಬಂದಾಗ ಅಶೋಕನು ಬೌದ್ಧ ಧರ್ಮವನ್ನು ಅನುಸರಿಸಿದ ನಂತರ ಸ್ತೂಪಗಳ ನಿರ್ಮಾಣದ

ಜೊತೆಗೆ ತೋರಣಗಳ ಮೇಲೆ, ಸ್ತೂಪದ ಮೇಲೆ ಬೌದ್ಧ ಧರ್ಮದ ಕಥಾನಕ ಶಿಲ್ಪಗಳನ್ನು ರಚನೆ ಮಾಡಿದನು. ಸಾಂಚಿ ಸ್ತೂಪವನ್ನು ಉದಾಹರಣೆಯಾಗಿ ಕೊಡಬಹುದು. ಶಾತವಾಹನರು ಕರ್ನಾಟಕದಲ್ಲಿ ಸ್ವತಂತ್ರವಾಗಿ ಆಳ್ವಿಕೆಯನ್ನು ಪ್ರಾರಂಭಿಸಿದ ನಂತರ ಮೂರ್ತಿಶಿಲ್ಪಕ್ಕೆ ಹೆಚ್ಚು ಕೊಡಗೆ ನೀಡಿದ್ದಾರೆ. ಮುಖ್ಯವಾಗಿ ಚಾರಿತ್ರಿಕ ಕಾಲದ ನೆಲೆಯಾದ ವಡಗಾಂವ್ ಮತ್ತು ಮಾದಾಪುರಗಳಲ್ಲಿ ಮಣ್ಣಿನಿಂದ ಅಲಂಕೃತಗೊಳಿಸಿದ ಗೊಂಬೆಗಳು, ಬುದ್ಧನ ಶಿರೋಭಾಗ, ಗಣೇಶನ ಉಬ್ಬುಚಿತ್ರವುಳ್ಳ ಮೃತ್ಪಾತ್ರೆ ಕಂಚಿನ ವಿಗ್ರಹಗಳು ಉತ್ಖನನಗಳಲ್ಲಿ ದೊರೆತಿವೆ.[೫೫] ಈ ಆಧಾರದ ಮೇರೆಗೆ ಮೂರ್ತಿಶಿಲ್ಪವು ಅತ್ಯಂತ ಪ್ರಾಚೀನವಾಗಿ ಬೆಳೆದು ಬಂದಿದೆ ಎಂದು ಹೇಳಬಹುದು.

ಮೂರ್ತಿಶಿಲ್ಪಕ್ಕೆ ದೇವರುಗಳ ಕಲ್ಪನೆಗೆ ಸಾಂಕೇತಿಕವಾದ ವ್ಯಕ್ತ ಸ್ವರೂಪವೆಂಬ ಅರ್ಥ ಕೊಡಲಾಗಿದೆ.[೫೬] ಇಲ್ಲಿ ಮೂರ್ತಿ ಮತ್ತು ಶಿಲ್ಪಕ್ಕೆ ಅರ್ಥದಲ್ಲಿ ವ್ಯತ್ಯಾಸವೇನಾದರೂ ಇದಿಯಾ? ಎಂದು ಗಮನಿಸುವುದಾದರೆ, ಮೂರ್ತಿ ದೇವರನ್ನು ಪ್ರತಿನಿಧಿಸಿದರೆ ಶಿಲ್ಪವು ಸಾಂಸ್ಕೃತಿಕ ಕಲಾ ಸ್ವರೂಪವನ್ನು ಒಳಗೊಂಡಿರುವುದಾಗಿ ವ್ಯಕ್ತಪಡಿಸಬಹುದು. ಮೂರ್ತಿಶಿಲ್ಪಗಳನ್ನು ಧರ್ಮದ ಆಧಾರದ ಮೇಲೆ ಮತ್ತು ಮಾಧ್ಯಮಗಳ ಆಧಾರದ ಮೇಲೆ ವಿಂಗಡಿಸಲಾಗಿದೆ.[೫೭]

ಪ್ರಸ್ತುತ ಅಧ್ಯಯನದ ಪ್ರದೇಶಗಳಲ್ಲಿ ಶೈವ, ವೈಷ್ಣವ, ಶಾಕ್ತಶಿಲ್ಪಗಳು ಕಂಡುಬಂದಿವೆ. ಶೈವ ಶಿಲ್ಪದಲ್ಲಿ ಶಿವಲಿಂಗ, ಭೈರವ, ಸೂರ್ಯ, ಗಣೇಶ, ಬೇಡರಕಣ್ಣಪ್ಪ, ನಂದಿ ಶಿಲ್ಪಗಳು ಕಂಡುಬರುತ್ತವೆ. ವೈಷ್ಣವ ಶಿಲ್ಪಗಳಲ್ಲಿ ಗರುಡ, ವಿಷ್ಣು, ಬಾಲಕೃಷ್ಣ, ಬಲರಾಮ, ಆಂಜನೇಯ, ನರಸಿಂಹ ಇತ್ಯಾದಿ ಶಿಲ್ಪಗಳು ಕಾಣಿಸುತ್ತವೆ. ಶಾಕ್ತಶಿಲ್ಪಗಳಲ್ಲಿ ಗಜಲಕ್ಷ್ಮಿ, ಸಪ್ತಮಾತೃಕೆ, ಮಹೀಷಮರ್ಧಿನಿ, ಭೈರವಿ, ಮೊದಲಾದ ಶಿಲ್ಪಗಳನ್ನು ಗಮನಿಸಬಹುದು ಇವುಗಳನ್ನು ಅಧ್ಯಯನ ಮಾಡಿ ಕೆಳಗಿನಂತೆ ವಿವರಿಸಲಾಗಿದೆ.

ಶೈವ ಶಿಲ್ಪಗಳು

ಶಿವನನ್ನು ಚನ್ನಮಲ್ಲಿಕಾರ್ಜುನ, ಪಶುಪತಿ, ಮಹೇಶ್ವರ, ರುದ್ರ, ಕಲ್ಲೇಶ್ವರ, ಭೋಗೇಶ್ವರ, ಮುಕ್ಕಣ್ಣೇಶ್ವರ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತಿದೆ. ಶಿವನನ್ನು ಹೆಚ್ಚಾಗಿ ಲಿಂಗವಿನ ರೂಪದಲ್ಲಿ ಪೂಜೆ ಮಾಡುತ್ತಿದ್ದು, ಮೂರ್ತಿ ರೂಪದಲ್ಲಿ ಪೂಜಿಸುವುದು ಕಡಿಮೆ. ಶಿವನನ್ನು ಪೂಜಿಸುವವರನ್ನು ಶೈವ ಪಂಥಕ್ಕೆ ಸೇರಿಸಲಾಗಿದೆ. ಶಿವನ ಲೀಲಾವಳಿಗಳು ಶಿಲ್ಪರೂಪದಲ್ಲಿ ಭಿತ್ತಿಯ ಮೇಲೆ ಕಂಬಗಳ ಮೇಲೆ ಕೆತ್ತಲ್ಪಟ್ಟಿದ್ದಾರೆ.

ಶಿವಲಿಂಗಗಳು

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಶಿವಲಿಂಗಗಳನ್ನು ಕಾಣಬಹುದು. ಇವುಗಳು ಪೂಜೆಗಳಿಗೆ ಒಳಪಟ್ಟಿದ್ದು, ಸಂರಕ್ಷಿಸಲ್ಪಟ್ಟಿವೆ. ತುರುವನೂರಿನಲ್ಲಿ ಮೂರು, ಹಾಯ್ಕಲ್‌ನಲ್ಲಿ ಒಂದು, ಹಿರೇಕಬ್ಬಿಗೆರೆಯಲ್ಲಿ ಎರಡು, ಯಳಗೋಡಿಯಲ್ಲಿ ಎರಡು, ವೀರಮದಕರಿಪುರದಲ್ಲಿ ಒಂದು, ಒಟ್ಟು ೦೯ ಶಿವಲಿಂಗಗಳು ಪ್ರಾಚೀನವಾದವು. ಉಳಿದಂತಹ ಪ್ರದೇಶಗಳಲ್ಲಿಯೂ ಶಿವಲಿಂಗಗಳು

ಕಂಡುಬಂದರೂ ಇವುಗಳಷ್ಟು ಪ್ರಾಚೀನವಲ್ಲ. ಶಿವಲಿಂಗವನ್ನು ಗಂಗಾಧರೇಶ್ವರ, ಕಲ್ಲೇಶ್ವರ, ಭೋಗೇಶ್ವರ, ಚಂದ್ರಮೌಳೇಶ್ವರ, ರಾಮಲಿಂಗ, ರಾಮಲಿಂಗೇಶ್ವರ ಹಾಗೂ ಈಶ್ವರ ಎಂಬ ಹೆಸರುಗಳಿಂದ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಕರೆಯುತ್ತಾರೆ.

ಶಿವಲಿಂಗಗಳಲ್ಲಿ ಬ್ರಹ್ಮಭಾಗ, ವಿಷ್ಣುಭಾಗ, ರುದ್ರಭಾಗ, ಪಾಣಿವಥ್ಥಲು, ಜಲಹರಿಯಂತಹ ಲಕ್ಷಣಗಳಿವೆ. ರುದ್ರಭಾಗವು ಸಿಲೆಂಡರಾಕಾರದಲ್ಲಿದ್ದು ಉರುಟಾಗಿ ರಚನೆಗೊಂಡಿವೆ. ರಾಮಲಿಂಗ, ರಾಮೇಶ್ವರ, ಚಂದ್ರಮೌಳೇಶ್ವರ, ಕಲ್ಲೇಶ್ವರ, ಭೋಗೇಶ್ವರ ಲಿಂಗಗಳ ರುದ್ರ ಭಾಗದಲ್ಲಿ ಸೋಮ ಸೂತ್ರವಿದ್ದು, ಒಂದಕ್ಕಿಂತ ಇನ್ನೊಂದು ಭಿನ್ನವಾಗಿವೆ. ಗಂಗಾಧರೇಶ್ವರ ಮತ್ತು ಈಶ್ವರ ಎಂಬ ಹೆಸರಿನ ಲಿಂಗಗಳಲ್ಲಿ ಪಾಣಿವಥ್ಥಲು ವೃತ್ತಾಕಾರವಾಗಿದ್ದರೆ ಉಳಿದಂತಹ ಶಿವಲಿಂಗಗಳಲ್ಲಿ ಚೌಕಕಾರವಾಗಿವೆ. ಚಂದ್ರಮೌಳೇಶ್ವರ ಶಿವಲಿಂಗಗಳಲ್ಲಿ ವಿಷ್ಣು ಭಾಗವು ಉಳಿದಂತಹ ಶಿವಲಿಂಗಗಳಿಗಿಂತ ಭಿನ್ನವಾಗಿದ್ದು, ಅಧೋಮುಖ ಪದ್ಮದ ಅಲಂಕಾರವನ್ನು ಹೊಂದಿದೆ. ಗಂಗಾಧರೇಶ್ವರ ಶಿವಲಿಂಗವಿನ ವಿಷ್ಣುಭಾಗದಲ್ಲಿ ಒಟ್ಟು ೧೨ ಮುಖಗಳನ್ನು ಕಾಣಬಹುದು. ಇನ್ನು ಉಳಿದಂತವುಗಳಲ್ಲಿ ನಾಲ್ಕು ಮುಖಗಳಿರವುದನ್ನು ಗುರುತಿಸಬಹುದು.

ಯಳಗೋಡಿನಲ್ಲಿರುವ ಕ್ರಿ.ಶ. ೧೧೬೮ನೇ ಶಾಸನದಲ್ಲಿ ಕಲ್ಯಾಣದ ಕಲಚೂರಿಗಳ ದೊರೆ ಸೋವಿದೇವನನ್ನು ಉಲ್ಲೇಖಿಸಿರುವುದರ ಜೊತೆಗೆ, ದೇವಾಲಯಕ್ಕೆ ದಾನಕೊಟ್ಟ ಬಗ್ಗೆ ವಿವರಣೆಯನ್ನು ನೀಡುತ್ತದೆ. ಈ ಆಧಾರದ ಮೇಲೆ ಭೋಗೇಶ್ವರ ದೇವಾಲಯ ಮತ್ತು ಅದರೊಳಗಿರುವಂತಹ ಲಿಂಗವನ್ನು ಆ ಕಾಲಕ್ಕೆ ಕೊಂಡೊಯ್ಯಬಹುದು. ತುರುವನೂರಿನ ರಾಮಲಿಂಗ ದೇವಾಲಯದ ಮುಂಭಾಗ ಮತ್ತು ಹಾಯ್ಕಲ್ಲಿನ ರಾಮಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿರುವ ಶಾಸನಗಳು ಕ್ರಿ.ಶ. ೧೦ನೇ ಶತಮಾನಕ್ಕೆ ಸೇರಿದ್ದವೆಂದು ಸ್ಪಷ್ಟಪಡಿಸಲಾಗಿದೆ. ಆದ್ದರಿಂದ ಈ ದೇವಾಲಯದಲ್ಲಿರುವಂತಹ ಲಿಂಗಗಳು ಅದೇ ಕಾಲಕ್ಕೆ ಸೇರಿವೆ. ಆದರೆ ಹಿರೇಕಬ್ಬಿಗೆರೆಯ ಈಶ್ವರ ದೇವಾಲಯದಲ್ಲಿರುವ ಲಿಂಗವಿಗೂ ಮತ್ತು ಹೊರವಲಯದಲ್ಲಿರುವ ಕಲ್ಲೇಶ್ವರ ಲಿಂಗವಿಗೂ ಹಾಗೂ ತುರುವನೂರಿನ ಚಂದ್ರಮೌಳೇಶ್ವರ ಹಾಗೂ ಗಂಗಾಧರೇಶ್ವರ ಲಿಂಗಗಳಿಗೆ ಶಾಸನೋಕ್ತ ಆಧಾರಗಳಿಲ್ಲದ ಕಾರಣ ಇತ್ತೀಚಿನ ಶಿವಲಿಂಗಗಳಿಗೆ ಹೋಲಿಕೆ ಕೊಡುವುದರಿಂದ ಅವುಗಳು ಪ್ರಾಚೀನವಾದವುಗಳೆಂದು ಹೇಳಬಹುದು.

ನಂದಿಶಿಲ್ಪ

ಶಿವನ ವಾಹನವೇ ನಂದಿ. ಇದನ್ನು ಶಿವಲಿಂಗವಿಗೆ ಅಭಿಮುಖವಾಗಿ ಸ್ಥಾಪಿಸಿ ಪೂಜಿಸುತ್ತಿದ್ದಾರೆ. ಈ ರೀತಿಯಾಗಿ ಪ್ರಾಚೀನವಾದ ಶೈವ ದೇವಾಲಯಗಳಲ್ಲಿ ಮಾತ್ರವಲ್ಲದೆ ಇತ್ತೀಚೆಗೆ ನಿರ್ಮಿತಿಗೊಂಡ ದೇವಾಲಯಗಳಲ್ಲಿಯು ಕಾಣಬಹುದು. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ತುರುವನೂರಿನ ರಾಮಲಿಂಗ, ಹಾಯ್ಕಲ್ಲಿನ ರಾಮಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿ ಕ್ರಿ.ಶ. ೧೦ನೇ ಶತಮಾನದಲ್ಲಿ ರಚಿತಗೊಂಡಿದ್ದಿರಬಹುದಾದ ನಂದಿಶಿಲ್ಪವನ್ನು ಕಾಣಬಹುದು. ಯಳಗೋಡಿನ ಭೋಗೇಶ್ವರ ದೇವಾಲಯದಲ್ಲಿ ಅಂತರಾಳದಲ್ಲಿ ನಂದಿ

ಶಿಲ್ಪವಿದ್ದು, ಶಿವಲಿಂಗ ಸ್ಥಾಪನೆಗೊಂಡಿರುವ ಕಾಲದಲ್ಲಿಯೇ ಸ್ಥಾಪಿತಗೊಂಡಿರಬೇಕು. ಉಳಿದಂತಹ ಪ್ರದೇಶಗಳಲ್ಲಿ ನಂದಿಶಿಲ್ಪವಿದ್ದರೂ ಹೆಚ್ಚು ನಯವಾಗಿದ್ದು, ಅಲಂಕಾರಗಳಿಂದ ಕೂಡಿವೆ. ಆದ್ದರಿಂದ ಇವುಗಳನ್ನು ಇತ್ತೀಚಿನವೆಂದು ಹೇಳಬಹುದು.

ತುರುವನೂರಿನ ರಾಮಲಿಂಗ ದೇವಾಲಯದ ಮುಂಭಾಗದಲ್ಲಿರುವ ನಂದಿಶಿಲ್ಪವು ಹಾಯ್ಕಲಿನ ರಾಮಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿರುವ ನಂದಿಶಿಲ್ಪಕ್ಕಿಂತ ದೊಡ್ಡದಾಗಿದೆ. ಈ ಎರಡು ನಂದಿಶಿಲ್ಪಗಳಲ್ಲಿ ಹಣೆಪಟ್ಟಿ ಕಂಠಹಾರಗಳಿದ್ದು, ಉರುಟಾದ ಕೆತ್ತನೆಗಳಿಂದ ಕೂಡಿವೆ. ಯಳಗೋಡಿನ ಭೋಗೇಶ್ವರ ದೇವಾಲಯದ ಅಂತರಾಳದಲ್ಲಿರುವ ನಂದಿಯು ಇವೆಲ್ಲವುಗಳಿಗಿಂತ ಗಾತ್ರದಲ್ಲಿ ದೊಡ್ಡದಾಗಿದೆ. ಅಂದರೆ, ನಾಲ್ಕು ಅಡಿ ಉದ್ದ ೩ ಅಡಿ ಎತ್ತರವಾಗಿದೆ. ಇದರಲ್ಲಿ ಕಂಠಹಾರವನ್ನು ಕಾಣಬಹುದು. ಈ ಎಲ್ಲಾ ನಂದಿಶಿಲ್ಪಗಳು ಚೌಕಾಕಾರದ ಪೀಠದ ಮೇಲೆ ಆಸೀನವಾಗಿದ್ದು, ಎಡಗಾಲನ್ನು ಮುಂದೆ ಮಡಿಚಿಕೊಂಡು, ಬಲಗಾಲನ್ನು ಹಿಂದಕ್ಕೆ ಎಳೆದುಕೊಂಡಿವೆ. ದೇಹವು ದಷ್ಟಪುಷ್ಟವಾಗಿರುವ ರೀತಿಯಲ್ಲಿ ರಚಿತಗೊಂಡಿವೆ.

ಭೈರವ ಶಿಲ್ಪ

ಬೆಳಗಟ್ಟದಿಂದ ಚಿತ್ರದುರ್ಗಕ್ಕೆ ಹೋಗುವ ದಾರಿಯಲ್ಲಿ ಜಾಲಗಾರ ಗುಡಿ ಸಿಗುತ್ತದೆ. ಇಲ್ಲಿ ಈಶ್ವರ ದೇವಾಲಯದ ಒಳಭಿತ್ತಿಯಲ್ಲಿ ಭೈರವ ಉಬ್ಬು ಶಿಲ್ಪವನ್ನು ಕಾಣಬಹುದು. ಇದು ಸಮಪಾದದಲ್ಲಿ ಸ್ಥಾನಿಕವಾಗಿದೆ. ಈ ಶಿಲ್ಪವು ಕ್ರಿ.ಶ. ೧೬-೧೭ನೇ ಶತಮಾನದಲ್ಲಿ ಕೆತ್ತಲ್ಪಟ್ಟಿದೆ. ಭೈರವ ಶಿಲ್ಪದಲ್ಲಿ ನಾಲ್ಕು ಕೈಗಳಿದ್ದು, ಕೆಳಗಿನ ಬಲಗೈಯಲ್ಲಿ ಖಡ್ಗ, ಮೇಲಿನ ಬಲಗೈಯಲ್ಲಿ ತ್ರಿಶೂಲ, ಕೆಳಗಿನ ಎಡಗೈಯಲ್ಲಿ ರುಂಡ, ಮೇಲಿನ ಎಡಗೈಯಲ್ಲಿ ಡಮರುಗವಿದೆ. ಕಂಠಹಾರ, ಕಾಲ್ಗಡಗ, ಕೈಗಡಗ ಮೊದಲಾದ ಆಭರಣಗಳನ್ನು ಧರಿಸಿದ್ದಾನೆ. ರುಂಡದಿಂದ ಬೀಳುತ್ತಿರುವ ರಕ್ತವನ್ನು ಸವಿಯಲು ನಾಯಿಯು ನಾಲಿಗೆ ಚಾಚಿ ಮೇಲ್ಮುಖ ಮಾಡಿದೆ.

ಸೂರ್ಯನ ಶಿಲ್ಪ

ಈ ಮೇಲಿನ ದೇವಾಲಯದ ಒಳಭಿತ್ತಿಯಲ್ಲಿ ಸಮಪಾದವಾಗಿ ಸ್ಥಾನಿಕವಾಗಿದೆ. ಈ ಶಿಲ್ಪವು ಗ್ರಾನೆಟ್‌ನಲ್ಲಿ ರಚಿತಗೊಂಡಿದ್ದು, ಕ್ರಿ.ಶ. ೧೬-೧೭ನೇ ಶತಮಾನಕ್ಕೆ ಸೇರಿದೆ. ಈ ಶಿಲ್ಪದಲ್ಲಿ ಎರಡು ಕೈಗಳಿದ್ದು, ಪದ್ಮಗಳನ್ನು ಹಿಡಿದುಕೊಂಡಿದ್ದಾನೆ. ಕಂಠಹಾರ, ಮಣಿಸರ, ಕಾಲ್ಗಡಗ ಮೊದಲಾದ ಆಭರಣಗಳನ್ನು ಧರಿಸಿರುವನು. ಈ ಶಿಲ್ಪಕ್ಕೆ ಸುಣ್ಣ ಲೇಪಿಸಿರುವುದರಿಂದ ಅಸ್ಪಷ್ಟವಾಗಿದೆ.

ಗಣೇಶ

ಯಳಗೋಡಿನ ಭೋಗೇಶ್ವರ ದೇವಾಲಯದ ಮುಂಭಾಗ ಬಳಪದ ಕಲ್ಲಿನಿಂದ ತಯಾರುಗೊಂಡ ಗಣೇಶ ಶಿಲ್ಪವಿದ್ದು, ಕ್ರಿ.ಶ. ೧೧-೧೨ನೇ ಶತಮಾನಕ್ಕೆ ಸೇರಿದೆ. ಈ

ಶಿಲ್ಪವು ಆಸೀನವಾಗಿದ್ದು, ೪ ಕೈಗಳನ್ನು ಹೊಂದಿದೆ. ಮೇಲಿನ ಬಲ ಮತ್ತು ಎಡಗೈಯಲ್ಲಿ ದಂತ, ಅಕುಂಶವಿದೆ. ಉಳಿದ ಕೆಳಗಿನ ಕೈಗಳು ಭಗ್ನಗೊಂಡಿರುವುದರಿಂದ ಅಸ್ಪಷ್ಟವಾಗಿ ಕಾಣುವುದು. ಕಿರೀಟ ಮುಕುಟ, ಕಂಠಹಾರವನ್ನು ಧರಿಸಿದ್ದಾನೆ.

ಬೇಡರ ಕಣ್ಣಪ್ಪನ ಶಿಲ್ಪ

ಚಿಕ್ಕಪ್ಪನಹಳ್ಳಿಯ ಈಶ್ವರ ದೇವಾಲಯದ ಕಂಬದ ಮೇಲೆ ಬೇಡರ ಕಣ್ಣಪ್ಪನ ಉಬ್ಬು ಶಿಲ್ಪವನ್ನು ಕಂಡರಿಸಿದ್ದಾರೆ. ಈ ಶಿಲ್ಪವು ಕ್ರಿ.ಶ. ೧೬-೧೭ನೇ ಶತಮಾನಕ್ಕೆ ಸೇರಿದ್ದು, ತ್ರಿಭಂಗಿಯಲ್ಲಿದೆ. ಶಿಲ್ಪದಲ್ಲಿ ಲಿಂಗವಿದ್ದು, ಬೇಡರಕಣ್ಣಪ್ಪನು ತನ್ನ ಎಡಗಾಲನ್ನು ಶಿವಲಿಂಗವಿನ ರುದ್ರಭಾಗದಲ್ಲಿ ಇರಿಸಿದ್ದಾನೆ. ತನ್ನ ಬಲಗೈಯಲ್ಲಿ ಆಯುಧವನ್ನು ಹಿಡಿದುಕೊಂಡು ಕಣ್ಣನ್ನು ಕಿತ್ತುಕೊಳ್ಳುತ್ತಿರುವ ದೃಶ್ಯ ಬಿಂಬಿತಗೊಂಡಿದೆ.

ವೈಷ್ಣವ ಶಿಲ್ಪಗಳು

ವಿಷ್ಣುವಿನ ಅವತಾರಗಳನ್ನು ಆರಾಧನೆ ಮಾಡುವವರು ವೈಷ್ಣವ ಪಂಥದವರು. ಇವರು ಮೂರ್ತಿಶಿಲ್ಪಗಳನ್ನು ಆರಾಧನೆ ಮಾಡುತ್ತಾರೆ. ಬಾದಾಮಿ ಚಾಲುಕ್ಯರ ಗುಹಾಲಯ ಮತ್ತು ರಚನಾತ್ಮಕ ದೇವಾಲಯಗಳಲ್ಲಿ ವೈಷ್ಣವ ಶಿಲ್ಪಗಳನ್ನು ಕಾಣಬಹುದು. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ವೈಷ್ಣವ ಶಿಲ್ಪಗಳು ಕಂಡುಬರುತ್ತವೆ. ಅವುಗಳಲ್ಲಿ ವಿಷ್ಣು, ರಾಮ ಭಕ್ತ ಆಂಜನೇಯ ಮೂರ್ತಿ, ಗರುಡ, ನರಸಿಂಹ ಶಿಲ್ಪಗಳು ಪ್ರಮುಖವು.

ವಿಷ್ಣುವಿನ ಶಿಲ್ಪ

ಈ ಶಿಲ್ಪವು ಬೆಳಗಟ್ಟದ ಜಾಲಗಾರ ಗುಡಿಯ ಈಶ್ವರ ದೇವಾಲಯದ ಒಳಭಿತ್ತಿಯಲ್ಲಿದೆ. ಶಿಲ್ಪವು ಸಮಭಾಗದಲ್ಲಿ ಸ್ಥಾನಿಕವಾಗಿದೆ. ಶಿಲ್ಪವು ಕ್ರಿ.ಶ. ೧೬-೧೭ನೇ ಶತಮಾನದಲ್ಲಿ ರಚಿತಗೊಂಡಿದ್ದು, ಚತುರ್ಭುಜಗಳಿಂದ ಕೂಡಿದೆ. ಅಭಯ ಮುದ್ರೆ ಕೆಳಗಿನ ಬಲಗೈಯಲ್ಲಿದ್ದರೆ, ಮೇಲಿನ ಬಲಗೈಯಲ್ಲಿ ಚಕ್ರವಿದೆ. ಕೆಳಗಿನ ಎಡಗೈಯಲ್ಲಿ ಗಧೆ ಇದ್ದರೆ, ಇನ್ನುಳಿದ ಕೈ ಅಸ್ಪಷ್ಟವಾಗಿದೆ. ಕಿರೀಟ ಮುಕುಟ, ಕಂಠಹಾರ, ಕಾಲ್ಗಡಗ, ಮೊದಲಾದ ಆಭರಣಗಳನ್ನು ಧರಿಸಿದ್ದಾನೆ.

ಗರುಡ ಶಿಲ್ಪ

ತುರುವನೂರಿನ ಆಂಜನೇಯ ದೇವಾಲಯದ ಮುಂಭಾಗದಲ್ಲಿರುವ ದೀಪಸ್ತಂಭದಲ್ಲಿ ಗರುಡ ಶಿಲ್ಪವಿದೆ. ಈ ಶಿಲ್ಪವು ಸಮಪಾದದಲ್ಲಿ ಸ್ಥಾನಿಕವಾಗಿದೆ. ಕ್ರಿ.ಶ. ೧೬-೧೭ನೇ ಶತಮಾನದಲ್ಲಿ ರಚಿತಗೊಂಡಿರುವ ಈ ಶಿಲ್ಪದಲ್ಲಿ ಭಕ್ತನಾಗಿ ಕೈಮುಗಿದು ನಿಂತುಕೊಂಡಿರುವುದು, ಭುಜಗಳಿಗೆ ಅಂಟಿಕೊಂಡಿರುವ ರೆಕ್ಕೆಗಳನ್ನು ಕಾಣಬಹುದು. ಇದನ್ನು ಹೊರತುಪಡಿಸಿದರೆ ಬೆಳಗಟ್ಟದ ಜಾಲಗಾರ ಗುಡಿಯ ಸ್ತಂಭದ ಮೇಲಿರುವ ಗರುಡ ಶಿಲ್ಪವು ಕೈಮುಗಿದುಕೊಂಡು ಹಾರುತ್ತಿರುವಂತೆ ಕಂಡರಿಸಿದ್ದಾರೆ.

ನರಸಿಂಹ ಶಿಲ್ಪ

ಚಿಕ್ಕಪ್ಪನಹಳ್ಳಿಯ ಈಶ್ವರ ದೇವಾಲಯದ ಕಂಭದ ಮೇಲೆ ನರಸಿಂಹನ ಉಬ್ಬು ಕೆತ್ತನೆ ಇದೆ. ತನ್ನ ಎರಡೂ ಕೈಯನ್ನು ಮೊಣಕಾಲಿನ ಮಂಡಿಯ ಮೇಲಿಟ್ಟು ಆಸೀನನಾಗಿದ್ದಾನೆ. ಕಿರೀಟ ಮುಕುಟ, ಕಂಠಹಾರ, ಕೈಕಡಗ, ಕಾಲ್ಗಡಗ, ತೋಳ್ಬಂದಿ, ಮೊದಲಾದ ಆಭರಣಗಳನ್ನು ಧರಿಸಿದ್ದಾನೆ. ಈ ನರಸಿಂಹನ ಶಿಲ್ಪವು ಈಶ್ವರ ದೇವಾಲಯದಲ್ಲಿರುವುದರಿಂದ ಶೈವ ಮತ್ತು ವೈಷ್ಣವರ ನಡುವೆ ಸಾಮರಸ್ಯವಿತ್ತೆಂದು ಕಂಡುಬರುತ್ತದೆ.

ಶಾಕ್ತಶಿಲ್ಪಗಳು

ಸ್ತ್ರೀದೇವತಾ ಶಿಲ್ಪಗಳಿಗೆ ಸಂಬಂಧಿಸಿದ ಶಿಲ್ಪಗಳಾಗಿವೆ. ನಮ್ಮ ಪ್ರಾಚೀನ ಸಂಸ್ಕೃತಿಯ ಕಾಲಾವಧಿಯಲ್ಲಿ ಸ್ತ್ರೀವಿಗ್ರಹಗಳು ಕಂಡುಬರುವುದುನ್ನು ಗಮನಿಸಿದ್ದೇವೆ. ಸ್ತ್ರೀದೇವತೆಗಳಿಗೆ ಶಕ್ತಿ ದೇವತೆಗಳ ರೂಪವನ್ನು ನೀಡಲಾಗಿದ್ದು, ಕರ್ನಾಟಕ ರಾಜಮನೆತನಗಳು ಆರಾಧಿಸುತ್ತಾ ಬಂದಿದ್ದಾರೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿರುವ ದುರ್ಗ ದೇವಾಲಯ ವನ್ನು ಉದಾಹರಣೆಯಾಗಿ ಕೊಡಬಹುದು. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಭೈರವಿ, ಮೈಹೀಷಾಸುರ ಮರ್ಧಿನಿ, ಗಜಲಕ್ಷ್ಮೀ, ಸಪ್ತಮಾತೃಕೆ ಶಿಲ್ಪಗಳನ್ನು ಕಾಣಬಹುದು.

ಭೈರವಿ

ಎಳಗೋಡಿನ ಮಾಚಕಮ್ಮ ದೇವಾಲಯದ ಗರ್ಭಗುಡಿಯಲ್ಲಿ ಪ್ರತಿಷ್ಠಾಪನೆಗೊಂಡಿದೆ. ಈ ಶಿಲ್ಪವು ಸವ್ಯ ಲಲಿತಾಸನದಲ್ಲಿದ್ದು, ನಾಲ್ಕು ಕೈಗಳನ್ನು ಹೊಂದಿದೆ. ಕ್ರಮವಾಗಿ ಖಡ್ಗ, ಪದ್ಮ, ನಾಗ, ಕಪಾಲವನ್ನು ಹಿಡಿದುಕೊಂಡಿದ್ದಾಳೆ. ಕಿರೀಟ, ಪ್ರಭಾವಳಿ, ಕೊರಳಹಾರ, ಕೈಬಳೆ, ತೋಳ್ಭಂದಿ, ಕಾಲ್ಗಡಗ, ಮೊದಲಾದ ಆಭರಣಗಳನ್ನು ಧರಿಸಿರುವಳು. ಈ ಶಿಲ್ಪದಲ್ಲಿ ಸೊಂಟದ ಭಾಗ ಒಳಸರಿದಿರುವುದನ್ನು ಕಾಣಬಹುದು.

ಮಹೀಷಾಸುರ ಮರ್ಧಿನಿ

ಕೂನಬೇವಿನ ಕೋಣಂದೇವಿ ಬೀಳಿನಲ್ಲಿ ಮಹೀಷಾಸುರ ಮರ್ಧಿನಿ ಶಿಲ್ಪ ಕಟ್ಟೆಯ ಮೇಲೆ ಸ್ಥಾಪಿತಗೊಂಡಿದೆ. ಈ ಶಿಲ್ಪವು ಕಪ್ಪುಶಿಲೆಯಲ್ಲಿ ರಚಿತಗೊಂಡಿದ್ದು, ೧೭ನೇ ಶತಮಾನದಲ್ಲಿ ಕೆತ್ತಲ್ಪಟ್ಟಿದೆ. ಮರ್ಧಿನಿಯು ತ್ರಿಭಂಗಿಯಲ್ಲಿದ್ದು, ಎರಡು ಕೈಗಳನ್ನು ಹೊಂದಿದ್ದಾಳೆ. ತ್ರಿಶೂಲ, ಇನ್ನೊಂದು ಕೈಯಲ್ಲಿ ಕೋಣನ ತಲೆಯನ್ನು ಹಿಡಿದಿರುವುದು ಕಾಣಬಹುದು. ತ್ರಿಶೂಲದಿಂದ ಮಹೀಷನನ್ನು ಮರ್ಧಿಸುತ್ತಿರುವ ಸ್ವರೂಪವನ್ನು ಶಿಲ್ಪದಲ್ಲಿ ಸ್ಪಷ್ಟವಾಗಿ ರೂಪಗೊಂಡಿದೆ. ಕಿರೀಟ ಮುಕುಟ, ಕರ್ಣಕುಂಡಲ, ಕಂಠಹಾರ, ಕೈಬಳೆ, ಮೊದಲಾದ ಆಭರಣಗಳನ್ನು ಧರಿಸಿರುವಳು.

ಗಜಲಕ್ಷ್ಮೀ

ಈ ಶಿಲ್ಪವು ದೊಡ್ಡಗಟ್ಟದ ಆಂಜನೇಯ ದೇವಾಲಯದ ಪಕ್ಕದಲ್ಲಿ ಬಿದ್ದಿದೆ. ಈ ಶಿಲ್ಪವು ಕಪ್ಪುಶಿಲೆಯಲ್ಲಿ ರಚಿತಗೊಂಡಿದ್ದು ಕ್ರಿ.ಶ. ೧೦-೧೧ನೇ ಶತಮಾನದಲ್ಲಿ ಕೆತ್ತಲ್ಪಟ್ಟಿದೆ. ಶಿಲ್ಪದಲ್ಲಿ ಗಜಲಕ್ಷ್ಮೀ ಸುಖಾಸೀನದಲ್ಲಿ ಕುಳಿತುಕೊಂಡಿದ್ದು, ಕೈಗಳಲ್ಲಿ ಹೂವಿನ ಮೊಗ್ಗುಗಳನ್ನು

ಹಿಡಿದುಕೊಂಡಿದ್ದಾಳೆ. ಗಜಲಕ್ಷ್ಮೀಗೆ ಆನೆಗಳು ಜಲಾಭಿಷೇಕ ಮಾಡುತ್ತಿವೆ. ಗಜಲಕ್ಷ್ಮಿಯು ಕಂಠಹಾರ, ಕರ್ಣಕುಂಡಲ, ಮಣಿಸರ, ತೋಳುಬಂದಿ, ಕೈಬಳೆ, ಕಟಿವಸ್ತ್ರ, ಕಾಲ್ಗಡಗ, ಪಾದಸರ, ಮೊದಲಾದ ಆಭರಣಗಳನ್ನು ಧರಿಸಿದ್ದಾಳೆ.

ಸಪ್ತಮಾತೃಕೆಯ ಶಿಲ್ಪ

ಈ ಶಿಲ್ಪವು ಬಾಗೇನಾಳಿನ ಕ್ರಿ.ಶ. ೧೧ನೇ ಶತಮಾನದ ಶಾಸನದ ಪಕ್ಕದಲ್ಲಿದೆ. ಈ ಹಿಂದೆ ಶಿಲ್ಪವು ಗುರುತಿಸಿಕೊಂಡಿದೆ.[೫೮] ಮಾತೃಕೆಯರು ಸವ್ಯಲಲಿತಾಸನದಲ್ಲಿ ಕುಳಿತುಕೊಂಡಿದ್ದು, ಸೌಂದರ್ಯವರ್ಧಕ ಹಾಗೂ ಶಕ್ತಿದೇವತೆಗಳಾಗಿದ್ದಾರೆ. ಶಿಲ್ಪದ ಫಲಕವು ಮೂರು ಅಡಿ ಉದ್ದ, ೧ ಅಡಿ ಅಗಲವಿದೆ. ಈ ಫಲಕದಲ್ಲಿ ಕುಮಾರ, ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ಇಂದ್ರಾಣಿ, ಚಾಮುಂಡ, ಗಣೇಶನ ಶಿಲ್ಪಗಳಿವೆ. ಆಯಾ ದೇವತೆಗಳ ಕೆಳಗೆ ವೃಷಭ, ಹಂಸ, ನವಿಲು, ಗರುಡ, ವರಹ, ಆನೆ, ನರಿ, ಮೋಷಕಗಳನ್ನು ಕಾಣಬಹುದು. ಕಂಠಹಾರ, ಪಾದಸರ, ಮಣಿಸರ, ಕೈಬಳೆ, ಕಾಲ್ಗಡಗ, ಮೊದಲಾದ ಆಭರಣಗಳನ್ನು ಧರಿಸಿದ್ದಾರೆ.

೫.೫. ರಕ್ಷಣಾ ವಾಸ್ತುಶಿಲ್ಪ

ಯಾವುದೇ ರೀತಿಯ ಕಟ್ಟಡವನ್ನು ವಾಸ್ತುವೆಂದೂ, ಕಟ್ಟಡದ ನಿಯಮಬದ್ಧ, ಸುಸಂಬದ್ಧ ನಿರ್ಮಾಣದ ಕ್ರಮವನ್ನು ಸ್ಪಷ್ಟೀಕರಿಸುವ ಶಾಸ್ತ್ರವೇ ವಾಸ್ತುಶಿಲ್ಪ.[೫೯] ರಕ್ಷಣೆ ಎಂದರೆ ಶತ್ರುಗಳ ದಾಳಿಯಿಂದ ಕಾಪಾಡಿಕೊಳ್ಳುವಿಕೆ ಎಂದಾದರೆ, ಒಟ್ಟಾರೆ ಸುಸಂಬದ್ಧವಾಗಿ ಕಟ್ಟಡವನ್ನು ರಚನೆ ಮಾಡಿಕೊಂಡು ಅದರಲ್ಲಿ ರಕ್ಷಣೆ ಪಡೆಯುವುದೇ ರಕ್ಷಣಾ ವಾಸ್ತುಶಿಲ್ಪವೆಂದು ಅರ್ಥೈಸಲಾಗಿದೆ. ರಕ್ಷಣಾ ವಾಸ್ತು ಶಿಲ್ಪದಲ್ಲಿ ಕೋಟೆ, ಬುರುಜು, ಬತೇರಿ ಮತ್ತು ಕೋಟೆಯೊಳಗಿನ ಸ್ಮಾರಕ ಶಿಲ್ಪಗಳನ್ನು ಕಾಣಬಹುದು.

ಕೋಟೆಯು ರಾಜಮನೆತನಗಳ ರಕ್ಷಣೆಯಲ್ಲಿ ಪಾತ್ರವಹಿಸುವುದಲ್ಲದೆ. ಪ್ರಮುಖವಾಗಿ ಜೀವಿಸಲಿಕ್ಕೆ ಆಧಾರಗಳಾಗಿದ್ದವು. ಆಯಾಕಟ್ಟಿನ ಪ್ರದೇಶಗಳಲ್ಲಿ ವಿಶಾಲವಾಗಿ ಹಾಗೂ ಬಲಿಷ್ಟವಾಗಿ ನಿರ್ಮಾಣಗೊಂಡ ಗೋಡೆಗಳ ಆವರಣಕ್ಕೆ ಕೋಟೆಗಳೆಂದು ಕರೆಯಲಾಗಿದೆ.[೬೦] ಕೋಟೆ ಎಂಬ ಪದಕ್ಕೆ ದುರ್ಗ, ಪುರಗಳೆಂಬ ಪದಗಳು ಬಳಕೆಯಾಗುತ್ತಿವೆ. "ದುರ್ಗ"ವೆಂದರೆ ಅರಸು ವಾಸ ಮಾಡುವ ಮತ್ತು ಆತನ ಸಂಬಂಧಿಕರು, ಸರದರಾರರು, ರಾಜಪುರೋಹಿತರು ವಾಸ ಮಾಡುವ ಸ್ಥಳವೆಂದೂ, "ಪುರ" ಎಂದರೆ ಅರಸು ವಾಸ ಮಾಡುವ ಸ್ಥಳವೆಂದು ಕರೆಯುತ್ತಾರೆ.[೬೧] ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜನು ತನ್ನ ರಾಜ್ಯದ ಎಲ್ಲೆಯ ನಾಲ್ಕು ದಿಕ್ಕುಗಳಲ್ಲಿ ಶತ್ರುಗಳನ್ನು ತಡೆಗಟ್ಟಲು ಸೂಕ್ತವಾದ ಕೋಟೆಯನ್ನು ಕಟ್ಟಬೇಕೆಂದು ಹೇಳಿದ್ದಾನೆ.[೬೨] ಶುಕ್ರ ನೀತಿಸಾರ, ಕೆಳದಿನೃಪವಿಜಯ, ಚನ್ನಬಸವಪುರಾಣ, ಮೋಹನ ತರಂಗಣಿ ಮೊದಲಾದ ಸಾಹಿತ್ಯ ಕೃತಿಗಳು ಕೋಟೆಯ ನಿರ್ಮಾಣದ ಬಗ್ಗೆ ಮಾಹಿತಿಯನ್ನು ನೀಡುತ್ತವೆ.[೬೩] ದುರ್ಗಗಳಲ್ಲಿ ಜಲದುರ್ಗ, ಸ್ಥಳದುರ್ಗ, ಪಾಷಾಣದುರ್ಗ, ವನದುರ್ಗ, ಇಷ್ಟಕದುರ್ಗ, ಮೃತ್ತಿಕದುರ್ಗ,

ನರದುರ್ಗ, ಮದುದುರ್ಗ ಪ್ರಮುಖವೆನಿಸಿವೆ.[೬೪] ಇವುಗಳಲ್ಲಿ ಗಿರಿದುರ್ಗ, ಸ್ಥಳದುರ್ಗಗಳನ್ನು ಪ್ರಸ್ತುತ ಪ್ರದೇಶದಲ್ಲಿ ಕಾಣಬಹುದು.

ಹರಪ್ಪಾದಲ್ಲಿ ಕಂಡುಬಂದಿರುವ ಕೋಟೆ ಪ್ರದೇಶವು ಹಸಿ ಇಟ್ಟಿಗೆ ಮತ್ತು ಮಣ್ಣಿನಿಂದ ನಿರ್ಮಾಣಗೊಂಡಿದ್ದು, ಭಾರತದ ಪ್ರಾಚೀನ ಕೋಟೆಗಳಲ್ಲಿ ಒಂದಾಗಿದೆ.[೬೫] ಮೌರ್ಯರ ರಾಜಧಾನಿಯಾದ ಪಾಟಲೀಪುತ್ರದ ಬಳಿ ಇರುವ 'ಬುಲು ದಿ ಬಾಘ್' ಎಂಬ ನೆಲೆಯಲ್ಲಿ ಕ್ರಿ.ಶ. ೧೮೯೬ರ ಸಂದರ್ಭದಲ್ಲಿ ನಗರದ ಸುತ್ತಲೂ ಹಾಕಿದ್ದ ಮರದ ದೊಡ್ಡ ದಸಿಬೇಲಿಯ ಅಲ್ಪಸ್ವಲ್ಪ ಅವಶೇಷಗಳು ಸ್ಪೂನರ್ ಶೋಧನೆಯಲ್ಲಿ ದೊರಕಿವೆ.[೬೬] ಈ ರೀತಿಯ ಸ್ವರೂಪವು ಒಂದು ರೀತಿಯ ಕೋಟೆ. ಸನ್ನತಿಯಲ್ಲಿ ಶಾತವಾಹನರ ಕೋಟೆ ಶೋಧನೆಗೊಂಡಿದ್ದು, ಇಟ್ಟಿಗೆಯಿಂದ ನಿರ್ಮಾಣಗೊಂಡಿದೆ.[೬೭] ಬಾದಾಮಿ ಚಾಲುಕ್ಯರು ಕಲ್ಲಿನಿಂದ ಕೋಟೆ ನಿರ್ಮಾಣ ಮಾಡಿರುವುದನ್ನು ಬಾದಾಮಿಯಲ್ಲಿ ಗಮನಿಸಬಹುದು. ಇದು ರಕ್ಷಣಾ ವಾಸ್ತುಶಿಲ್ಪದಲ್ಲಿ ಉತ್ತಮ ಬೆಳವಣಿಗೆ ಎಂದೇ ಹೇಳಬಹುದು. ನಂತರ ಬಂದ ರಾಜಮನೆತನಗಳ ಕಾಲದಲ್ಲಿ ಕೋಟೆಗಳು ನಿರ್ಮಾಣಗೊಂಡು ವಿಜಯನಗರ ಕಾಲಾವಧಿಯಲ್ಲಿ ಉಚ್ಛ್ರಾಯವನ್ನು ಪಡೆಯಿತು. ಪ್ರಸ್ತುತ ಚಿತ್ರದುರ್ಗ ಜಿಲ್ಲಾ ಪರಿಸರದಲ್ಲಿ ಚಿತ್ರದುರ್ಗದ ಪಾಳೆಯಗಾರರು, ಹರತಿ, ಮತ್ತಿನಾಡು, ಹರಪನಹಳ್ಳಿ, ಉಚ್ಚಂಗಿದುರ್ಗ, ಮೊದಲಾದ ಪಾಳೆಯಗಾರರ ಕಾಲದಲ್ಲಿ ಕೋಟೆಕೊತ್ತಲಗಳು ನಿರ್ಮಾಣಗೊಂಡಿವೆ. ಚಿತ್ರದುರ್ಗ ತಾಲ್ಲೂಕಿನ ತುರುವನೂರು ಹೋಬಳಿಯ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಚಿತ್ರದುರ್ಗ ಪಾಳೆಯಗಾರರ ಕೋಟೆ ಕೊತ್ತಲುಗಳನ್ನು ಕಾಣಬಹುದು.

ಕೋಟೆಗಳು

ತುರುವನೂರು ಕೋಟೆ

ಚಿತ್ರದುರ್ಗದಿಂದ ಉತ್ತರಕ್ಕೆ ೨೩ ಕಿ.ಮೀ. ದೂರದಲ್ಲಿರುವುದು, ತುರುವನೂರು ಹೋಬಳಿ ಕೇಂದ್ರ, ಈ ಗ್ರಾಮವು ಪ್ರಾಚೀನತೆಯನ್ನು ಹೊಂದಿತ್ತೆಂದು ಈಗಾಗಲೇ ತಿಳಿದು ಕೊಂಡಿದ್ದೇವೆ. ಇತಿಹಾಸ ಕಾಲಾವಧಿಯಲ್ಲಿ ಕೋಟೆಯ ಅವಶೇಷಗಳು ತುರುವನೂರಿನಲ್ಲಿ ಕಂಡುಬಂದಿರುವುದಾಗಿ ಹೇಳಬಹುದು. ತುರುವನೂರಿನಿಂದ ಮುಸ್ಟೂರಿಗೆ ಹೋಗುವ ರಸ್ತೆಯಲ್ಲಿ ಸರ್ಕಾರಿ ಆಸ್ಪತ್ರೆಯ ಎದುರಿಗೆ ಕೋಟೆ ಗೋಡೆಯು ಮನೆಯ ಗೋಡೆಯ ರೀತಿಯಲ್ಲಿ ಕಂಡುಬರುತ್ತದೆ. ಆದರೆ ಗಾಂಧಿ ಪ್ರತಿಮೆ ಕಡೆಯಿಂದ ನಿಂತು ನೋಡಿದಾಗ ಬುರುಜುಗಳು ಮತ್ತು ಇವುಗಳಿಗೆ ಅಂಟಿಕೊಂಡಿರುವ ಕೋಟೆ ಗೋಡೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಈ ಕೋಟೆಯನ್ನು ೧೭ನೇಶತಮಾನದಲ್ಲಿ ನಿರ್ಮಾಣಮಾಡಿದ್ದು, ಸ್ಥಳ ದುರ್ಗವಾಗಿದೆ. ಕೋಟೆಯು ೯೫ x ೯೫ ಚ.ಮೀ. ವಿಸ್ತೀರ್ಣದಲ್ಲಿ ಚೌಕಾಕಾರವಾಗಿ ನಿರ್ಮಾಣಗೊಂಡಿದೆ.[೬೮] ಈ ಒಂದು ಸುತ್ತಿನ ಕೋಟೆಯಲ್ಲಿ ಪೂರ್ವ ಮತ್ತು ಪಶ್ಚಿಮಕ್ಕೆ ದ್ವಾರಗಳಿವೆ. ಆದರೆ ಪ್ರಸ್ತುತ ಇತ್ತೀಚೆಗೆ ನಿರ್ಮಾಣಗೊಂಡ ಮನೆಗಳಿಂದ ಮುಚ್ಚಿ ಹೋಗಿದೆ. ಕೋಟೆಯ ನಾಲ್ಕು ಮೂಲೆಗಳಲ್ಲಿ ವೃತ್ತಾಕಾರದ ಬುರುಜುಗಳಿದ್ದು, ಕೋಟೆಗೆ ರಕ್ಷಣೆಯನ್ನು ಒದಗಿಸಿವೆ. ಈ ಬುರುಜುಗಳಲ್ಲಿ ಎರಡು ಮಾತ್ರ ಉಳಿದುಕೊಂಡಿದ್ದು, ಪೂರ್ವದಿಕ್ಕಿನಲ್ಲಿ ನೋಡಬಹುದು. ಸುಮಾರು ೩೦ ಅಡಿ ಎತ್ತರ, ೩೦ ಅಡಿ ಅಗಲವನ್ನು ಹೊಂದಿರುವ ಬುರುಜುಗಳಲ್ಲಿ

[illegible]

ಕೋವಿಕಿಂಡಿಗಳನ್ನು ಕಾಣಬಹುದು. ಕೋಟೆಯ ಗೋಡೆಗಳು ೨೫ ಅಡಿ ಎತ್ತರವಾಗಿದ್ದರೆ ಇದಕ್ಕಿಂತ ೫ ಅಡಿ ಎತ್ತರದಲ್ಲಿ ಬುರುಜುಗಳಿವೆ. ಸೈನಿಕರು ಆಯುಧೋಪಕರಣಗಳನ್ನು ಸಂಗ್ರಹಿಸಲು ಬುರುಜಗಳ ಮೇಲೆ ಸ್ಥಳಾವಕಾಶವಿದೆ ಹಾಗೂ ಕಾವಲು ಕಾಯಲು ಅನುಕೂಲಕರವಾದ ವ್ಯವಸ್ಥೆ ಇದೆ. ಕೋಟೆಯ ಗೋಡೆಗಳನ್ನು ಕಲ್ಲು ಚೆಕ್ಕೆಗಳಿಂದ ಮತ್ತು ಮಣ್ಣಿನ ಬಳಕೆಯಿಂದ ನಿರ್ಮಾಣ ಮಾಡಿದ್ದು, ೬ ಅಡಿ ದಪ್ಪದಿಂದ ಕೂಡಿದೆ. ಈ ರೀತಿ ವ್ಯವಸ್ಥೆ ಪಹರೆಗೆ ಅನುಕೂಲ ಮಾಡಿಕೊಟ್ಟಿತ್ತೆಂದು ತಿಳಿಯಬಹುದು.

ಸಿದ್ದವ್ವನದುರ್ಗ

ಹೆಸರೇ ಸೂಚಿಸುವಂತೆ ಸಿದ್ದವ್ವ ಎಂಬುವವಳಿಗೆ ಕೋಟೆ ಕಟ್ಟಿದ್ದರಿಂದ ಸಿದ್ದವ್ವನದುರ್ಗ ಎಂಬ ಹೆಸರು ಬಂದಿರಬೇಕು. ಈ ಕೋಟೆಯು ಗಿರಿದುರ್ಗವಾಗಿದ್ದು ಎತ್ತರ ಪ್ರದೇಶದಲ್ಲಿ ನಿರ್ಮಾಣಗೊಂಡಿದೆ. ಗ್ರಾಮದ ವಾಯುವ್ಯಕ್ಕೆ ಬಿದಿರಕೆರೆಗೆ ಹೋಗುವ ಮಾರ್ಗದಲ್ಲಿ ಕೋಟೆ ಕಂಡುಬರುವುದು. ಗಿರಿಯ ಮೇಲೆ ಎರಡು ಸುತ್ತಿನ ಕೋಟೆ ಚಿತ್ರದುರ್ಗದ ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡಿರಬೇಕೆಂದು ಹೇಳಬಹುದಾಗಿದೆ. ಕೋಟೆಯ ಗೋಡೆಗಳನ್ನು ಕಲ್ಲು ಚೆಕ್ಕೆಗಳಿಂದ ಮತ್ತು ಮಣ್ಣಿನಿಂದ ನಿರ್ಮಾಣ ಮಾಡಿದ್ದಾರೆ. ಕೋಟೆಯ ಪೂರ್ವದಲ್ಲಿ ದ್ವಾರವಿತ್ತೆಂದು ಹಾಗೂ ಸುತ್ತಲೂ ಆಳವಾದ ಕಂದಕವಿರುವುದಾಗಿ ಹೇಳಬಹುದು.[೯] ಕೋಟೆಯಲ್ಲಿ ೧೫ ಅಡಿ ಎತ್ತರ ೨೫ ಅಡಿ ಅಗಲವುಳ್ಳ ಎತ್ತರವಾದ ಬುರುಜನ್ನು ಕಾಣಬಹುದು. ಈ ಬುರುಜು ಸುತ್ತಮುತ್ತಲಿನ ಊರುಗಳಿಂದ ನೋಡಿದರೆ ಅಲ್ಲಿಂದಲೇ ಕಾಣಿಸುತ್ತದೆ. ಆದ್ದರಿಂದ ಕಾವಲು ಗೋಪುರವಾಗಿಯೂ ಕಾರ್ಯನಿರ್ವಹಿಸಿರಬಹುದೆಂದು ವ್ಯಕ್ತಪಡಿಸಬಹುದು. ಸ್ಥಳೀಯರು ಹೇಳುವಂತೆ ಲಿಂಗಾಯತ ಕೇರಿ, ಮ್ಯಾದರಕೇರಿ, ನಾಯಕರಕೇರಿಗಳಿದ್ದವು ಮತ್ತು ದ್ವಾರಬಾಗಿಲಿಗೆ ರಂಗಯ್ಯನಬಾಗಿಲೆಂದು ಕರೆಯುತ್ತಿದ್ದರೆಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.[೧೦] ಕೋಟೆಯು ಸಾಕಷ್ಟು ಶಿಥಿಲವಾಗಿರುವುದರಿಂದ ಹೆಚ್ಚಾಗಿ ಮಾಹಿತಿಯನ್ನು ಪಡೆಯಲು ಸಾಧ್ಯವಾಗಿಲ್ಲ.

ಕಾವಲು ಗೋಪುರಗಳು

ಇವುಗಳು ಬುರುಜಗಳ ರೀತಿಯಲ್ಲಿದ್ದರೂ ಪ್ರತ್ಯೇಕವಾಗಿ ಆಯಕಟ್ಟಿನ ಪ್ರದೇಶದಲ್ಲಿ ನಿರ್ಮಾಣಗೊಂಡಿರುವುದರಿಂದ ಕಾವಲುಗೋಪುರಗಳೆಂದು ಕರೆಯಲಾಗುತ್ತದೆ. ಇಂತಹ ಕಾವಲು ಗೋಪುರಗಳು ವೀರಮದಕರಿಪುರ, ತುರುವನೂರು, ಸಿದ್ದವ್ವನದುರ್ಗ, ಕೂನಬೇವು, ಮೊದಲಾದ ಪ್ರದೇಶಗಳಲ್ಲಿ ಕಾಣಬಹುದು. ಗಿರಿದುರ್ಗದಿಂದ ಸ್ಥಲದುರ್ಗಕ್ಕೆ ಸಂಪರ್ಕಕಲ್ಪಿಸುವಲ್ಲಿ ಕಾವಲು ಗೋಪುರಗಳು ಪ್ರಮುಖ ಪಾತ್ರವಹಿಸಿವೆ.

ವೀರಮದಕರಿಪುರ

ಕ್ರಿ.ಶ. ೧೬ನೇ ಶತಮಾನದ ಶಾಸನದಲ್ಲಿ ವೀರಮದಕರಿಪುರ ಎಂಬ ಹೆಸರು ಉಲ್ಲೇಖಿತಗೊಂಡಿದ್ದು,[೧೧] ಅಲ್ಲದೆ ಪ್ರಸ್ತುತ ಈ ಗ್ರಾಮವು ಬೇಚಾರ ಪ್ರದೇಶವಾಗಿದೆ. ಈ ನೆಲೆಯು ಬೆಳಗಟ್ಟದಿಂದ ಚಿತ್ರದುರ್ಗಕ್ಕೆ ಹೋಗುವ ಮಾರ್ಗದಲ್ಲಿ ಜಾಲಗಾರ ಗುಡಿಯ ಹಿಂಭಾಗದಲ್ಲಿದೆ.

[illegible]

[illegible]

[illegible]

[illegible]

ಈ ಬೇಚಾರ ಗ್ರಾಮದಲ್ಲಿ ಹಲವಾರು ಮನೆಗಳ ಅವಶೇಷಗಳು ಸಿಗುವುದಲ್ಲದೆ, ಲಿಂಗಮುದ್ರೆ ಕಲ್ಲುಗಳನ್ನು ಕಾಣಬಹುದು. ಈ ಗ್ರಾಮದ ರಕ್ಷಣೆಗಾಗಿ ನಿರ್ಮಾಣಗೊಂಡ ಬುರುಜು, ಕಾವಲು ಗೋಪುರಗಳನ್ನು ಸ್ಥಳೀಯರು ಕೋಟೆಯೆಂದೇ ಭಾವಿಸಿದ್ದಾರೆ. ಈ ಕಾವಲು ಗೋಪುರವು ೧೫ ಅಡಿ ಎತ್ತರ, ೨೫ ಅಡಿ ಅಗಲದ ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿದೆ. ಗೋಪುರದ ನಿರ್ಮಾಣಕ್ಕಾಗಿ ಕಲ್ಲು ಚೆಕ್ಕೆಗಳನ್ನು ಬಳಸಿದ್ದಾರೆ. ಗೋಪುರದ ಸುತ್ತಲೂ ಇರುವ ಕಂದಕದ ಮಣ್ಣನ್ನು ಕೋಟೆ ಗೋಡೆ ನಿರ್ಮಾಣದಲ್ಲಿ ಬಳಸಿರಬಹುದೆಂದು ಹೇಳಬಹುದು. ಈ ಗೋಪುರದ ಮೇಲೆ ನಿಂತು ನೈಋತ್ಯಕ್ಕೆ ನೋಡಿದರೆ ಚಿತ್ರದುರ್ಗ ಪಾಳೆಯಗಾರರು ಕಟ್ಟಿದ ಬತೇರಿಗಳು ಕಾಣಿಸುತ್ತವೆ. ಪ್ರಸ್ತುತ ಈ ಗೋಪುರವು ವಿನಾಶದ ಅಂಚಿನಲ್ಲಿದ್ದು, ಅದನ್ನು ಸಂರಕ್ಷಿಸುವ ಅಗತ್ಯತೆ ಇದೆ.

ಕೂನಬೇವು

ತುರುವನೂರಿನಿಂದ ಮೂರು ಕಿ.ಮೀ. ದಕ್ಷಿಣಕ್ಕೆ ಕೂನಬೇವು ಗ್ರಾಮವಿದೆ. ಈ ಗ್ರಾಮದಲ್ಲಿ ಪ್ರಾಚೀನವಾದ ಅವಶೇಷಗಳನ್ನು ಕಾಣಬಹುದು. ಕ್ರಿ.ಶ. ೧೭ನೇ ಶತಮಾನದಲ್ಲಿ ಮರಾಠ ಬಾಜೀರಾಯನಿಗೆ ಹಾಗೂ ಚಿತ್ರದುರ್ಗ ಪಾಳೆಯಗಾರರ ನಡುವೆ ಯುದ್ಧ ನಡೆದ ಸ್ಥಳವಾಗಿದೆ.[೨] ಇದಕ್ಕೆ ಪೂರಕವಾಗಿ ಜಮೀನುದಾರರ ಮನೆಯಲ್ಲಿ ಖಡ್ಗ, ಬಾಕು, ಮೊದಲಾದ ಆಯುಧಗಳಿವೆ. ನಾಯಕರ ಕೇರಿಯಲ್ಲಿ ಬುರುಜು ಇದ್ದು, ೨೦ ಅಡಿ ಅಗಲ, ೧೫ ಅಡಿ ಎತ್ತರದಿಂದ ಕೂಡಿದೆ. ಕಲ್ಲು ಚೆಕ್ಕೆಕಲ್ಲುಗಳಿಂದ ನಿರ್ಮಾಣಗೊಂಡು, ಕಾವಲು ಗೋಪುರವಾಗಿ ಕಾರ್ಯನಿರ್ವಹಿಸಿರಬೇಕು. ಈ ಗೋಪುರವು ಇತ್ತೀಚೆಗೆ ಸ್ಥಳೀಯರಿಂದ ನಾಶಗೊಂಡಿದೆ.

ಈಗಾಗಲೇ ತುರುವನೂರು ಕೋಟೆಯನ್ನು ಮತ್ತು ಸಿದ್ದವ್ವನದುರ್ಗ ಕೋಟೆಯ ವಿವರ ನೀಡುವಾಗ ಬುರುಜುಗಳು ಕಾವಲು ಗೋಪುರಗಳಾಗಿ ಹೇಗೆ ಕಾರ್ಯನಿರ್ವಹಿಸುತ್ತಿದ್ದವೆಂದು ತಿಳಿದುಕೊಂಡಿದ್ದೇವೆ. ಚಿತ್ರದುರ್ಗ ಕೋಟೆಯಿಂದ ಬರುತ್ತಿದ್ದ ಮಾಹಿತಿ ಶಬ್ದದ ಮೂಲಕ ಅಥವಾ ಬಾವುಟವನ್ನು ಹಾರಿಸುವುದರ ಮೂಲಕ ಗೊನೂರು, ವೀರಮದಕರಿಪುರ, ಕೂನಬೇವು, ತುರುವನೂರು ಪ್ರದೇಶಗಳಿಗೆ ಮಾಹಿತಿ ತಲುಪುತ್ತಿತ್ತು. ಇನ್ನೊಂದು ಮಾರ್ಗವಾಗಿ ಮುಸ್ಟೂರು ಮೂಲಕ ಮೊಳಕಾಲ್ಮೂರು ಪ್ರದೇಶಗಳಲ್ಲಿರುವ ಕಾವಲು ಗೋಪುರಗಳಿಗೆ ಮಾಹಿತಿ ತಲುಪುತ್ತಿರಬೇಕೆಂದು ತಿಳಿದುಬರುತ್ತದೆ.

ಟಿಪ್ಪಣಿಗಳು

೧. ಬಾ.ರಾ. ಗೋಪಾಲ್, **ಕರ್ನಾಟಕದ ಕಲೆಗಳು,** ೧೯೯೩, ಪು-೧.

೨. ಲಕ್ಷ್ಮಣ್ ತೆಲಗಾವಿ (ಸಂ), **ಹರಿತಿಸಿರಿ,** ೧೯೮೭, ಪು-೬೧

೩. ತಿಪ್ಪೇರುದ್ರಸ್ವಾಮಿ ಹೆಚ್., **ಕರ್ನಾಟಕ ಸಾಂಸ್ಕೃತಿ ಸಮೀಕ್ಷೆ,** ೨೦೦೭, ಪು-೫೨೩.

೪. ಲಕ್ಷ್ಮಣ್ ತೆಲಗಾವಿ (ಸಂ), **ಪೂರ್ವೋಕ್ತ,** ೧೯೮೭, ಪು-೬೨

೫. ತಿಪ್ಪೇರುದ್ರಸ್ವಾಮಿ ಹೆಚ್., **ಪೂರ್ವೋಕ್ತ,** ೨೦೦೭, ಪು-೫೨೩.

೬. ಬಾ.ರಾ.ಗೋಪಾಲ್, **ಪೂರ್ವೋಕ್ತ,** ೧೯೯೩, ಪು-೧೫೨.

೭. ಕೂ.ಸ. ಅಪರ್ಣ, **ದೇವಾಲಯ ವಾಸ್ತುಶಿಲ್ಪ ಪರಿಚಯ,** ೧೯೯೯, ಪು-೬.

೮. ಅದೇ, ಪು-೭.

೯. ವಾಸುದೇವ್ ಕಾಣೆಮಾರ್, **ಕಲಾ ಪ್ರಕಾರಗಳು,** ೨೦೦೧, ಪು-೩೩, ೩೪.

೧೦. ಅದೇ.,

೧೧. ಶಿವರಾಮಕಾರಂತ, **ಭಾರತೀಯ ಶಿಲ್ಪ,** ೧೯೭೫, ಪು-೧೪, ೧೫.

೧೨. ಶ್ರೀಕಂಠಶಾಸ್ತ್ರಿ ಎಸ್., **ಭಾರತೀಯ ಸಂಸ್ಕೃತಿ,** ೨೦೦೬, ಪು-೨೭೦.

೧೩. ಇಂದುಮತಿ ಪಿ.ಪಾಟೀಲ, **ಪ್ರಾಚೀನ ಭಾರತದ ಇತಿಹಾಸ,** ೨೦೦೬, ಪು-೨೮೧.

೧೪. ಅದೇ,

೧೫. ಶಿಲಾಕಾಂತ ಪತ್ತಾರ್, **ಬಾದಾಮಿ ಸಾಂಸ್ಕೃತಿ ಅಧ್ಯಯನ,** ೨೦೦೨, ಪು-೨೩೪.

೧೬. ಅ. ಸುಂದರ, **ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ,** ೧೯೭೩, ಪು-೫೩.

೧೭. ಬಾ.ರಾ. ಗೋಪಾಲ್, **ಪೂರ್ವೋಕ್ತ,** ೧೯೯೩, ಪು-೧೩.

೧೮. ಶಿಲಾಕಾಂತ ಪತ್ತಾರ್, **ಪೂರ್ವೋಕ್ತ,** ೨೦೦೨, ಪು-೨೩೫.

೧೯. ಶಿವರಾಮಕಾರಂತ, **ಪೂರ್ವೋಕ್ತ,** ೧೯೭೫, ಪು-೯೪.

೨೦. ಜ್ಞಾನಾನಂದ ಜಿ., **ಶಿಲ್ಪದರ್ಶ ಸಂಪುಟ-೨,** ೨೦೦೨, ಪು-೫೧, ೫೨.

೨೧. ಬಾ.ರಾ.ಗೋಪಾಲ್, **ಪೂರ್ವೋಕ್ತ,** ೧೯೯೩, ಪು-೭೬.

೨೨. ಎಂ.ಎ.ಆರ್., ೧೯೪೭-೫೬, ಪು-೩೫.

೨೩. ತಿಪ್ಪೇರುದ್ರಸ್ವಾಮಿ ಹೆಚ್., **ಪೂರ್ವೋಕ್ತ,** ೨೦೦೭, ಪು-೨೩೦.

೨೪. ಮಂಜುನಾಥ ಎಂ. ಮತ್ತು ದೇವರಾಜ್ ಜಿ.ಕೆ., **ಕನ್ನಡ ಲಿಪಿ ವಿಕಾಸ,** ೨೦೦೪,

೨೫. ತಿಪ್ಪೇರುದ್ರಸ್ವಾಮಿ ಹೆಚ್., **ಪೂರ್ವೋಕ್ತ,** ೨೦೦೭, ಪು-೨೩೨.

೨೬. ರಾಜಶೇಖರಪ್ಪ ಬಿ., **ದುರ್ಗಶೋಧನ,** ೨೦೦೧, ಪು-೬.

೨೭. ತಿಪ್ಪೇರುದ್ರಸ್ವಾಮಿ ಹೆಚ್. **ಪೂರ್ವೋಕ್ತ,** ೨೦೦೭, ಪು-೨೩೨.

೨೮. ಮಂಜುನಾಥ ಎಂ. ಮತ್ತು ದೇವರಾಜ್ ಜಿ.ಕೆ., **ಪೂರ್ವೋಕ್ತ,** ೨೦೦೪, ಪು-೧.

೨೯. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿ ಅಧ್ಯಯನ,** ೨೦೦೨, ಪು-೧೬.

೩೦. ಗೋಪಾಲ್ ಆರ್.(ಸಂ), **ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ೨೦೦೮, ಪು-೫೦.

೩೧. ಗೋಪಾಲ್ ಆರ್.(ಸಂ), **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ೨೦೦೫, ಪು-೪೮

೩೨. ಎಂ.ಎ.ಆರ್., ೧೯೪೭-೫೬, ಪು-೩೫.

೩೩. ಗೋಪಾಲ್ ಆರ್.(ಸಂ), **ಪೂರ್ವೋಕ್ತ**, ೨೦೦೫, ಪು-೨೨.

೩೪. ಚಿದಾನಂದಮೂರ್ತಿ ಎಂ., **ಪೂರ್ವೋಕ್ತ**, ೨೦೦೨, ಪು-೩೯೬, ೩೯೭.

೩೫. **ಎ.ಕ. ಸಂ-೧೧ (ಹಳೆಯದು)**, ಚಿತ್ರದುರ್ಗ-೬೨.

೩೬. ರಾಜಶೇಖರಪ್ಪ ಬಿ., **ಇತಿಹಾಸ ಕಥನ**, ೨೦೦೧, ಪು-೧೩೫.

೩೭. ಅದೇ.,

೩೮. **ಎ.ಕ. ಸಂ-೧೧ (ಹಳೆಯದು)**, ಚಿತ್ರದುರ್ಗ-೭೧.

೩೯. ದಿವಾಕರ ಆರ್.ಆರ್., **ಕರ್ನಾಟಕ ಪರಂಪರೆ ಸಂಪುಟ-೧**, ೧೯೯೨ ಪು-೩೫೦.

೪೦. ಅದೇ.,

೪೧. **ಎ.ಕ. ಸಂ-೧೧ (ಹಳೆಯದು)**, ಚಿತ್ರದುರ್ಗ-೭೨.

೪೨. ಸದಾನಂದ ಕನವಳ್ಳಿ(ಅನು), **ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ**, ೨೦೦೮, ಪು-೫೭.

೪೩. **ಎ.ಕ. ಸಂ-೧೧ (ಹಳೆಯದು)**, ಚಿತ್ರದುರ್ಗ-೬೦,

೪೪. **ಎ.ಕ. ಸಂ-೧೧ (ಹಳೆಯದು)**, ಚಿತ್ರದುರ್ಗ-೬೧,

೪೫. ತಿಪ್ಪೇರುದ್ರಸ್ವಾಮಿ ಹೆಚ್., **ಪೂರ್ವೋಕ್ತ**, ೨೦೦೭, ಪು-೨೪೦.

೪೬. ಶೇಷಾಶಾಸ್ತ್ರಿ ಆರ್., **ಕರ್ನಾಟಕದ ವೀರಗಲ್ಲುಗಳು**, ೨೦೦೫, ಪು-೨೫.

೪೭. ಅದೇ.,

೪೮. ಗೋಪಾಲ್ ಆರ್ (ಸಂ)., **ಪೂರ್ವೋಕ್ತ**, ೨೦೦೫, ಪು-೨೩೮.

೪೯. **ಎ.ಕ. ಸಂ-೧೧ (ಹಳೆಯದು)**, ಚಿತ್ರದುರ್ಗ-೬೨,

೫೦. **ಎ.ಕ. ಸಂ-೧೧ (ಹಳೆಯದು)**, ಚಿತ್ರದುರ್ಗ-೬೦,

೫೧. **ಎ.ಕ. ಸಂ-೧೧ (ಹಳೆಯದು)**, ಚಿತ್ರದುರ್ಗ-೭೨.

೫೨. ತಿಪ್ಪೇರುದ್ರಸ್ವಾಮಿ ಹೆಚ್., **ಪೂರ್ವೋಕ್ತ**, ೨೦೦೭, ಪು-೬೨೫.

೫೩. ಶಿವರಾಮಕಾರಂತ, **ಪೂರ್ವೋಕ್ತ**, ೧೯೭೫, ಪು-೬೯.

೫೪. ತಿಪ್ಪೇರುದ್ರಸ್ವಾಮಿ ಹೆಚ್. **ಪೂರ್ವೋಕ್ತ,** ೨೦೦೭, ಪು-೬೨೫.

೫೫. ಲಕ್ಷ್ಮಣ್ ತೆಲಗಾವಿ, **ಮೌರ್ಯ ಮತ್ತು ಶಾತವಾಹನ ಯುಗ,** ೨೦೦೪, ಪು-೧೬೬, ೧೬೭.

೫೬. ತಿಪ್ಪೇರುದ್ರಸ್ವಾಮಿ ಹೆಚ್., **ಪೂರ್ವೋಕ್ತ,** ೨೦೦೭, ಪು-೬೨೫.

೫೭. ಗೋಪಾಲ್ ಆರ್ (ಸಂ). **ಪೂರ್ವೋಕ್ತ,** ೨೦೦೮, ಪು-೧೫೭.

೫೮. **ಜೋಶಿ ಎಂ., ಇಂಡಿಯನ್ ಆರ್ಕಿಯೋಲಾಜಿ** ೧೯೮೮-೮೯, ಎ ರಿವೀವ್, ೧೯೯೯, ಪು-೩೨.

೫೯. **ಗೋಪಾಲ್** ಹೆಚ್.ಎಸ್., **ಇತಿಹಾಸದ ಇಣುಕುನೋಟ,** ೨೦೦೭, ಪು-೧೬.

೬೦. ಲಕ್ಷ್ಮಣ್ ಅಳವಂಡಿ, **ಇತಿಹಾಸಕೋಶ-೨,** ೧೯೯೮, ಪು-೪೪.

೬೧. ಗಿಲ್ಬರ್ಟ್ ಸಿಕ್ವೇರಾ, **ಪೂರ್ವ ಪ್ರಾಚೀನ ಭಾರತದ ಇತಿಹಾಸ,** ೨೦೦೪, ಪು-೮೭.

೬೨. ತಿಪ್ಪೇಸ್ವಾಮಿ ಎಸ್., **ರಕ್ಷಣಾವಾಸ್ತುಶಿಲ್ಪ : ಚಿತ್ರದುರ್ಗ ಜಿಲ್ಲೆ,** ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ, ೨೦೦೪, ಪು-೧೧೧.

೬೩. ಅದೇ.,

೬೪. ಜಯದೇವಿ ಎಂ. ಗಾಯಕವಾಡ, **ಪ್ರಾಚೀನ ಬೌದ್ಧ ವಿದ್ಯಾಕೇಂದ್ರ : ಸನ್ನತಿ,** ೨೦೦೨, ಪು-೨೭.

೬೫. ಗುರುರಾಜಚಾರ್ ಎಸ್. (ಅನು), **ಲೋಥಲ್ ಮತ್ತು ಸಿಂಧೂ ನಾಗರೀಕತೆ,** ೧೯೯೪, ಪು-೧೩.

೬೬. ನಾಗೇಗೌಡ ಹೆಚ್.ಎಲ್., **ಪ್ರವಾಸಿ ಕಂಡ ಇಂಡಿಯಾ (ಸಂಪುಟ-೧),** ೧೯೬೪, ಪು-೩೪.

೬೭. ಜಯದೇವಿ ಎಂ., ಗಾಯಕವಾಡ, **ಪೂರ್ವೋಕ್ತ,** ೨೦೦೨, ಪು-೫೨.

೬೮. ತಿಪ್ಪೇಸ್ವಾಮಿ ಎಸ್., **ಪೂರ್ವೋಕ್ತ,** ೨೦೦೪, ಪು-೨೫೦, ೨೫೧.

೬೯. ಅದೇ, ಪು-೨೫೮.

೭೦. ಅದೇ.

೭೧. **ಎ.ಕ. ಸಂ-೧೧ (ಹಳೆಯದು),** ಚಿತ್ರದುರ್ಗ-೬೧,

೭೨. ಗಿರಿಜಾ ಟಿ., **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ಪು-೯೦.

• • •

ಅಧ್ಯಾಯ : ಆರು

ಉಪಸಂಹಾರ

ಅಧ್ಯಾಯ : ಆರು

ಉಪಸಂಹಾರ

ಚಿತ್ರದುರ್ಗ ಜಿಲ್ಲೆಯ ತುರುವನೂರು ಹೋಬಳಿಯು ಐತಿಹಾಸಿಕವಾಗಿ ಮಹತ್ವವನ್ನು ಪಡೆದುಕೊಂಡಿದೆ. ಉತ್ತರ ಅಕ್ಷಾಂಶ ೭೦°೨೬, ೧೪°೨೪ ಪೂರ್ವ ರೇಖಾಂಶದ ವ್ಯಾಪ್ತಿಯಲ್ಲಿ ತುರುವನೂರು ಹೋಬಳಿಯು ಬರುವುದು. ಭೌಗೋಳಿಕವಾಗಿ ಶ್ರೀಮಂತವಾಗಿರುವ ಪ್ರಸ್ತುತ ಪ್ರದೇಶದಲ್ಲಿ ಕೆರೆಗಳು, ಚಿನ್ನಹಗರಿ, ಹಳ್ಳಕೊಳ್ಳಗಳು, ನೀರಿನಾಸರೆಗಳಾಗಿವೆ. ಇವುಗಳು ಪ್ರಾಚೀನ ಮಾನವನ ವಾಸ ಮಾಡುವುದಕ್ಕಾಗಿ ಯೋಗ್ಯವಾದ ನೆಲೆಯನ್ನು ಒದಗಿಸಿವೆ. ಸಂಗೇನಹಳ್ಳಿ ಕೆರೆಯ ನಡುಗಡ್ಡೆಯಲ್ಲಿ, ಚಿಪ್ಪಿನಕೆರೆಯ ಹಳ್ಳದ ದಂಡೆಯ ಮೇಲೆ ಬೂದಿದಿನ್ನೆಗಳು, ಶೋಧಿತಗೊಂಡಿವೆ. ಹಳ್ಳಗಳ ದಂಡೆಯ ಮೇಲೆ ಆದಿ ಹಳೇಶಿಲಾಯುಗದ ಆಯುಧ, ನವಶಿಲಾಯುಗದ ಆಯುಧ, ಬೃಹತ್‌ಶಿಲಾಯುಗದ ಶಿಲಾ ಸಮಾಧಿಗಳು, ಗೀರುಬಂಡೆ ಚಿತ್ರಗಳು ಹಾಗೂ ಶಾಸನಗಳು, ವೀರಗಲ್ಲುಗಳು ಮತ್ತು ಮೂರ್ತಿಶಿಲ್ಪಗಳು ದೊರಕಿವೆ. ಡೈಕ್, ಆಗೇಟ್, ಜಾಸ್ಫರ್, ಬೆಣಚು ಕಲ್ಲು, ಹಸಿರು ಮಿಶ್ರಿತ ಕೆಂಪು ಕಲ್ಲು ಹೀಗೆ ಮೊದಲಾದ ಶಿಲೆಗಳು ಶಿಲಾಯುಗಗಳಲ್ಲಿ ಮಾನವನು ಆಯುಧಗಳನ್ನು ತಯಾರಿಸಲು ಮತ್ತು ಸಮಾಧಿಗಳನ್ನು ನಿರ್ಮಿಸಲು ಸಹಾಯಕವಾಗಿವೆ. ಆದ್ದರಿಂದ ಈ ರೀತಿಯ ಶಿಲೆಗಳು ಸಿಗುವ ಕಡೆ ಹಾಗೂ ಕೆರೆ ಮತ್ತು ಹಳ್ಳಗಳ ದಂಡೆಯ ಮೇಲೆ ಪುರಾತತ್ವೀಯವಾಗಿ ಶೋಧನೆ ಮಾಡಿದರೆ ಪ್ರಾಚ್ಯ ಅವಶೇಷಗಳು ಸಿಗುತ್ತವೆ.

ಮೌರ್ಯರ ಶಾಸನಗಳು ಬ್ರಹ್ಮಗಿರಿ, ಜಟಿಂಗರಾಮೇಶ್ವರ, ಸಿದ್ದಾಪುರ, ಮಸ್ಕಿ, ಗವಿಮಠ, ನಿಟ್ಟೂರು, ಪ್ರದೇಶಗಳಲ್ಲಿ ಶೋಧನೆಗೊಂಡಿವೆ. ಬ್ರಹ್ಮಗಿರಿ ಶಾಸನವು ಪ್ರಸ್ತುತ ಪ್ರದೇಶದಲ್ಲಿ ಪ್ರಸಿದ್ಧಿಯಾಗಿವೆ. ಈ ಶಾಸನದಲ್ಲಿ 'ದೇವನಾಂಪ್ರಿಯ ಪ್ರಿಯದರ್ಶಿ, ಸುವರ್ಣಗಿರಿ, ಇಸಿಲಾ' ಎಂಬ ಪದಗಳನ್ನು ಉಲ್ಲೇಖಿಸಿದ್ದು, ಹಲವಾರು ಸಂಶೋಧಕರ ಗಮನಸೆಳೆದಿವೆ. ಮಸ್ಕಿ ಶಾಸನದಲ್ಲಿ 'ದೇವನಾಂಪ್ರಿಯ ಪ್ರಿಯದರ್ಶಿ ಅಸೋಕಸ' ಎಂದು ಉಲ್ಲೇಖವಾಗಿದ್ದು, ಪ್ರಿಯದರ್ಶಿ ಯಾರೆಂಬುದಕ್ಕೆ ಉತ್ತರದೊರಕಿದಂತಾಗಿದೆ. ಪ್ರಸ್ತುತ ಅಧ್ಯಯನ ಪ್ರದೇಶದ ಪಕ್ಕದ ಜಗಳೂರು

[illegible]

[illegible]

[illegible]

ತಾಲ್ಲೂಕಿನ ಅಸಗೋಡಿನಲ್ಲಿ ಅಶೋಕನು ತಂಗಿದ್ದನೆಂದು ಉಕ್ತವಾಗಿರುವುದನ್ನು ತಿಳಿದು ಕೊಂಡಿದ್ದೇವೆ. ಅಂದಮೇಲೆ ಅಶೋಕನು ತಂಗಿದ್ದಕ್ಕೆ ವಸತಿನೆಲೆ ಇದೇಯಾ?, ಶಾಸನ ಗಳಿವೇಯಾ? ಅಥವಾ ಮೌಖಿಕ ಆಕಾರವಾಗಿ ಉಳಿದಿದೇಯಾ? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಲು ಸಂಶೋಧನೆಯ ಅಗತ್ಯತೆ ಇದೆ. ಶಾತವಾಹನರು ಮೌರ್ಯರ ನಂತರ ಬಂದವರಾಗಿದ್ದಾರೆ. ಇವರು ಕ್ರಿ.ಪೂ. ೩೨೫ ರಿಂದ ಕ್ರಿ.ಶ. ೨೨೦ರವರೆಗೆ ಆಳ್ವಿಕೆ ಮಾಡಿದ್ದಾರೆ. ಆಂಧ್ರಭೃತ್ಯರೆಂದು ಕರೆಸಿಕೊಂಡಿರುವ ಇವರು, ಚಂದ್ರವಳ್ಳಿನ್ನು ಉಪಕೇಂದ್ರವಾಗಿ ಮಾಡಿಕೊಂಡು ಆಡಳಿತ ನಡೆಸಿದ್ದಾರೆ. ಇಲ್ಲಿ ನಡೆದಂತಹ ಉತ್ಖನನಗಳಿಂದ ಶಾತವಾಹನರ ನಾಣ್ಯಗಳು, ಮಹಾರಥಿಗಳ ನಾಣ್ಯಗಳು ಮತ್ತು ರೋಮನ್ ನಾಣ್ಯಗಳು ಶೋಧನೆಗೊಂಡಿವೆ. ಈ ನೆಲೆಗೆ ಉತ್ತರಕ್ಕೆ ೨೫ ಕಿ.ಮೀ. ದೂರದಲ್ಲಿರುವ ಚಿಪ್ಪಿನಕೆರೆಯ ಬೂದಿ ದಿನ್ನೆಯಲ್ಲಿ ಚುಟು, ಆನಂದ, ಮಹಾರಥಿ ನಾಣ್ಯಗಳು ಹೆಚ್ಚು ದೊರಕಿರುವುದರಿಂದ ಈ ಪ್ರದೇಶವು ಶಾತವಾಹನರಿಗಿಂತ ಅವರ ಮಾಂಡಲಿಕರ ಆಡಳಿತ ಪ್ರಭಾವಕ್ಕೊಳಗಾಗಿತ್ತೆಂದು ಕಂಡುಬರುವುದು. ಸಂಗೇನಹಳ್ಳಿಕೆರೆಯ ನಡುಗಡ್ಡೆಯ ಬೂದಿದಿನ್ನೆಯಲ್ಲಿ ಬಿಳಿವರ್ಣದ ರೇಖೆಯುಳ್ಳ ಹಾಗೂ ಹೊಳಪುಳ್ಳ ಕೆಂಪು ಮತ್ತು ಕಪ್ಪು ಮಡಕೆಚೂರುಗಳು ಪತ್ತೆಗೊಂಡಿವೆ. ತುರುವನೂರಿನಲ್ಲಿ ರಾನೋಮುದನಂದ ಸೀಸದನಾಣ್ಯ ದೊರಕಿರುವುದು ಸರಿಯಷ್ಟೇ. ಆದರೆ ಈ ಪ್ರದೇಶದಲ್ಲಿ ಯಾವುದೇ ವಸತಿ ನೆಲೆಗಳಿಲ್ಲ ಮತ್ತು ಶಾತವಾಹನರ ಮಡಕೆ ಚೂರುಗಳು ಸಿಗುವುದಿಲ್ಲ. ಆದ್ದರಿಂದ ಹತ್ತಿರ ಇರುವ ಸಂಗೇನಹಳ್ಳಿಕೆರೆಯ ಬೂದಿನ್ನೆಯಿಂದ ಅಥವಾ ಚಿಪ್ಪಿನಕೆರೆಯ ಬೂದಿ ದಿನ್ನೆಯಲ್ಲಿ ಕಂಡುಬಂದಿರುವ ನಾಣ್ಯಗಳನ್ನು ಯಾವುದೋ ಸಂದರ್ಭದಲ್ಲಿ ಮಾನವನ ಚಟುವಟಿಕೆಯಲ್ಲಿ ತುರುವನೂರು ಪ್ರದೇಶದಲ್ಲಿ ಬಿದ್ದಿರಬೇಕೆಂದು ಸ್ಪಷ್ಟಪಡಿಸಬಹುದು. ಕದಂಬರು ಕ್ರಿ.ಪೂ. ೪ನೇ ಶತಮಾನದಲ್ಲಿ ಪ್ರಭಾವ ಬೀರಿದ್ದಾರೆಂಬುದಕ್ಕೆ ಚಿತ್ರದುರ್ಗ ಚಂದ್ರವಳ್ಳಿಯಲ್ಲಿರುವ ಮಯೂರ ಶರ್ಮನ ಶಾಸನವೇ ಸಾಕ್ಷಿ. ಈ ಶಾಸನವನ್ನು ಹೊರತುಪಡಿಸಿ ಬೇರೆ ಅವಶೇಷಗಳು ದೊರಕಿಲ್ಲದಿರುವ ಕಾರಣ ಮುಂದಿನ ಸಂಶೋಧನೆಗೆ ವಸ್ತುವಿಷಯವನ್ನು ಒದಗಿಸಿಕೊಟ್ಟಿದೆ. ಕ್ರಿ.ಶ. ೯೭೦ರ ಚಿತ್ರದುರ್ಗದ ಗಂಜಿಗಟ್ಟೆಯ ಶಾಸನದಲ್ಲಿ 'ಶ್ರೀ ಬಿಜಾಜೆ' ಎಂಬ ಪದ ಉಲ್ಲೇಖವಿದೆ. ಈ ಪದ ಬಾದಾಮಿ ಚಾಲುಕ್ಯರ ಲಿಪಿಯಲ್ಲಿರುವುದರಿಂದ ಅವರ ಕಾಲಕ್ಕೆ ಸೇರಿಸಲಾಗಿದೆ. ಬಾದಾಮಿ ಚಾಲುಕ್ಯರು ಕ್ರಿ.ಶ. ೬ರಿಂದ ೮ನೇ ಶತಮಾನದವರೆಗೆ ಆಳ್ವಿಕೆ ಮಾಡಿದ್ದರೆಂಬುದಾಗಿ ಈಗಾಗಲೇ ತಿಳಿದುಕೊಂಡಿದ್ದೇವೆ. ಆದರೆ ಈ ಮೇಲಿನ ಗಂಜಿಗಟ್ಟೆ ಶಾಸನ ಕ್ರಿ.ಶ. ೯೭೦ರವರೆಗೆ ಅವರ ಪ್ರಭಾವವಿತ್ತೆಂದು ತೋರಿಸುತ್ತದೆ ಹಾಗೂ ಬಾದಾಮಿ ಚಾಲುಕ್ಯರಿಗೂ ಪಲ್ಲವರ ನಡುವೆ ನಿರಂತರವಾಗಿ ಚಿತ್ರದುರ್ಗ ಪ್ರದೇಶದಲ್ಲಿ ಕಾದಾಡುತ್ತಿದ್ದರೆಂದು ಉಕ್ತವಾಗಿರುವುದನ್ನು ಗಮನಿಸಿದರೆ ನಿರಂತರ ಕಾದಾಟಕ್ಕೆ ಕಾರಣವೇನು?, ಕಾದಾಡಿದ್ದು ಯಾವ ಸ್ಥಳದಲ್ಲಿ, ಯಾವ ಅರಸರ ನಡುವೆ ಕಾದಾಟವಾಯಿತು?, ಕಾದಾಟದಲ್ಲಿ ಗೆದ್ದವರ್ಯಾರು? ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಈ ಕೊರತೆಯನ್ನು ತುಂಬಿಸಲು ಸಂಶೋಧನೆಗಳಾಗಬೇಕಿದೆ. ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಕೂನಬೇವಿನಲ್ಲಿ ವೀರಗಲ್ಲುಗಳಿವೆ.

ನೊಳಂಬ ಪಲ್ಲವರ ಶಾಸನವೊಂದು ಬಾಗೇನಹಾಳ್, ಹಾಯ್ಕಲ್, ತುರುವನೂರುಗಳಲ್ಲಿದ್ದು, ಪ್ರಕಟಿತಗೊಂಡಿವೆ. ಆದರೆ ಕೂನಬೇವಿನಲ್ಲಿರುವ ಶಾಸನಗಳು ಮತ್ತು ಕಡಬನಕಟ್ಟೆಯಲ್ಲಿರುವ ಗೋಶಾಸನ ಅಪ್ರಕಟಿತವಾಗಿವೆ. ಅಯ್ಯಪ್ಪದೇವನು ಪ್ರಸ್ತುತ ಪ್ರದೇಶವನ್ನು ಆಡಳಿತ ಮಾಡುತ್ತಿದ್ದನೆಂದು ಈ ಮೇಲಿನ ಶಾಸನಗಳಿಂದ ತಿಳಿದುಬಂದಿರುತ್ತದೆ. ಕಲ್ಯಾಣ ಚಾಲುಕ್ಯರ ಶಾಸನವೊಂದು ಚಿತ್ರದುರ್ಗದ ಗಾರೆಹಟ್ಟಿಯಲ್ಲಿದೆ. ಇದರಲ್ಲಿ ಆರನೇ ವಿಕ್ರಮಾದಿತ್ಯನನ್ನು ತ್ರಿಭುವನಮಲ್ಲ ಎಂದು ಕರೆದಿರುವುದು ಕಂಡುಬಂದಿದೆ. ಕಲ್ಯಾಣದ ಕಲಚೂರಿಗಳು ಚಾಲುಕ್ಯರ ನಿಷ್ಠರಾಗಿದ್ದು, ಕ್ರಿ.ಶ. ೧೧೬೮ರ ಶಾಸನವೊಂದು ಯಳಗೋಡಿನ ಹೊರವಲಯದಲ್ಲಿದೆ. ಇದರಲ್ಲಿ ಚಾಲುಕ್ಯರ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಭೋಗೇಶ್ವರ ದೇವಾಲಯಕ್ಕೆ ದಾನ ನೀಡಿದ ಬಗ್ಗೆ ವಿವರಣೆಗಳಿವೆ. ಅಲ್ಲದೆ ಕಲಚೂರಿಗಳ ಅರಸ ಸೋವಿದೇವನನ್ನು ಉಲ್ಲೇಖಿಸಿದೆ. ಹೊಯ್ಸಳರ ದೇವಾಲಯವೊಂದು ಪಕ್ಕದ ಕಲ್ಲೇದೇವರಪುರದಲ್ಲಿದ್ದು, ಈ ದೇವಾಲಯದಲ್ಲಿರುವ ಒಂದು ಶಾಸನ ಸೋಮೇಶ್ವರ ಗಂಗವಾಡಿ ೯೬೦೦೦ ಸಾವಿರ ಮತ್ತು ೩೨೦೦೦ ಸಾವಿರ ನೊಳಂಬವಾಡಿಯನ್ನು ಆಳುತ್ತಿದ್ದನೆಂದು ಉಕ್ತವಾಗಿದೆ. ಕ್ರಿ.ಶ. ೧೪೦೫ರ ಶಾಸನವೊಂದು ಯಳಗೋಡಿನ ಭೋಗೇಶ್ವರ ದೇವಾಲಯದ ಮುಂಭಾಗದಲ್ಲಿದ್ದು, ಇದು ವಿಜಯನಗರ ಕಾಲದ್ದಾಗಿದೆ. ಕ್ರಿ.ಶ. ೧೫ನೇ ಶತಮಾನದ ನಂತರ ಪಾಳೆಯಗಾರರ ಮೂಲಕ ವಿಜಯನಗರದ ಅರಸರು ಚಿತ್ರದುರ್ಗ ಜಿಲ್ಲಾ ಪ್ರದೇಶವನ್ನು ಪರೋಕ್ಷವಾಗಿ ಆಳ್ವಿಕೆ ಮಾಡಲು ಪ್ರಾರಂಭಿಸಿದರು. ಚಿತ್ರದುರ್ಗದ ಪ್ರದೇಶದ ಸುತ್ತಮುತ್ತ ಏಳು ಪಾಳೆಯ ಪಟ್ಟುಗಳು ಕ್ರಿ.ಶ. ೧೫೫೮ ರಿಂದ ೧೭೭೯ ರವರೆಗೆ ಅಧಿಕಾರದಲ್ಲಿದ್ದರು. ಇವರ ಕಾಲದಲ್ಲಿ ರಚಿತಗೊಂಡಿರಬಹುದಾದ ಕೋಟೆಗಳು ದೇವಾಲಯಗಳು, ಕಾವಲುಗೋಪುರಗಳು, ಬಾಗಿಲುಗಳು, ಪ್ರಾಚ್ಯ ಅವಶೇಷಗಳಾಗಿ ಉಳಿದುಕೊಂಡಿವೆ. ಇವುಗಳು ಯಾವ ಪಾಳೆಯಗಾರರ ಅಥವಾ ಯಾವ ಅರಸರ ಕಾಲದಲ್ಲಿ ರಚಿತಗೊಂಡಿದ್ದಾವೆಂದು ವಿಶ್ಲೇಷಿಸುವ ಕೆಲಸ ಆಗಬೇಕಿದೆ. ಕ್ರಿ.ಶ. ೧೭೭೬ರಲ್ಲಿ ಕೂನಬೇವು ಪ್ರದೇಶದಲ್ಲಿ ಮರಾಠರಿಗೂ ಮತ್ತು ಪಾಳೆಯ ಗಾರರಿಗೂ ಕದನವಾಗಿತ್ತೆಂದು ಉಲ್ಲೇಖಿಸಿರುವುದನ್ನು ಗಮನಿಸಿದರೆ, ಯುದ್ಧ ನಡೆದ ಸ್ಥಳ ಯಾವುದು?, ಯುದ್ದ ಮಾಡುವುದಕ್ಕೆ ಕಾರಣವೇನು?, ಯುದ್ದ ನಡೆಯುವುದಕ್ಕೆ ಕೂನಬೇವು, ಆಯಾಕಟ್ಟಿನ ಪ್ರದೇಶವಾಗಿತ್ತೇ? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಿ ಯುದ್ಧದ ಸಂಪೂರ್ಣ ಮಾಹಿತಿಯನ್ನು ಒದಗಿಸುವ ಸಂಶೋಧನೆಗೆ ಅವಕಾಶವನ್ನು ಒದಗಿಸಿದೆ. ಚಿತ್ರದುರ್ಗ ಪಾಳೆಯಗಾರರ ಮೇಲೆ ಕ್ರಿ.ಶ. ೧೭೭೯ರಲ್ಲಿ ಹೈದರ್ ಮತ್ತು ಟಿಪ್ಪು ದಾಳಿ ಮಾಡಿ ಕೋಟೆಯನ್ನು ವಶಪಡಿಸಿಕೊಂಡರು ಈ ಮೂಲಕ ಈ ಪ್ರದೇಶದ ಮೇಲೆ ಹೈದರ್ ಮತ್ತು ಟಿಪ್ಪು ಪ್ರಭಾವ ಬೀರಿದ್ದಾರೆ. ರಾಜಮಹಾರಾಜರ ಆಡಳಿತಕ್ಕೆ ಪ್ರಭಾವಿತವಾಗಿರದೆ ಸ್ವಾತಂತ್ರ್ಯ ಚಳುವಳಿಗೂ ಕೂಡ ಪ್ರಸಿದ್ಧಿಗೊಂಡ ಪ್ರದೇಶವಾಗಿದೆ. ಕ್ರಿ.ಶ. ೧೯೩೯ರಲ್ಲಿ ತುರುವನೂರಿನಲ್ಲಿ ಅರಣ್ಯ ಸತ್ಯಾಗ್ರಹ ಚಳುವಳಿಯಾಗಿದ್ದನ್ನು ಗಮನಿಸಿದ್ದೇವೆ. ಈ ಆಧಾರವಾಗಿ ಕಂಚಿನ ಗಾಂಧಿ ಪ್ರತಿಮೆಯನ್ನು ಪ್ರಸ್ತುತ ಪ್ರದೇಶದಲ್ಲಿ ಕಾಣಬಹುದು.

ಪ್ರಾಚೀನವಾದ, ಅಲಿಖಿತ ಅವಶೇಷಗಳನ್ನು ಹಾಗೂ ಪಳಿಯುಳಿಕೆಗಳು ಸಿಗುವ ಕಾಲವೇ ಪ್ರಾಗಿತಿಹಾಸ ಕಾಲ. ಈ ಕಾಲಘಟ್ಟದಲ್ಲಿ ಹಳೇಶಿಲಾಯುಗ, ಸೂಕ್ಷ್ಮಶಿಲಾಯುಗ, ನವಶಿಲಾಯುಗ, ಬೃಹತ್‌ಶಿಲಾಯುಗ ನೆಲೆಗಳನ್ನು ಪ್ರಸ್ತುತ ಕಾಣಬಹುದು. ಆದಿಹಳೇ ಶಿಲಾಯುಗದ ಆಯುಧಗಳು ಈ ಹಿಂದೆ ತಾಳ್ಯ ಮತ್ತು ಜಾನಕಲ್‌ನಲ್ಲಿ ಶೋಧಿತಗೊಂಡಿದ್ದವು. ಇದಾದ ನಂತರ ನನ್ನ ಕ್ಷೇತ್ರ ಕಾರ್ಯದಲ್ಲಿ ಕೂನಬೇವಿನ ಮೋರಿಯರ ಮಟ್ಟಿ ಹತ್ತಿರ ಆದಿ ಹಳೇಶಿಲಾಯುಗದ ದ್ವಿಮುಖ ಕೊಡಲಿಗಳು ಶೋಧಿತಗೊಂಡಿವೆ. ಮಧ್ಯಹಳೇಶಿಲಾಯುಗ ಮತ್ತು ಅಂತ್ಯ ಹಳೇಶಿಲಾಯುಗದ ಆಯುಧಗಳು ಕಂಡುಬರದಿದ್ದರೂ ಹೆಚ್ಚಿನದಾಗಿ ಸಂಶೋಧನೆ ಮಾಡಿದರೆ ಸಿಗಬಹುದು. ಸೂಕ್ಷ್ಮಶಿಲಾಯುಗದ ಆಯುಧಗಳು ಚಿತ್ರದುರ್ಗ ಜಿಲ್ಲಾ ಪ್ರದೇಶದಲ್ಲಿ ಮಾದೇವಪುರ, ದೊಡ್ಡೇರಿ, ಹಿರಿಯೂರು, ಪೂಜಾರಹಟ್ಟಿ, ಸಂಗೇನಹಳ್ಳಿ ಪ್ರದೇಶಗಳಲ್ಲಿ ಶೋಧಿಗೊಂಡಿವೆ. ಸಂಗೇನಹಳ್ಳಿ ಪ್ರದೇಶದಲ್ಲಿ ಸೂಕ್ಷ್ಮಶಿಲಾಯುಗದ ಆಯುಧಗಳು ಕಂಡುಬಂದಿರುವುದನ್ನು ಗಮನಿಸಿದರೆ, ಎಷ್ಟು ಆಯುಧಗಳು ದೊರೆತವು?, ಯಾವ ತರಹದ ಆಯುಧಗಳು ಕಂಡುಬಂದವು? ಎಂಬುದರ ಬಗ್ಗೆ ಸ್ಪಷ್ಟನೆ ಇರುವುದಿಲ್ಲ. ಸೂಕ್ಷ್ಮಶಿಲಾಯುಗದ ನಂತರ ಬರುವ ಕಾಲವೇ ನವಶಿಲಾಯುಗ. ಉಜ್ಜಿ ನಯಗೊಳಿಸಿದ ಕಲ್ಲಿನ ಕೊಡಲಿಯನ್ನು ಬಳಸಿದ್ದರಿಂದ ಕೊಡಲಿಯ ಸಂಸ್ಕೃತಿಯ ಕಾಲವೆಂದು ಸಹ ಗುರುತಿಸಿದ್ದಾರೆ. ಈ ಕಾಲದ ಬೂದಿ ದಿನ್ನೆ ಸಂಗೇನಹಳ್ಳಿ ಕೆರೆಯ ನಡುಗಡೆಯಲ್ಲಿ ದೊರಕಿದೆ. ಈ ನೆಲೆಯಲ್ಲಿ ಬೂದು ಬಣ್ಣದ ಮಡಿಕೆ ಹಾಗೂ ನವಶಿಲಾಯುಗದ ಕಲ್ಲಿನ ಕೊಡಲಿ ಶೋಧನೆಗೊಂಡಿದೆ. ಕೆರೆಯ ದಂಡೆಯ ಮೇಲೆ ರೇಖಾಕೃತಿಗಳನ್ನು ಗಮನಿಸಬಹುದು. ಕೂನಬೇವಿನ ಕೊಂಚೆ ಶಾಂತರುದ್ರಪ್ಪರ ಹೊಲದಲ್ಲಿ ನಯಗೊಳಿಸಿದ ಕಲ್ಲಿನ ಕೊಡಲಿ ನನ್ನ ಕ್ಷೇತ್ರ ಕಾರ್ಯದಲ್ಲಿ ಕಂಡುಬಂದಿದೆ. ಈ ಕೊಡಲಿಯು ಕ್ರಿ.ಪೂ. ೨೫೦೦ ವರ್ಷಗಳ ಹಿಂದೆ ಬಳಸಿದ್ದಿರಬೇಕೆಂದು ಹೇಳಬಹುದು. ಸಂಗೇನಹಳ್ಳಿಕೆರೆಯ ಬೂದಿದಿನ್ನೆಯು ಹತ್ತಿರ ಇರುವುದರಿಂದ ಪ್ರಸ್ತುತ ಪ್ರದೇಶದಲ್ಲಿ ಬಿಟ್ಟು ಹೋದ ಕಲ್ಲಿನ ಕೊಡಲಿಗಳು ಬೂದಿದಿನ್ನೆಯಲ್ಲಿ ವಾಸವಾಗಿದ್ದ ಜನರದ್ದಾಗಿರಬೇಕು ಎಂದು ಸ್ಪಷ್ಟಪಡಿಸಬಹುದು. ಬೃಹತ್ ಶಿಲಾಯುಗದ ಶಿಲಾಸಮಾಧಿಗಳು ಮತ್ತು ರೇಖಾಕೃತಿಗಳುಳ್ಳ ನೆಲೆಗಳಿವೆ. ಒಟ್ಟು ೧೬ ನೆಲೆಗಳು ಶೋಧನೆಗೊಂಡಿದ್ದು, ಅದರಲ್ಲಿ ೮ ನೆಲೆಗಳು ಮಾತ್ರ ನನ್ನ ಕ್ಷೇತ್ರ ಕಾರ್ಯದಲ್ಲಿ ದೊರೆಕಿವೆ. ತುರುವನೂರಿನ ಆಲೂರಲ್ಲಿ ಕೈರನ್ ವೃತ್ತಾಕಾರದ ಸಮಾಧಿಗಳನ್ನು, ಚಿಕ್ಕಕಬ್ಬಿಗೆರೆಯಲ್ಲಿ ಮತ್ತು ಬೆಳಗಟ್ಟದಲ್ಲಿ ಪಾಂಡುಕುಳಿ ಸಮಾಧಿ ಮಾದರಿಗಳನ್ನು ಕಾಣಬಹುದು. ಉಳಿದಂತಹ ನೆಲೆಗಳಲ್ಲಿ ವೃತ್ತಾಕಾರದ ಸಮಾಧಿಗಳನ್ನು ಗಮನಿಸಬಹುದಾಗಿದೆ. ಬಹೃತ್‌ಶಿಲಾಯುಗ ಸಮಾಧಿ ನೆಲೆಗಳಿಗೆ ಮೊರಿಯರಮಟ್ಟಿ, ಪಾಂಡವರ ಬೀಳೆಂದು ಕರೆದಿರುವುದು ಸಾಮಾನ್ಯ. ಅಲ್ಲದೇ ಆಲೂರೂ, ದೊಣ್ಣೆಕರಿಯಮ್ಮ, ಕರಿಯಮ್ಮ ದೇವರಮಟ್ಟಿ, ಕೋತಿಗುಡ್ಡ, ಗಾಮಜ್ಜಿ ಎಂದು ಕರೆದಿರುವುದನ್ನು ವಿಶೇಷವಾಗಿ ಗಮನಿಸಬೇಕು. ಈ ರೀತಿಯಾದ ಐತಿಹ್ಯವುಳ್ಳ ಯಾವುದೇ ಹೆಸರುಗಳಿರಲಿ ಅವುಗಳನ್ನು ಪರೀಶಿಲಿಸಬೇಕಾಗುತ್ತದೆಂದು ಅಧ್ಯಯನದಿಂದ ತಿಳಿದುಬರುತ್ತದೆ. ರೇಖಾಕೃತಿಗಳಲ್ಲಿರುವ ನೆಲೆಗಳಲ್ಲಿ ಎತ್ತು, ಗೂಳಿ, ಜ್ಯಾಮಿತಿ

[illegible]

ಆಕೃತಿ, ಕುದುರೆ, ಮನುಷ್ಯನಾಕೃತಿ, ಬರ್ಚಿ, ಜೋಡಿಪಾದ ಮೊದಲಾದ ರೇಖಾಕೃತಿಗಳು ಬಂಡೆಗಳ ಮೇಲೆ ಮೂಡಿವೆ. ಬೃಹತ್ ಶಿಲಾಯುಗದ ಶಿಲಾಸಮಾಧಿಗಳು ರೇಖಾಕೃತಿಗಳ ನೆಲೆಯ ಸುತ್ತಮುತ್ತ ಇರುವುದರಿಂದ ಈ ಕಾಲಕ್ಕೆ ಸೇರಿಸಬಹುದಾಗಿದೆ. ಸಮಾಧಿಗಳು ಉತ್ಖನನವಾದರೆ ಒಂದು ನೆಲೆಯಿಂದ ಇನ್ನೊಂದು ನೆಲೆಗೆ ಇರುವ ಸಂಪರ್ಕ, ಯಾವ ಕಾರಣದಿಂದ ಸತ್ತರು?, ಕಬ್ಬಿಣ ಆಯುಧಗಳು ಸಿಗುತ್ತವೆ ಅಥವಾ ಇಲ್ಲವೇ?, ಅವರು ಬಳಿಸಿದ ಆಹಾರ ಧಾನ್ಯಗಳು ಯಾವುವು?, ಮೊದಲಾದವುಗಳನ್ನು ತಿಳಿಯಲು ಸಾಧ್ಯವಾಗುತ್ತದೆ.

ಆದಿ ಇತಿಹಾಸ ಕಾಲವನ್ನು ಕ್ರಿ.ಪೂ. ೪ನೇ ಶತಮಾನದಿಂದ ಕ್ರಿ.ಶ. ೩ನೇ ಶತಮಾನದವರೆಗೆ ಗುರುತಿಸಲಾಗಿದೆ. ಈ ಕಾಲಘಟ್ಟದಲ್ಲಿ ಶಾಸನಗಳು, ಕೆಂಪು ವರ್ಣದ ಮೃತ್ಪಾತ್ರೆಗಳು, ರೊಲೆ ಮೃತ್ಪಾತ್ರೆಗಳು, ಕೆಂಪು ಲೇಪನದಡಿ ಬಿಳಿ ವರ್ಣಚಿತ್ರವುಳ್ಳ ಕೆಂಪು ಮತ್ತು ಕಪ್ಪು ವರ್ಣದ ಮೃತ್ಪಾತ್ರೆಗಳು ಬನವಾಸಿ, ತಲಕಾಡು, ಸನ್ನತಿ, ಚಂದ್ರವಳ್ಳಿ ಮೊದಲಾದ ನೆಲೆಗಳಲ್ಲಿ ಕಂಡುಬಂದಿವೆ. ಬ್ರಹ್ಮಗಿರಿ, ಜಟಂಗರಾಮೇಶ್ವರ, ಸಿದ್ಧಾಪುರಗಳಲ್ಲಿ ಅಶೋಕನ ಶಾಸನವಿದ್ದು, ಇದರಲ್ಲಿ ಇಸಿಲಾ ಎಂದು ಉಲ್ಲೇಖಿಸಿದ್ದು, ಈ ಪಟ್ಟಣವಿತ್ತು ಎಂಬುದಕ್ಕೆ ಉತ್ಖನನಗಳಾಗಿದ್ದಾವೆ. ಉತ್ಖನಗಳಲ್ಲಿ ಇಟ್ಟಿಗೆ ಕಟ್ಟಡ, ಲೋಹದ ಆಭರಣ, ಮಡಕೆ ಚೂರುಗಳು ಹೊರಬಂದಿವೆ. ಪ್ರಸ್ತುತ ಪ್ರದೇಶದಿಂದ ಬ್ರಹ್ಮಗಿರಿ ಸಮೀಪದಲ್ಲಿದೆ. ಹಾಗಾಗಿ ಬೃಹತ್ ಶಿಲಾಗೊರಿಗಳನ್ನು ಮೊರಿಯರ ಮನೆಗಳೆಂದು ಕರೆದಿರುವುದರಲ್ಲಿ ತಪ್ಪಿಲ್ಲ. ಹಾಗಂತ ಬೃಹತ್ ಶಿಲಾಗೋರಿಯನ್ನು ಮೌರ್ಯರ ಕಾಲಕ್ಕೆ ಸೇರಿಸಲಾಗುವುದಿಲ್ಲ. ಪ್ರಸ್ತುತ ಪ್ರದೇಶದ ಸುತ್ತಮುತ್ತ ಮೌರ್ಯರು ಅಷ್ಟು ಪ್ರಭಾವಿತರಾಗಿದ್ದರೆಂಬುದಕ್ಕೆ ಸಾಕ್ಷಿಯಾಗಿವೆ. ಮೌರ್ಯರು ಬ್ರಹ್ಮಗಿರಿಯಲ್ಲಿ ಬೃಹತ್‌ಶಿಲಾ ಸಮಾಧಿಗಳನ್ನು ನಿರ್ಮಿಸಿಕೊಂಡು ಹೋಗುವ ಸಂಪ್ರದಾಯವನ್ನು ಮುಂದುವರಿಸಿದ್ದಿರಬೇಕು. ಆದ್ದರಿಂದ ಮಾರ್ಟಿಮರ್ ವಿಲ್ಹರ್ ಬೃಹತ್ ಶಿಲಾಯುಗವನ್ನು ಆಶೋಕನ ಕಾಲಕ್ಕೆ ಸೇರಿಸಿರುವುದನ್ನು ಮರುಪರಿಶೀಲಿಸಬೇಕಿದೆ. ಅ. ಸುಂದರರವರದು ಕೂಡ ಇದೇ ಅಭಿಪ್ರಾಯವಾಗಿದೆ. ಚಂದ್ರವಳ್ಳಿಯಲ್ಲಿ ೧೯೦೯, ೧೯೨೮, ೧೯೪೭, ೧೯೭೮ರಲ್ಲಿ ೪ ಭಾರಿ ಉತ್ಖನನಗಳಾಗಿವೆ. ಈ ಉತ್ಖನನಗಳಿಂದ ಇಟ್ಟಿಗೆ ಕಟ್ಟಡ, ಮಡಕೆ ಚೂರುಗಳು, ಆಭರಣಗಳು, ಕಟ್ಟಡದ ಅವಶೇಷಗಳು, ಶಾತವಾಹನರ ಮತ್ತು ರೋಮನ್ ನಾಣ್ಯಗಳು ದೊರಕಿವೆ. ಇವುಗಳ ಆಧಾರದ ಮೇಲೆ ಪ್ರಸ್ತುತ ಆಧ್ಯಯನ ಪ್ರದೇಶದ ಶಾತವಾಹನರ ಸಂಸ್ಕೃತಿಯನ್ನು ಕಟ್ಟಲು ಸಾಧ್ಯವಾಗಿದೆ. ಈ ನೆಲೆಗೆ ಹತ್ತಿರವಿರುವ ಹೊಸದುರ್ಗದ ತಣಿಗೆಕಲ್ಲಿನಲ್ಲಿ ಶಾತವಾಹನರ ಮಡಕೆ ಅವಶೇಷಗಳು ಕಂಡುಬಂದಿವೆ. ಈ ನೆಲೆಯ ಬಗ್ಗೆ ಸಮಗ್ರವಾಗಿ ಅಧ್ಯಯನವಾಗಿಲ್ಲವೆಂದೇ ಹೇಳಬಹುದು. ಚಿಪ್ಪಿನಕೆರೆಯ ನೆಲೆಯಲ್ಲಿ ಮಹಾರಥಿ ನಾಣ್ಯಗಳು ಹೆಚ್ಚು ದೊರಕಿರುವುದರಿಂದ ಶಾತವಾಹನರಿಗಿಂತ ಮಾಂಡಲೀಕರ ಆಡಳಿತ ಪ್ರಭಾವಕ್ಕೆ ಒಳಗಾದ ಪ್ರದೇಶವಾಗಿದೆ. ಈ ನೆಲೆಯನ್ನು ಉತ್ಖನನ ಮಾಡಿದರೆ ರೋಮನ್ ನಾಣ್ಯಗಳು, ರೊಲೆ ಮೃತ್‌ಪಾತ್ರೆಗಳು, ಇಟ್ಟಿಗೆಯ ಕಟ್ಟಡ ಅವಶೇಷಗಳು ಸಿಗಬಹುದು. ಸಂಗೇನಹಳ್ಳಿ ಕೆರೆಯ ನಡುಗಡ್ಡೆಯಲ್ಲಿ ಓಬಳಾಪುರ ಗಡ್ಡೆಯೆಂದು ಕರೆಯುವ ಬೂದಿದಿನ್ನೆ ಇದೆ. ಬಿಳಿವರ್ಣದ

[illegible]

ರೇಖೆಯುಳ್ಳ ಕೆಂಪು ಮಡಕೆ ಅವಶೇಷಗಳು ಸಿಕ್ಕಿವೆ. ಬೂದುವರ್ಣದ ಮೃತ್ ಪಾತ್ರೆಗಳು ಮತ್ತು ನವಶಿಲಾಯುಗದ ಆಯುಧಗಳು ಶೋಧನೆಗೊಂಡಿರುವುದರಿಂದ ನಿರಂತರ ಮಾನವನ ಚಟುವಟಿಕೆಗಳಿಗೆ ಒಳಪಟ್ಟಿತ್ತೆಂದು ಸ್ಪಷ್ಟಪಡಿಸಬಹುದು.

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ ಪ್ರಸ್ತುತ ಪ್ರದೇಶದಲ್ಲಿ ಕಾಣಬಹುದು. ಇವುಗಳು ಕಲಾ ಪೋಷಣೆಗೆ ಒಳಗಾಗಿ ರಾಜ ಮಹಾರಾಜರ ಕಾಲದಲ್ಲಿ ರಚಿತಗೊಂಡಿವೆ. ಭೋಗೇಶ್ವರ, ಕಲ್ಲೇಶ್ವರ, ರಾಮಲಿಂಗೇಶ್ವರ, ರಾಮಲಿಂಗ, ಗಂಗಾಧರೇಶ್ವರ, ಈಶ್ವರ, ಆಂಜನೇಯ, ಮೊದಲಾದ ದೇವಾಲಯಗಳಿವೆ. ಗರ್ಭಗೃಹ, ಅಂತರಾಳ, ತೆರದ ಮಂಟಪವನ್ನು ಹೊಂದಿದ ಸರಳವಾದ ತಳವಿನ್ಯಾಸವನ್ನು ಹೊಂದಿವೆ. ಹಾಗೂ ಹೆಚ್ಚು ಅಲಂಕಾರಿಕವಲ್ಲದ ಭಿತ್ತಿಗಳನ್ನು ಕಾಣಬಹುದು. ಯಳಗೋಡಿನ ಭೋಗೇಶ್ವರ ದೇವಾಲಯದ ಅಧಿಷ್ಠಾನದಲ್ಲಿ ಪದ್ಮೋಪಾನ, ಗಳ, ದಂತಪಂಕ್ತಿ ಭಾಗಗಳನ್ನು ಗುರುತಿಸಬಹುದು. ಉಳಿದಂತಹ ದೇವಾಲಯಗಳ ಅಧಿಷ್ಠಾನಗಳು ವಾಸ್ತುಶೈಲಿಯಲ್ಲಿ ಅಷ್ಟೊಂದು ಪ್ರಾಮುಖ್ಯತೆಯನ್ನು ಪಡೆದಿಲ್ಲ. ಭೋಗೇಶ್ವರ ದೇವಾಲಯವು ಕಲಚೂರಿಗಳ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಕಲ್ಯಾಣದ ಚಾಲುಕ್ಯರ ಶೈಲಿಯನ್ನು ಹೋಲುತ್ತದೆ. ಉಳಿದಂತಹ ದೇವಾಲಯಗಳು ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ರಚಿತಗೊಂಡಿವೆಂದು ವಾಸ್ತುಶೈಲಿ ಆಧಾರದ ಮೇಲೆ ಹೇಳಲಾಗಿದೆ.

ಶಾಶ್ವತವಾಗಿ ಉಳಿಯುವಂತೆ ಯಾವಾದಾದರೊಂದು ಪದಾರ್ಥದ ಮೇಲೆ ಕೊರೆದು ಬರೆಲ್ಪಟ್ಟ ಬರಹಗಳನ್ನು ಶಾಸನಗಳೆನ್ನಬಹುದು. ಮೌರ್ಯರ ಶಾಸನವನ್ನು ಬ್ರಹ್ಮಗಿರಿ ಸುತ್ತಮುತ್ತ ಕಾಣಬಹುದಾಗಿದೆ. ಶಾತವಾಹನರ ಶಿಲಾಶಾಸನಗಳು ಪ್ರಸ್ತುತ ಕಾಣಬರದಿದ್ದರೂ ನಾಣ್ಯಗಳಲ್ಲಿ ಮುದ್ರಿತವಾಗಿರುವ ಅರಸರ ಹೆಸರುಗಳನ್ನು ಕಾಣಬಹುದು. ಕದಂಬರ ಶಾಸನವೊಂದು ಚಂದ್ರವಳ್ಳಿಯಲ್ಲಿದೆ. ಇದು ಮಯೂರಶರ್ಮನ ಕಾಲಕ್ಕೆ ಸೇರಿದ್ದು. ಬಾಗೇನಾಳ್, ಹಾಯ್ಕಲ್, ತುರುವನೂರಿನಲ್ಲಿ ನೊಳಂಬಪಲ್ಲವರ ಶಾಸನಗಳಿವೆ. ಕಡಬನಕಟ್ಟೆಯಲ್ಲಿ ಗೋಶಾಸನವಿದ್ದು, ಅದು ಅಪ್ರಕಟಿತ. ಕೂನಬೇವಿನಲ್ಲಿರುವಂತ ಶಾಸನಗಳು ನೊಳಂಬಪಲ್ಲವರ ಲಿಪಿಗಳನ್ನು ಹೋಲುತ್ತಿದ್ದು, ತೃಟಿತಗೊಂಡಿವೆ. ಬಾಗೇನಾಳ್ ಶಾಸನದಿಂದ ಅಯ್ಯಪ್ಪದೇವನು ಕ್ರಿ.ಶ. ೯೧೮ರಲ್ಲಿ ಪ್ರಸ್ತುತ ಪ್ರದೇಶವನ್ನು ಆಳುತಿದ್ದನೆಂದು ತಿಳಿದುಬಂದಿದೆ. ಕ್ರಿ.ಶ. ೧೧೬೮ರ ಶಾಸನ ಯಳಗೋಡಿನ ಹೊರವಲಯದಲ್ಲಿದ್ದು, ಕಲಚೂರಿ ದೊರೆ ಸೋವಿದೇವನನ್ನು ಉಲ್ಲೇಖಿಸುತ್ತದೆ. ಅಲ್ಲದೆ ಭೋಗೇಶ್ವರ ದೇವಾಲಯಕ್ಕೆ ದಾನ ಕೊಟ್ಟ ಬಗ್ಗೆ ವಿವರಣೆಯನ್ನು ನೀಡುತ್ತದೆ. ಕ್ರಿ.ಶ. ೧೪೦೫ರ ಶಾಸನವೊಂದು ಭೋಗೇಶ್ವರ ದೇವಾಲಯದ ಮುಂಭಾಗದಲ್ಲಿದ್ದು ವಿಜಯನಗರ ಕಾಲಕ್ಕೆ ಸಮಕಾಲೀನದು. ಹಾಗಂತ ಭೋಗೇಶ್ವರ ದೇವಾಲಯವನ್ನು ವಿಜಯನಗರ ಕಾಲಕ್ಕೆ ಸೇರಿಸಲಾಗುವುದಿಲ್ಲ. ಈಗಾಗಲೇ ಕ್ರಿ.ಶ. ೧೬೧೮ರ ಶಾಸನದಲ್ಲಿ ಗುರುತಿಸಿಕೊಂಡಿದೆ. ಕೂನಬೇವಿನಲ್ಲಿ ಮೂರು ವೀರಗಲ್ಲುಗಳು, ಬಾಗೇನಾಳ್‌ದಲ್ಲಿ ಒಂದು ವೀರಗಲ್ಲು, ತುರುವನೂರಿನಲ್ಲಿ ವೀರಸತಿಗಲ್ಲು, ಹಾಯ್ಕಲ್‌ನಲ್ಲಿ ಶಾಸನೋಕ್ತ ಒಂದು ವೀರಗಲ್ಲು, ಯಳಗೋಡಿನಲ್ಲಿ ಒಂದು ಶಾಸನೋಕ್ತ ಮಾಸ್ತಿಗಲ್ಲು, ಮುದ್ದಾಪುರದಲ್ಲಿ ಎರಡು ವೀರಗಲ್ಲು,

ಪುರಾತತ್ವ ಆಕರಗಳಾಗಿವೆ. ಇವುಗಳು ಕ್ರಿ.ಶ. ೧೦ ರಿಂದ ೧೬-೧೭ನೇ ಶತಮಾನದಲ್ಲಿ ರಚಿಗೊಂಡಿರಬಹುದು. ವೀರಗಲ್ಲುಗಳಲ್ಲಿ ಮೂರು ಹಂತಗಳನ್ನು ತೋರಿಸಿರುವುದು ಸಾಮಾನ್ಯ ಆದರೆ ನಾಲ್ಕು ಹಂತಗಳನ್ನು ಹೊಂದಿರುವ ಶಾಸನೋಕ್ತ ಮಾಸ್ತಿಗಲ್ಲು ಯಳಗೋಡಿನಲ್ಲಿದೆ. ವೀರರು ಭರ್ಚಿ, ಖಡ್ಗ, ಬಾಕು, ಬಿಲ್ಲುಬಾಣ, ಗುರಾಣಿ ಮೊದಲಾದ ಆಯುಧೋಪಕರಣ ಗಳನ್ನು ಬಳಸಿದ್ದರೆಂದು ವೀರಗಲ್ಲುಗಳ ಶಿಲ್ಪಗಳಿಂದ ತಿಳಿದುಬರುವುದು. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಶಿವಲಿಂಗಗಳು ಮತ್ತು ನಂದಿ ಶಿಲ್ಪಗಳಿಗೆ ತುರುವನೂರಿನ ರಾಮಲಿಂಗ ಮತ್ತು ಹಾಯ್ಕಲ್ಲಿನ ರಾಮೇಶ್ವರ ಲಿಂಗಗಳು ಕ್ರಿ.ಶ. ೧೦ನೇ ಶತಮಾನಕ್ಕೆ ಸೇರಿದವು. ಹಾಗೇ ಯಳಗೋಡಿನ ಭೋಗೇಶ್ವರ ಲಿಂಗವು ಕ್ರಿ.ಶ. ೧೧-೧೨ನೇ ಶತಮಾನಕ್ಕೆ ಸೇರಿದೆ. ಉಳಿದಂತಹ ಶಿವಲಿಂಗಗಳು ಇತ್ತೀಚಿನ ಶಿವಲಿಂಗಗಳಿಗಿಂತ ಪ್ರಾಚೀನವಾದವು. ಶಿವಲಿಂಗಗಳಲ್ಲಿ ಸೋಮ ಸೂತ್ರವಿದ್ದು, ಇವುಗಳ ಆಧಾರದ ಮೇಲೆ ಕಾಲವನ್ನು ಸಹ ನಿರ್ಧರಿಸಬಹುದಾಗಿದೆ. ಹಿರೇಕಬ್ಬಿಗೆರೆಯ ಕಲ್ಲೇಶ್ವರ ಶಿವಲಿಂಗವಿನ ಎದುರಿಗೆ ಆನೆಯ ಶಿಲ್ಪವಿರುವುದು ವಿಶೇಷ. ಉಳಿದಂತಹ ನಂದಿಶಿಲ್ಪಗಳು ರಾಮಲಿಂಗೇಶ್ವರ, ರಾಮಲಿಂಗ, ಭೋಗೇಶ್ವರ ದೇವಾಲಯಗಳಲ್ಲಿವೆ. ಚಿತ್ರದುರ್ಗ ಪಾಳೆಯಗಾರರ ದೇವಾಲಯಗಳಲ್ಲಿ ಶೈವ ಮತ್ತು ವೈಷ್ಣವಶಿಲ್ಪಗಳಿದ್ದು, ಭಿತ್ತಿ ಮತ್ತು ಕಂಬಗಳಲ್ಲಿ ಕಾಣಬಹುದು. ಬಾಗೇನಾಳ್‌ದಲ್ಲಿ ಸಪ್ತಮಾತೃಕೆ ಶಿಲ್ಪವಿದ್ದು, ಕ್ರಿ.ಶ. ೧೦ನೇ ಶತಮಾನಕ್ಕೆ ಸೇರಿದೆ. ಈ ಎಲ್ಲಾ ಮೂರ್ತಿಶಿಲ್ಪಗಳು ಪ್ರಸ್ತುತ ಅಧ್ಯಯನ ಪ್ರದೇಶದ ಮೇಲೆ ಬೆಳಕನ್ನು ಚೆಲ್ಲಿವೆ.

ತುರುವನೂರಿನಲ್ಲಿ, ಸಿದ್ದವ್ವನ ದುರ್ಗದಲ್ಲಿ ಕ್ರಿ.ಶ. ೧೭ನೇ ಶತಮಾನದಲ್ಲಿ ನಿರ್ಮಾಣ ಗೊಂಡಿರುವ ಕೋಟೆಗಳಿವೆ. ಆದರೆ ಯಾವ ಅರಸರ ಕಾಲದಲ್ಲಿ ನಿರ್ಮಾಣಗೊಂಡಿವೆಂದು ಸ್ಪಷ್ಟನೆ ಇಲ್ಲ. ತುರುವನೂರಿನಲ್ಲಿ ಚೌಕಾಕಾರದ ಕೋಟೆಯಲ್ಲಿ ನಾಲ್ಕು ವೃತ್ತಾಕಾರದ ಬುರುಜುಗಳನ್ನು ಕಾಣಬಹುದು. ಇವುಗಳು ಕೋಟೆ-ಗೋಡೆಗಳಿಗಿಂತ ಎತ್ತರವಾಗಿವೆ. ಆದ್ದರಿಂದ ಕಾವಲು ಗೋಪುರಗಳೆಂದು ಗುರುತಿಸಬಹುದು. ಸಿದ್ದವ್ವನದುರ್ಗದ ಕೋಟೆ ಉಳಿದಿರುವ ಅವಶೇಷಗಳಾಧಾರದ ಮೇಲೆ ಎರಡು ಸುತ್ತಿನ ಕೋಟೆಯಾಗಿದೆ ಎಂದು ಗುರುತಿಸಲಾಗಿದೆ. ಸುತ್ತ ತೆಗೆದಿರುವ ಕಂದಕಗಳಿಂದ ಮಣ್ಣನ್ನು ಕೋಟೆ ಗೋಡೆಗಳಿಗೆ ಬಳಸಿದ್ದಾರೆ. ಈ ಎರಡೂ ಕೋಟೆ ಪ್ರದೇಶಗಳಲ್ಲಿ ಯಾವುದೇ ವಾಸ್ತುಶಿಲ್ಪಗಳಿರುವುದಿಲ್ಲ. ವೀರಮದಕರಿಪುರದಲ್ಲಿ ಒಂದು ಕಾವಲುಗೋಪುರ, ಕೂನಬೇವಿನಲ್ಲಿ ಒಂದು ಕಾವಲುಗೋಪುರ, ಇರುವುದರಿಂದ ಸಂಪರ್ಕ ಸಾಧನವಾಗಿ ಬಳಕೆಯಾಗಿದ್ದಿರಬೇಕೆಂದು ಹೇಳಬಹುದಾಗಿದೆ. ಚಿಕ್ಕಗೊಂಡನ ಹಳ್ಳಿಯಲ್ಲಿರುವ ಬಾಗಿಲಿನ ಅವಶೇಷ ಕೋಟೆ ಇತ್ತೆಂಬುದಕ್ಕೆ ಸಾಕ್ಷಿಯಾಗಿವೆ.

ಒಟ್ಟಾರೆ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಪುರಾತತ್ವೀಯ ನೆಲೆಗಳು ಮತ್ತು ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಗಳು ಐತಿಹಾಸಿಕವಾಗಿ ಮಹತ್ವವನ್ನು ಪಡೆದಿವೆ. ಮುಂದಿನ ಅಧ್ಯಯನಗಳಿಗೆ ಪ್ರಸ್ತುತ ಅಧ್ಯಯನ ಪ್ರಾಥಮಿಕ ಆಕರವಾಗಿ ಬಳಸಿಕೊಳ್ಳಬಹುದೆಂದು ಅಭಿಪ್ರಾಯಪಡಬಹುದು.

• • •

ಅನುಬಂಧಗಳು

ಗ್ರಂಥಋಣ

ರೇಖಾಚಿತ್ರಗಳು

ನೆಲೆಗಳ ನಕ್ಷೆ

ದೇವಾಲಯಗಳ ತಲನಕ್ಷೆ

ಛಾಯಾಚಿತ್ರಗಳು

ಗ್ರಂಥಋಣ

೧. ಅ. ಸುಂದರ, **ಇತಿಹಾಸ ಪೂರ್ವ ಕರ್ನಾಟಕ ಅಥವಾ ಕರ್ನಾಟಕ ಪ್ರಾಗೈತಿಹಾಸ,** ಐ.ಬಿ.ಹೆಚ್., ೧೯೭೧, ಬೆಂಗಳೂರು

೨. ಅ. ಸುಂದರ, **ಪ್ರಾಚ್ಯವಸ್ತು ಸಂಶೋಧನೆ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ೧೯೭೨, ಧಾರವಾಡ.

೩. ಅ. ಸುಂದರ, **ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ,** ಐ.ಬಿ.ಹೆಚ್., ೧೯೭೩, ಬೆಂಗಳೂರು

೪. ಅ. ಸುಂದರ, **ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ,** ಬೃಂದಾವನ ಪ್ರಿಂಟರ್ಸ್, ೧೯೯೪, ಬೆಂಗಳೂರು.

೫. ಅ. ಸುಂದರ ಮತ್ತು ಷೇಕ್‌ಆಲಿ, **ಕರ್ನಾಟಕ ಚರಿತ್ರೆ, ಸಂ–೧,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೧೯೯೪, ಹಂಪಿ.

೬. ಆಲ್ಬರ್ಟಿನ್ ಗೌರ್, **ಪ್ರಾಚೀನ ಲೇಖನಿಗಳ ಸಾಮಾಗ್ರಿಗಳು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೦೩, ಹಂಪಿ.

೭. ಇರ್ಫಾನ್ ಹಬೀಬ್, **ಪೂರ್ವೈತಿಹಾಸ,** ಚಿಂತನಪ್ರಕಾಶನ, ೨೦೦೮, ಶಿರಸಿ.

೮. **ಇತಿಹಾಸ ದರ್ಶನ ಸಂಪುಟಗಳು,** ೧೧, ೧೪, ೧೯, ೨೨, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೯. ಇಂದುಮತಿ ಪಿ.ಪಾಟೀಲ, **ಪ್ರಾಚೀನ ಭಾರತದ ಇತಿಹಾಸ,** ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ೨೦೦೬, ಗುಲ್ಬರ್ಗ.

೧೦. ಕರೋವ್ಕಿನ್ ಎಫ್., **ಪುರಾತನ ಜಗತ್ತಿನ ಇತಿಹಾಸ,** ನವಕರ್ನಾಟಕ ಪಬ್ಲಿಕೇಷನ್, ೧೯೮೭, ಬೆಂಗಳೂರು.

೧೧. ಕೃಷ್ಣರಾವ್ ಎಂ.ವಿ., **ಕರ್ನಾಟಕ ಇತಿಹಾಸ ದರ್ಶನ,** ಕರ್ನಾಟಕ ಸಹಕಾರ ಪ್ರಕಾಶನ ೧೯೭೦, ಬೆಂಗಳೂರು.

[illegible]

೧೨. ಕೂ.ಸ. ಅಪರ್ಣ, **ದೇವಾಲಯ ವಾಸ್ತುಶಿಲ್ಪ ಪರಿಚಯ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೧೯೯೯, ಹಂಪಿ.

೧೩. ಶ್ರೀಕಂಠಶಾಸ್ತ್ರಿ ಎಸ್., **ಭಾರತೀಯ ಸಂಸ್ಕೃತಿ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೬, ಬೆಂಗಳೂರು.

೧೪. ಖಂಡೋಬರಾವ್ ಹೆಚ್., **ನಾಣ್ಯಕರ್ನಾಟಕ,** ಮಗರ್ ಪಬ್ಲಿಕೇಷನ್, ೨೦೦೨, ಶಿವಮೊಗ್ಗ.

೧೫. ಗಾಯತ್ರಿ, **ಚಿತ್ರಗಳಲ್ಲಿ ಚರಿತ್ರೆ,** ಗಾಯತ್ರಿ ಎಂಟರ್ ಪ್ರೈಸಸ್, ೨೦೦೫, ಮೈಸೂರು.

೧೬. ಗಿಲ್ಬರ್ಟ್ ಸಿಕ್ವೇರಾ, **ಪೂರ್ವ ಪ್ರಾಚೀನ ಭಾರತದ ಇತಿಹಾಸ,** ಚೇತನ್‌ಬುಕ್‌ಹೌಸ್, ೨೦೦೪, ಮೈಸೂರು.

೧೭. ಗಿರಿಜಾ.ಟಿ., **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ರೇಖಾ ಪ್ರಕಾಶನ, ದಾವಣಗೆರೆ,

೧೮. ಗೋಪಾಲರಾವ್ ಹೆಚ್.ಎಸ್., **ಇತಿಹಾಸದ ಇಣುಕುನೋಟ,** ಅನಂತ ಪ್ರಗತಿ ಎಂಟರ್‌ಪ್ರೈಸಸ್, ೨೦೦೭, ಬೆಂಗಳೂರು.

೧೯. ಗೋಪಾಲ್ ಆರ್. (ಸಂ), **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಪ್ರಾಚ್ಯವಸ್ತು ಸಂಗ್ರಹಾಲಯದ ನಿರ್ದೇಶನಾಲಯ, ೨೦೦೫, ಹೊಸಪೇಟೆ,

೨೦. ಗೋಪಾಲ್ ಆರ್. (ಸಂ), **ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಪ್ರಾಚ್ಯವಸ್ತು ಸಂಗ್ರಹಾಲಯದ ನಿರ್ದೇಶನಾಲಯ, ೨೦೦೮, ಮೈಸೂರು.

೨೧. ಗುರುರಾಜಚಾರ್ ಎಸ್. (ಅನು), **ಲೋಥಾಲ್ ಮತ್ತು ಸಿಂಧೂ ನಾಗರೀಕತೆ.**

೨೨. ಚನ್ನಪ್ಪ ಎಸ್. ಪಾಟೀಲ್, **ಕರ್ನಾಟಕದ ಕೋಟೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೧೯೯೯, ಹಂಪಿ.

೨೩. ಚಿದಾನಂದಮೂರ್ತಿ ಎಂ., **ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು,** ಐ.ಬಿ.ಹೆಚ್. ೧೯೮೩, ಬೆಂಗಳೂರು.

೨೪. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಸಪ್ನ ಬುಕ್‌ಹೌಸ್, ೨೦೦೮, ಬೆಂಗಳೂರು.

೨೫. ಜಯಣ್ಣ ಯು., **ಮೊಳಕಾಲ್ಮೂರು ತಾಲ್ಲೂಕಿನ ಪುರಾತತ್ವೀಯ ಪರಿಸರ,** ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ, ೨೦೦೨, ಹಂಪಿ.

೨೬. ಜಯದೇವಿ ಎಂ., ಗಾಯಕವಾಡ, **ಪ್ರಾಚೀನ ಬೌದ್ಧ ವಿದ್ಯಾಕೇಂದ್ರ : ಸನ್ನತಿ,** ಅಮರ ಪ್ರಕಾಶನ, ೨೦೦೨, ಗುಲ್ಬರ್ಗಾ.

೨೭. ತಂಬಂಡ ವಿಜಯಪೂಣಚ್ಚ (ಸಂ), **ಕನ್ನಡ ವಿಶ್ವವಿದ್ಯಾಲಯದ ವಿಶ್ವಕೋಶ ಚರಿತ್ರೆ, ಸಂಪುಟ-೪,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೧, ಹಂಪಿ.

೨೮. ತಿಪ್ಪೇರುದ್ರಸ್ವಾಮಿ ಹೆಚ್., **ಕರ್ನಾಟಕ ಸಾಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ. ಮೂರ್ತಿ ಪ್ರಕಾಶನ, ೨೦೦೧, ಮೈಸೂರು.

೨೯. ತಿಪ್ಪೇಸ್ವಾಮಿ ಎಸ್., **ರಕ್ಷಣಾ ವಾಸ್ತುಶಿಲ್ಪ : ಚಿತ್ರದುರ್ಗ ಜಿಲ್ಲೆ**, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ, ೨೦೦೪, ಹಂಪಿ.

೩೦. ದೇವರಕೊಂಡಾರೆಡ್ಡಿ, **ಲಿಪಿಯ ಹುಟ್ಟು ಮತ್ತು ಬೆಳವಣಿಗೆ**, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೨, ಬೆಂಗಳೂರು.

೩೧. ದಿವಾಕರ ಆರ್.ಆರ್., **ಕರ್ನಾಟಕದ ಪರಂಪರೆ ಸಂಪುಟ-೧**, ಆದಿಕಾಲದಿಂದ ವಿಜಯನಗರ ಕಾಲದವರೆಗೆ, ಕನ್ನಡ ಸಂಸ್ಕೃತಿ ಇಲಾಖೆ, ೨೦೦೬, ಬೆಂಗಳೂರು.

೩೨. ನರಸಿಂಹಮೂರ್ತಿ ಎ.ವಿ., **ಕರ್ನಾಟಕ ನಾಣ್ಯ ಪರಂಪರೆ**, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೩, ಬೆಂಗಳೂರು.

೩೩. ನಂಜಮ್ಮಣ್ಣಿ ಎಂ., **ಪ್ರಾಚೀನ ಭಾರತದ ಸಾಮಾಜಿಕ ಇತಿಹಾಸ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೮೦, ಮೈಸೂರು.

೩೪. ನರಸಿಂಹಮೂರ್ತಿ ಎ.ವಿ., **ಕರ್ನಾಟಕದಲ್ಲಿ ಪುರಾತತ್ವ ಶೋಧನೆ**, ಐ.ಬಿ.ಹೆಚ್., ೧೯೭೯, ಬೆಂಗಳೂರು.

೩೫. ನಾಗೇಗೌಡ ಹೆಚ್.ಎಲ್., **ಪ್ರವಾಸಿ ಕಂಡ ಇಂಡಿಯಾ, ಸಂಪುಟ-೧**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೬೪, ಮೈಸೂರು.

೩೬. ಪುಟ್ಟಪ್ಪ ಕೆ.ವಿ. (ಪ್ರ.ಸಂ.), **ಅಶೋಕ**, ವೆಲ್ಲೆಪ್ರಸ್ ಅಂಡ್ ಪಬ್ಲಿಕೇಷನ್, ೧೯೫೨, ಮೈಸೂರು.

೩೭. ಬಸವರಾಜ ಎನ್. ಅಕ್ಕಿ, **ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ**, ಸೋಮೇಶ್ವರ ಪ್ರಕಾಶನ, ೨೦೦೪, ಧಾರವಾಡ,

೩೮. ಬಾ.ರಾ. ಗೋಪಾಲ್, **ಕರ್ನಾಟಕದಲ್ಲಿ ನವಶಿಲಾಯುಗ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ೧೯೮೭, ಧಾರವಾಡ.

೩೯. ಮರಿಶಾಮಚಾರ್ ಎಸ್., **ಭಾರತೀಯ ಶಿಲ್ಪಕಲೆ**, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ೨೦೦೦, ಬೆಂಗಳೂರು.

೪೦. ಮಂಜಪ್ಪ ಶೆಟ್ಟಿ ಮಸಗಲಿ ಎಂ.ಪಿ., **ಕರ್ನಾಟಕದಲ್ಲಿ ಅಶೋಕ ಶಾಸನಗಳು**, ಮಸಗಲಿ ಪ್ರಕಾಶನ, ೧೯೯೧, ಮೈಸೂರು.

೪೧. ಮಂಜುನಾಥ ಎಂ., ಮತ್ತು ದೇವರಾಜ್ ಜಿ.ಕೆ., **ಕನ್ನಡಲಿಪಿ ವಿಕಾಸ**, ಶ್ರೀ ರಾಘವೇಂದ್ರ, ೨೦೦೪, ಮಂತ್ರಾಲಯ.

೪೨. ಮೂರ್ತಿ ಕೆ.ಎಲ್., **ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ**, ರಂಜಿತ ಪ್ರಕಾಶನ, ೧೯೯೮, ತುಮಕೂರು.

೪೩. ರಾಜಶೇಖರಪ್ಪ ಬಿ., **ಇತಿಹಾಸ ಕಥನ**, ಸಿ.ವಿ.ಜೆ. ಪಬ್ಲಿಕೇಷನ್, ೨೦೦೧, ಬೆಂಗಳೂರು.

೪೪. ರಾಜಶೇಖರಪ್ಪ ಬಿ., **ನಿರಂತರ**, ಸಿ.ಲೋಕಪಾವನಿ, ೨೦೦೧, ಪಾಂಡವಪುರ.

೪೫. ರಾಜಶೇಖರಪ್ಪ ಬಿ., **ದುರ್ಗಶೋಧ**, ಕನ್ನಡ ಸಾಹಿತ್ಯ ಪರಿಷತ್, ೨೦೦೧, ಬೆಂಗಳೂರು.

೪೬. ರಜನಿಕಾಂತ್ ಎಂ.ಎಸ್ (ಅನು), **ಪ್ರಾಚೀನ ಭಾರತ**, ವಾರ್ತಾ ಮತ್ತು ಪ್ರಸಾರ ಸಚಿವಾಲಯ, ೧೯೯೯, ನವದೆಹಲಿ.

೪೭. ರಂಗಸ್ವಾಮಯ್ಯ ಆರ್. ಮತ್ತು ಶಿವಣ್ಣ, **ಉತ್ತರ ಭಾರತದ ಇತಿಹಾಸ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೨೦೦೩, ಮೈಸೂರು.

೪೮. ರಾಮಲಿಂಗಪ್ಪ ಹೆಚ್., **ಆಧುನಿಕ ವಿಶ್ವ (ಒಂದು ಪಕ್ಷಿ ನೋಟ)**, ನವೀನ ಪ್ರಕಾಶನ, ೨೦೦೧, ಬೆಂಗಳೂರು.

೪೯. ರಾಮಲಿಂಗಪ್ಪ ಹೆಚ್., **ಭಾರತದ ಇತಿಹಾಸ**, ಕಲಾ ಪ್ರಕಾಶನ, ೧೯೯೭, ಬೆಂಗಳೂರು.

೫೦. ರಮೇಶ್‌ನಾಯಕ (ಸಂ), **ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೭, ಹಂಪಿ.

೫೧. ಲಕ್ಷ್ಮಣ್ ತೆಲಗಾವಿ, ವೆಂಕಣ್ಣಚಾರ್, ಮತ್ತು ಹು.ಶ್ರೀ. ಜೋಯಿಸರು (ಸಂ), **ಚಿತ್ರದುರ್ಗ ದರ್ಶನಿ**, ಇತಿಹಾಸ ಸಂಶೋಧನಾ ಮಂಡಳಿ, ೧೯೮೦, ಚಿತ್ರದುರ್ಗ.

೫೨. ಲಕ್ಷ್ಮಣ್ ತೆಲಗಾವಿ ಮತ್ತು ವೆಂಕಣ್ಣಚಾರ್ (ಸಂ), **ಐತಿಹಾಸಿಕ ಚಿತ್ರದುರ್ಗ**, ಜಿಲ್ಲಾ ಇತಿಹಾಸ, ಸಂಶೋಧನಾ ಮಂಡಳಿ, ೧೯೭೬, ಚಿತ್ರದುರ್ಗ.

೫೩. ಲಕ್ಷ್ಮಣ್ ತೆಲಗಾವಿ ಮತ್ತು ಹು.ಶ್ರೀ. ಜೋಯಿಸರು (ಸಂ), ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾ ಲೇಖನಗಳು, ಗ್ರಂಥ ಪ್ರಕಟಣ ಸಮಿತಿ, ೧೯೯೫, ಚಿತ್ರದುರ್ಗ.

೫೪. ಲಕ್ಷ್ಮಣ್ ತೆಲಗಾವಿ (ಸಂ), **ಹರಿತಿಸಿರಿ**, ವಾಲ್ಮೀಕಿ ಸಾಹಿತ್ಯ ಸಂಪದ, ೧೯೮೭, ಹರ್ತಿಕೋಟೆ.

೫೫. ಲಕ್ಷ್ಮಣ್ ತೆಲಗಾವಿ (ಸಂ), **ಚಂದ್ರವಳ್ಳಿ**, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ೧೯೭೬, ಚಿತ್ರದುರ್ಗ.

೫೬. ಲಕ್ಷ್ಮಣ್ ತೆಲಗಾವಿ, **ಮೌರ್ಯ ಮತ್ತು ಶಾತವಾಹನಯುಗ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೪, ಹಂಪಿ.

೫೭. ಲಕ್ಷ್ಮಣ ಅಳವಂಡಿ, **ಇತಿಹಾಸಕೋಶ-೨**, ಕಾವ್ಯಶ್ರೀ ಪ್ರಕಾಶ, ೧೯೯೮, ಅಳವಂಡಿ.

೫೮. ವಾಸುದೇವ ಕಾಣೇಮಾರ್, **ಕಲಾ ಪ್ರಕಾರಗಳು**, ಭಾರದ್ವಜ ಪ್ರಕಾಶನ, ೨೦೦೧, ಮಂಗಳೂರು.

೫೯. ಶಿವರಾಮಕಾರಂತ, ಭಾರತೀಯ ಶಿಲ್ಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೫, ಬೆಂಗಳೂರು.

೬೦. ಶಿವರುದ್ರಸ್ವಾಮಿ ಎಸ್.ಎನ್., **ಕರ್ನಾಟಕ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ**, ಪೌರಸ್ತ್ಯ ಪ್ರಕಾಶನ, ೨೦೦೬, ತಿಪಟೂರು.

೬೧. ಶೇಷಶಾಸ್ತ್ರಿ ಆರ್., **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್, ೧೯೮೨, ಬೆಂಗಳೂರು.

೬೨. ಶಿವತಾರಕ್ ಕೆ.ಬಿ., **ಕರ್ನಾಟಕ ಪುರಾತತ್ವ ನೆಲೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೧, ಹಂಪಿ.

೬೩. ಶೀಲಾಕಾಂತ ಪತ್ತಾರ್, **ಬಾದಾಮಿ ಸಾಂಸ್ಕೃತಿ ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೦, ಹಂಪಿ.

೬೪. ಶ್ರೀಶೈಲ ಆರಾಧ್ಯ, **ಸಂಶೋಧನೆಯ ಹಾದಿಯಲ್ಲಿ**, ಆರೋಹಣ ಪ್ರಕಾಶನ, ೧೯೮೩, ಚಿತ್ರದುರ್ಗ.

೬೫. ಸೂರ್ಯನಾಥ ಯು.ಕಾಮತ್, **ಕರ್ನಾಟಕದ ಗ್ಯಾಸೆಟಿಯರ್ ಭಾಗ-೩**, ಕರ್ನಾಟಕ ಸರ್ಕಾರ, ೧೯೮೬, ಬೆಂಗಳೂರು.

೬೬. ಸೂರ್ಯನಾಥ ಯು.ಕಾಮತ್, **ಕರ್ನಾಟಕದ ಗ್ಯಾಸೆಟಿಯರ್ ಭಾಗ-೧**, ಕರ್ನಾಟಕ ಸರ್ಕಾರ, ೧೯೮೪, ಬೆಂಗಳೂರು.

೬೭. ಸತ್ಯನ್ ಬಿ.ಎನ್. (ಸಂ), **ಚಿತ್ರದುರ್ಗ ಜಿಲ್ಲಾ ಗ್ಯಾಸೆಟಿಯರ್**, ಕರ್ನಾಟಕ ಸರ್ಕಾರ, ೧೯೬೭, ಬೆಂಗಳೂರು.

೬೮. ಸದಾನಂದ ಕನವಳ್ಳಿ (ಅನು), **ಮರೆತುಹೋದ ಮಹಾಸಾಮ್ರಾಜ್ಯ** ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೮, ಹಂಪಿ.

೬೯. ಸುರೇಶ ಬಿ., **ಚಿತ್ರದುರ್ಗ ದಾವಣಗೆರೆ ಜಿಲ್ಲೆಯ ದೇವಾಲಯಗಳು**, ಸಂಶೋಧನಾ ಪ್ರಕಾಶನ, ೨೦೦೯, ಬಾಲೇನಹಳ್ಳಿ.

೭೦. ಸತ್ಯಲಿಂಗರಾಜು ಜಿ.ಆರ್., **ಪುರಾತತ್ವ ಮಾನವಶಾಸ್ತ್ರ**, ಲಕ್ಷ್ಮೀ ಪ್ರಿಂಟಿಂಗ್, ೨೦೦೬, ಮೈಸೂರು.

೭೧. ಜ್ಞಾನನಂದ ಜಿ., **ಶಿಲ್ಪದರ್ಶ ಭಾಗ-೧,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೧, ಹಂಪಿ.

೭೨. ಜ್ಞಾನನಂದ ಜಿ., **ಶಿಲ್ಪದರ್ಶ ಭಾಗ-೨,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೨, ಹಂಪಿ.

ಇಂಗ್ಲೀಷ್ ಗ್ರಂಥಗಳು ಮತ್ತು ವರದಿಗಳು

1. .**Annual Report on Indian Epigrephy,** 1962-63, 1986, A.S.I. New Delhi.
2. **Annual Report of the Mysore Archealogical,** Department for the year1947-59, Superindent Govt., Text book, 1964, Mysore.
3. A. Sundara, **Archealogical in Karnataka,** Directorate of Archealogy Museum, 1990, Mysore.
4. A. Sundara Edtor, **Indain Prehistory and Protohistory,** Directorate of Archealogy museum, Governemnt of Karnataka, 2004.
5. **Epigraphia Carnatica, vol.11,** Old Edation, 1903, Bangalore.
6. **Excavation at Banvasi,** directorate of Archealogy museum, Mysore, 1997.
7. **Excavation at Talakadu (1992-93),** Directorate of Archealogy Museum, Mysore, 1996.
8. Gururaja Rao B.K., **The Megalithic Culture in South India,** Prasaranga, University of Mysore, 1972.
9. Joshi M.C., Editor, **Indian Archaelogy,** 1988-89, A review, 1999, A.S.I., New Delhi.
10. Ragunath Bhat H.R., **Studies in Earily Coins of Karnataka**, Directorate of Archealogy and Museum, Hosapet, 2003.

ಪತ್ರಿಕೆಗಳು

೧. **ಚಿಕ್ಕ ಕಬ್ಬಿಗೆರೆಯಲ್ಲಿ ಪುರಾತನ ಶಿಲಾ ಸಮಾಧಿ ಪತ್ತೆ,** ವಿಜಯ ಕರ್ನಾಟಕ ದಿನಪತ್ರಿಕೆ, ೧೪.೧೨.೨೦೦೫, ಪು. ೧೨.

೨. **ಸಂಗೇನಹಳ್ಳಿಕೆರೆ ಬಳಿ ಚಾರಿತ್ರಿಕ ಅವಶೇಷ ಪತ್ತೆ,** ಸಂಯುಕ್ತ ಕರ್ನಾಟಕ ದಿನಪತ್ರಿಕೆ, ೫.೪.೧೯೯೬, ಪು. ೨.

೩. **ಚಿತ್ರದುರ್ಗ ಬಳಿ ಬೃಹತ್‌ಶಿಲಾಗೋರಿಯ ನೆಲೆ ಪತ್ತೆ,** ಸಂಯುಕ್ತ ಕರ್ನಾಟಕ ದಿನಪತ್ರಿಕೆ, ೫.೧.೨೦೦೧. ಪು. ೩.

೪. **ಸುಲ್ತಾನಿಪುರ : ಶಿಲಾಯುಗದ ಸಮಾಧಿ ಪತ್ತೆ,** ಪ್ರಜಾವಾಣಿ ದಿನಪತ್ರಿಕೆ, ೨೫.೫.೨೦೧೦, ಪು. ೩.

೫. **ಬಯಲು ಬಂಡೆ ರೇಖಾಕೃತಿಗಳ ಪತ್ತೆ,** ದುರ್ಗದ ಕೂಗು ದಿನಪತ್ರಿಕೆ, ೧೨.೮.೨೦೦೯, ಪು. ೨.

೬. **ಚಿತ್ರದುರ್ಗ ಬಳಿ ಶಿಲಾಕೊಡಲಿ ಪತ್ತೆ,** ಸಂಯುಕ್ತ ಕರ್ನಾಟಕ ದಿನಪತ್ರಿಕೆ, ೧೯.೩.೨೦೧೦, ಪು. ೩.

೭. **ಚಿತ್ರದುರ್ಗ ಬಳಿ ಕಬ್ಬಿಣಯುಗದ ಶಿಲಾಗೋರಿಗಳ ಪತ್ತೆ,** ಬ್ರಹ್ಮಗಿರಿ ದಿನಪತ್ರಿಕೆ, ೧೪.೭.೨೦೧೦, ಪು. ೨.

೮. **ಜಗಳೂರು ತಾಲೂಕಿನಲ್ಲಿ ಕಬ್ಬಿಣಯುಗದ ಶಿಲಾಗೋರಿಗಳ ಪತ್ತೆ,** ಜನಸಾಗರ ದಿನಪತ್ರಿಕೆ, ೧೦.೮.೨೦೧೦, ಪು. ೨.

• • •

ರೇಖಾಚಿತ್ರಗಳು

ಆದಿ ಹಳೇಶಿಲಾಯುಗದ ಆಯುಧಗಳು



ಮುಮ್ಮುಖ



ಹಿಮ್ಮುಖ

ಆದಿ ಹಳೇಶಿಲಾಯುಗದ ಆಯುಧಗಳು



ಮುಮ್ಮುಖ



ಹಿಮ್ಮುಖ

ಆದಿ ಹಳೇಶಿಲಾಯುಗದ ಆಯುಧಗಳು



ಮುಮ್ಮುಖ



ಹಿಮ್ಮುಖ


ನವ ಶಿಲಾಯುಗದ ಆಯುಧ



ಮುಮ್ಮುಖ

ನೆಲೆಗಳ ನಕ್ಷೆ


ಕೂನಬೇವು : ಬೃಹತ್ ಶಿಲಾಯುಗದ ಗೋರಿ ನೆಲೆ (ಮೋರೆಯರ ಮಟ್ಟಿ)



ತುರುವನೂರು ಬೃಹತ್ ಶಿಲಾಯುಗದ ಗೋರಿ ನೆಲೆ (ಹಾಳುರು)




ಕೂನಬೇವು ಗೊಲ್ಲರ ಹಟ್ಟಿ : ಬೃಹತ್ ಶಿಲಾಯುಗದ ಗೋರಿ ನೆಲೆ (ಪಾಂಡವರ ಬೀಳು)



ದೇವಾಲಯಗಳ ತಲನಕ್ಷೆ


ಭೋಗೇಶ್ವರ ದೇವಾಲಯ

ಸ್ಥಳ: ಯಳಗೋಡು




ಮಾಚಕ್ಕಮ್ಮ ದೇವಾಲಯ

ಸ್ಥಳ: ಯಳಗೋಡು




ಈಶ್ವರ ದೇವಾಲಯ
ಸ್ಥಳ: ಚಿಕ್ಕಪ್ಪನಹಳ್ಳಿ




ಆಂಜನೇಯ ದೇವಾಲಯ

ಸ್ಥಳ: ಮುದ್ದಾಪುರ




ಆಂಜನೇಯ ದೇವಾಲಯ

ಸ್ಥಳ: ಕಡಬನಕಟ್ಟೆ




ಕಲ್ಲೇಶ್ವರ ದೇವಾಲಯ
ಸ್ಥಳ: ತುರವನೂರು




ಈಶ್ವರ ದೇವಾಲಯ

ಸ್ಥಳ: ಬೆಳಗಟ್ಟದ ಜಾಲಗಾರಗುಡಿ



ಆಂಜನೇಯ ದೇವಾಲಯ

ಸ್ಥಳ: ಬೆಳಗಟ್ಟದ ಜಾಲಗಾರಗುಡಿ



ಛಾಯಾಚಿತ್ರಗಳು



ನವಶಿಲಾಯುಗದ ಕಲ್ಲಿನಕೊಡಲಿ
ಸ್ಥಳ: ಕೂನಬೇವು




ಆದಿಹಳೇ ಶಿಲಾಯುಗದ ದ್ವಿಮುಖ ಕೊಡಲಿ
ಸ್ಥಳ: ಕೂನಬೇವು




ಬೃಹತ್ ಶಿಲಾಯುಗ ಸಮಾಧಿ
ಸ್ಥಳ: ಹುಲ್ಲೇಹಾಳ್



ಬೃಹತ್ ಶಿಲಾಯುಗ ಸಮಾಧಿ
ಸ್ಥಳ: ಗೋಸಿರಪ್ಪನಗುಡ್ಡ




ಎತ್ತು ಮತ್ತು ಮನುಷ್ಯನಾಕೃತಿ
ಸ್ಥಳ: ಬೆಳಗಟ್ಟ (ಎದ್ದಲುಬಂಡೆ)



ಜೋಡಿಪಾದ
ಸ್ಥಳ: ಬೆಳಗಟ್ಟ (ಎದ್ದಲುಬಂಡೆ)



ಎತ್ತಿನ ರೇಖಾಕೃತಿ
ಸ್ಥಳ: ಬಗ್ಗುಲರಂಗವ್ವನಹಳ್ಳಿ



ಗುಳಿಗಳು
ಸ್ಥಳ: ಬೆಳಗಟ್ಟ (ಎದ್ದಲುಬಂಡೆ)



ಶಿವಲಿಂಗುವಿನಚಿತ್ರ
ಸ್ಥಳ: ಗೋಸಿರಪ್ಪನಗುಡ್ಡ



ಎತ್ತು ಮತ್ತು ಮನುಷ್ಯನಾಕೃತಿ
ಸ್ಥಳ: ಗೋಸಿರಪ್ಪನಗುಡ್ಡ



ಎತ್ತು ಮತ್ತು ಮನುಷ್ಯನ ಆಕೃತಿ
ಸ್ಥಳ: ದೊಡಗಟ್ಟ



ಜೋಡಿಪಾದ
ಸ್ಥಳ: ದೊಡಗಟ್ಟ



ಬೃಹತ್ ಶಿಲಾಯುಗ ಸಮಾಧಿ
ಸ್ಥಳ: ಸುಲ್ತಾನಿಪುರ



ಬೃಹತ್ ಶಿಲಾಯುಗ ಸಮಾಧಿ
ಸ್ಥಳ: ಚಿನ್ನೂರಿತಿಪ್ಪಯ್ಯನಹಟ್ಟಿ




ಬೃಹತ್ ಶಿಲಾಯುಗ ಸಮಾಧಿ
ಸ್ಥಳ: ಬೆಳಗಟ್ಟ



ಎತ್ತಿನರೇಖಾಕೃತಿ
ಸ್ಥಳ: ಬಾಗೇನಾಳ್(ಪಾಪಯ್ಯನಮಟ್ಟಿ)





ಬೃಹತ್ ಶಿಲಾಯುಗ ಸಮಾಧಿ
ಸ್ಥಳ: ಚಿಕ್ಕಕಬ್ಬಿಗೆರೆ

ಬೃಹತ್ ಶಿಲಾಯುಗ ಸಮಾಧಿ ಹತ್ತಿರ
(ನೈಸರ್ಗಿಕದೊಣೆ)
ಸ್ಥಳ: ಚಿಕ್ಕಕಬ್ಬಿಗೆರೆ





ಬೃಹತ್ ಶಿಲಾಯುಗ ಸಮಾಧಿ
ಸ್ಥಳ: ಕೋತಿಗುಡ್ಡ

ಬೃಹತ್ ಶಿಲಾಯುಗ ಸಮಾಧಿ
ಸ್ಥಳ: ತುರುವನೂರು



ಮಹಾರಥಿ ಸೀಸದ ನಾಣ್ಯ(ಕೃಪೆ: ಮೌರ್ಯ
ಮತ್ತು ಶಾತವಾಹನರ ಯುಗ)
ಸ್ಥಳ: ಚಿಪ್ಪಿನಕೆರೆ




ಸಂಗೇನಹಳ್ಳಿಕೆರೆ ನಡುಗಡ್ಡೆ



ಬೂದಿದಿನ್ನೆ
ಸ್ಥಳ: ಚಿಪ್ಪಿನಕೆರೆ



ಶಾತವಾಹನರ ಮಡಕೆಗಳು
ಸ್ಥಳ: ಚಿಪ್ಪಿನಕೆರೆ



ಮಹಾರಥಿ ಸೀಸದ ನಾಣ್ಯ
ಸ್ಥಳ: ಚಿಪ್ಪಿನಕೆರೆ



ಶಾಸನ
ಸ್ಥಳ: ಬಾಗೇನಾಳ್



ಶಾಸನೋಕ್ತ ವೀರಗಲ್ಲು
ಸ್ಥಳ: ಹಾಯ್ಕಲ್



ಅಪ್ರಕಟಿತ ಶಾಸನ
ಸ್ಥಳ: ದೊಡಗಟ್ಟ




ಅಪ್ರಕಟಿತ ಗೋಶಾಸನ
ಸ್ಥಳ: ಕಡಬನಕಟ್ಟೆ




ಶಾಸನೋಕ್ತ ಮಾಸ್ತಿಗಲ್ಲು
ಸ್ಥಳ: ಯಳಗೋಡು



ವೀರಗಲ್ಲು
ಸ್ಥಳ: ದೊಡಗಟ್ಟ



ವೀರಗಲ್ಲು
ಸ್ಥಳ: ದೊಡಗಟ್ಟ



ವೀರಗಲ್ಲು
ಸ್ಥಳ: ದೊಡಗಟ್ಟ



ವೀರಗಲ್ಲು
ಸ್ಥಳ: ಬಾಗೇನಾಳ್



ವೀರಗಲ್ಲು
ಸ್ಥಳ: ಕೂನಬೇವು



ವೀರಸತಿಗಲ್ಲು
ಸ್ಥಳ: ತುರುವನೂರು



ಕೋಟೆಗೋಡೆ
ಸ್ಥಳ: ಸಿದ್ದವ್ವನದುರ್ಗ



ಬುರುಜು
ಸ್ಥಳ: ಸಿದ್ದವ್ವನದುರ್ಗ



ಬುರುಜು
ಸ್ಥಳ: ತುರುವನೂರು



ಕೋಟೆಗೊಡೆ
ಸ್ಥಳ: ತುರುವನೂರು




ಬುರುಜು
ಸ್ಥಳ: ವೀರಮದಕರಿಪುರ



ಬೈರವಿ
ಸ್ಥಳ: ಯಳಗೋಡು



ನರಸಿಂಹ
ಸ್ಥಳ: ಆಂಜನೇಯ ದೇವಾಲಯದ ಕಂಬದಲ್ಲಿ(ಚಿಕ್ಕಪ್ಪನಹಳ್ಳಿ)



ಬಲರಾಮ
ಸ್ಥಳ: ಆಂಜನೇಯ ದೇವಾಲಯದ ಕಂಬದಲ್ಲಿ(ಚಿಕ್ಕಪ್ಪನಹಳ್ಳಿ)



ಗಜಶಿಲ್ಪ
ಸ್ಥಳ: ಹಿರೇಕಬ್ಬಿಗೆರೆಯ ಕಲ್ಲೇಶ್ವರ ದೇವಾಲಯದಲ್ಲಿ



ಗಜಲಕ್ಷ್ಮೀ
ಸ್ಥಳ: ದೊಡಗಟ್ಟ



ನಾಗರಹಾವು
ಸ್ಥಳ: ಮಾಚಕಮ್ಮ ದೇವಾಲಯದ ಭಿತ್ತಿಯಲ್ಲಿ



ಹೋರಾಡುತ್ತಿರುವ ದೃಶ್ಯ
ಸ್ಥಳ: ಮಾಚಕಮ್ಮ ದೇವಾಲಯದ ಭಿತ್ತಿಯಲ್ಲಿ



ಮಿಥುನ ಶಿಲ್ಪ
ಸ್ಥಳ: ಮಾಚಕಮ್ಮ ದೇವಾಲಯದ ಭಿತ್ತಿಯಲ್ಲಿ



ನಾಗಶಿಲ್ಪ
ಸ್ಥಳ: ಬೋಗೇಶ್ವರ ದೇವಾಲಯದ ಮುಂಭಾಗ



ಸೂರ್ಯನ ಶಿಲ್ಪ
ಸ್ಥಳ: ಈಶ್ವರದೇವಾಲಯದ
ಭಿತ್ತಿಯಲ್ಲಿ(ಜಾಲಗಾರಗುಡಿ)



ವಿಷ್ಣು ಮತ್ತು ಆನೆ, ಕುಂಟಾಟ ಅಡುತ್ತಿರುವುದು
ಸ್ಥಳ: ಈಶ್ವರದೇವಾಲಯದ
ಭಿತ್ತಿಯಲ್ಲಿ(ಜಾಲಗಾರಗುಡಿ)



ಬೈರವ
ಸ್ಥಳ: ಈಶ್ವರ ದೇವಾಲಯದ
ಭಿತ್ತಿಯಲ್ಲಿ(ಜಾಲಗಾರಗುಡಿ)



ಸಪ್ತಮಾತೃಕೆ ಶಿಲ್ಪ
ಸ್ಥಳ: ಬಾಗೇನಾಳ್.



ಚಂದ್ರಮೌಳೇಶ್ವರ
ಸ್ಥಳ: ತುರುವನೂರು



ಗಂಗಾಧರೇಶ್ವರ
ಸ್ಥಳ: ತುರುವನೂರು





ರಾಮಲಿಂಗ
ಸ್ಥಳ: ತುರುವನೂರು

ರಾಮೇಶ್ವರ
ಸ್ಥಳ: ಹಾಯ್ಕಲ್





ನಂದಿಶಿಲ್ಪ
ಸ್ಥಳ: ಗೋಸಿರಪ್ಪನಗುಡ್ಡ

ನಂದಿಶಿಲ್ಪ
ಸ್ಥಳ: ಬೋಗೇಶ್ವರ ದೇವಾಲಯ



ನಂದಿಶಿಲ್ಪ
ಸ್ಥಳ: ರಾಮಲಿಂಗ ದೇವಾಲಯದ ಮುಂಭಾಗ



ನಂದಿಶಿಲ್ಪ
ಸ್ಥಳ: ರಾಮಲಿಂಗೇಶ್ವರ ದೇವಾಲಯದ ಮುಂಭಾಗ



ಪಾಳೆಯಗಾರರ ಕಾಲದ ಬಾಗಿಲು
ಸ್ಥಳ: ಚಿಕ್ಕಗೊಂಡನಹಳ್ಳಿ



ಆಂಜನೇಯ ದೇವಾಲಯ
ಸ್ಥಳ: ಚಿಕ್ಕಪ್ಪನಹಳ್ಳಿ



ಈಶ್ವರ ದೇವಾಲಯ
ಸ್ಥಳ: ಚಿಕ್ಕಪ್ಪನಹಳ್ಳಿ



ಆಂಜನೇಯ ದೇವಾಲಯದ ಪಾರ್ಶ್ವನೋಟ
ಸ್ಥಳ: ಚಿಕ್ಕಪ್ಪನಹಳ್ಳಿ



ಬೋಗೇಶ್ವರ ದೇವಾಲಯ
ಸ್ಥಳ: ಯಳಗೋಡು



ಅಧಿಷ್ಠಾನ (ಬೋಗೇಶ್ವರ ದೇವಾಲಯ)
ಸ್ಥಳ: ಯಳಗೋಡು



ಈಶ್ವರ ದೇವಾಲಯ
ಸ್ಥಳ: ವೀರಮದಕರಿಪುರ



ಈಶ್ವರ ದೇವಾಲಯದ ಪಾರ್ಶ್ವನೋಟ
ಸ್ಥಳ: ವೀರಮದಕರಿಪುರ



ಪಾಳೆಯಗಾರರ ಕಾಲದ ಕಬ್ಬಿಣದ
ಆಯುಧಗಳು